
ರಂಜನೆ ಬೋಧನೆ ಪ್ರಚೋದನೆ


ಲಂಕೇಶ್

ಜುಲೈ 24, 2013 ಪುಟ 20 ರೂ. 14/-


ಸಂದರ್ಶನ
ಬಿ.ಎಂ.ರೋಹಿಣಿ

ರಂಗತಂಡ
ಭಾವೈಕ್ಯತಾ ವೇದಿಕೆ





ಕುಮಾರಸ್ವಾಮಿ
ಸಂದರ್ಶನ



ಮಾನ್ಯ ಪ್ರೇಮಿ
ವಾಮನಾಚಾರ್ಯ



ಮಲೈಮಹದೇಶ್ವರ
ಭ್ರಷ್ಟ
ಜಯವಿಭವ ಸ್ವಾಮಿ



ವನ್ಯಜೀವಿ
ಪೀಡಕ
ಅನಿಲ್ ಕುಂಬ್ಳೆ

ಬಾಕ್ಸಾಫೀಸ್ ಬಾದ್‌ಶಾಹ

ದರ್ಶನ್ ವಹಿವಾಟು
ಎಷ್ಟಿದೆ ಗೊತ್ತಾ?

ಅಲ್ಲಿ ಕಂಡದ್ದು ಯಾರ ಮುಖ..?



ಸಂಪಾದಕ

ಪಾರ್ವತೀಶ ಬಿಡಿ ಚಿತ್ರಗಳು


ಇದು ನನ್ನ ಭ್ರಮೆಯೂ ಇರಬಹುದು..!

ಕೆಲ ವಾರಗಳ ಹಿಂದೆ ಯಾವುದೋ ಕೆಲಸದ ಮೇಲೆ ಹೊರಗಡೆ ಹೋಗಿದ್ದಾಗ ಟ್ರಾಫಿಕ್ ಸಿಗ್ನಲ್ ಒಂದರ ಬಳಿ ನಮ್ಮ ಗಾಡಿ ನಿಂತಿತ್ತು, ಗ್ರೀನ್ ಸಿಗ್ನಲ್‌ಗಾಗಿ ಕಾಯುತ್ತಿದ್ದಾಗ ಜೀಬ್ರಾ ಕ್ರಾಸಿಂಗ್ ಮೂಲಕ ಹಾದು ರಸ್ತೆ ದಾಟುತ್ತಿದ್ದ ನೂರಾರು ಜನರ ಗುಂಪಿನಲ್ಲಿ ನನಗೊಂದು ಪರಿಚಿತ ಮುಖ ಅಸ್ಪಷ್ಟವಾಗಿ ಕಂಡಂತಾಯಿತು.

ಮೊದಲಿಗೆ ಇರಲಿಕ್ಕಿಲ್ಲ ಅಂದುಕೊಂಡೆ.

ನಂತರ ಯಾಕಿರಬಾರದು ಅಂತಲೂ ಅನ್ನಿಸಿತು. ನನ್ನಲ್ಲಿ ಆ ಭಾವನೆ, ಶಂಕೆ ಮೂಡಿಸಿದ ಕೊನೆಗೂ ಖಚಿತವಾಗದ ಆ ವ್ಯಕ್ತಿಯ ಮುಖ...

ಸಿರಿಮನೆ ನಾಗರಾಜರದ್ದು!



ಕರ್ನಾಟಕ ಪೊಲೀಸರ ದಾಖಲೆಗಳ ಪ್ರಕಾರ ಸಿರಿಮನೆ ಮಲೆನಾಡಿನ ಕಾಡುಗಳಲ್ಲಿ ನಕ್ಸಲಿಯರೊಂದಿಗೆ ಇದ್ದಾರೆನ್ನಲಾಗಿದೆ. ಆದ್ದರೆ ಅದೇ ಪ್ರಾಂತ್ಯದ ಪತ್ರಕರ್ತರು, ಜನ ಸಾಮಾನ್ಯರು ಹಾಗೂ ಜನಪರ ಸಂಘಟನೆಗಳ ಕಾರ್ಯಕರ್ತರ ಅನಿಸಿಕೆ ಪ್ರಕಾರ ನಕ್ಸಲರ ಸಶಸ್ತ್ರ ಹೋರಾಟದೊಂದಿಗೆ ಸಿರಿಮನೆ ಭಿನ್ನಾಭಿಪ್ರಾಯ ತಾಳಿ ದೂರ ಸರಿದಿದ್ದಾರೆ. ಅಂತಾ ಸಿರಿಮನೆಯನ್ನು ನಾನೊಂದು ದಿನ ಪಾದಚಾರಿಗಳ ಗುಂಪಿನಲ್ಲಿ ನೋಡಿದೆನಾ ಎಂಬ ಗೊಂದಲ ಈಗಲೂ ಇದೆ.

ಸಿರಿಮನೆ ನಾಗರಾಜ್ ನನಗಾಗಲಿ ಅಥವಾ ಪಿ.ಲಂಕೇಶ್, ತೇಜಸ್ವಿಯಾದಿಯಾಗಿ ಕರ್ನಾಟಕದ ಅನೇಕ ಪ್ರಗತಿಪರರಿಗೆ ಅಪರಿಚಿತ ವ್ಯಕ್ತಿಯೇನಾಗಿರಲಿಲ್ಲ.


ಕೊಪ್ಪದಲ್ಲಿ ಅನೇಕ ವರ್ಷ ಇದ್ದ ಸಿರಿಮನೆ ಅಲ್ಲೇ 'ಮುಂಜಾವು' ಎಂಬ ಪತ್ರಿಕೆ ನಡೆಸುತ್ತಿದ್ದರು. ತೊಂಬತ್ತರ ದಶಕದಲ್ಲಿ ಅವರು ಸಂಘಟಿಸಿದ್ದ ಗುಬ್ಬಗದ್ದೆ ಅರಣ್ಯ ರಕ್ಷಣೆಗಾಗಿನ ಹೋರಾಟ ರಾಜ್ಯಾದ್ಯಂತ ಸಂಚಲನ ಮೂಡಿಸಿತ್ತು. ಸದಾ ಜನಸಾಮಾನ್ಯರ ಕಷ್ಟಗಳಿಗೆ ಮಿಡಿಯುತ್ತಿದ್ದ, ಭ್ರಷ್ಟರ ವಿರುದ್ಧ ಸಿಡಿಯುತ್ತಿದ್ದ ಸಿರಿಮನೆ ಬಹುಶಃ ಈಗೊಂದು ದಶಕದ ಹಿಂದೆ ಎಂದು ಕಾಣುತ್ತದೆ... ದಿಢೀರನೆ ಕಣ್ಮರೆಯಾದರು.

ಆಗ ಮಲೆನಾಡಿನಲ್ಲಿ ನಕ್ಸಲರ ಚಟುವಟಿಕೆಗಳು ಚಿಗುರೊಡೆಯಲು ಶುರುವಾಗಿತ್ತು. ಸಿರಿಮನೆ ನಕ್ಸಲರ ಮನೆ ಸೇರಿಕೊಂಡರೆಂಬ ಸುದ್ದಿ ಹರಡಿತು.

ಆದರೆ 2004ರ ಜೂನ್‌ನಲ್ಲಿ ನಾವೊಂದಿಷ್ಟು ಪತ್ರಕರ್ತರು ನಕ್ಸಲರ ಆಹ್ವಾನದ ಮೇರೆಗೆ ಕಾಡಿಗೆ ಹೋಗಿದ್ದಾಗ ಅಲ್ಲಿದ್ದ ನಕ್ಸಲರ ಗುಂಪಿನಲ್ಲಿ ನಮಗೆ ಸಿರಿಮನೆ ನಾಗರಾಜ್ ಕಂಡಿರಲಿಲ್ಲ.

ಇದಾದ ನಂತರ ಸಾಕೇತ್ ಹಾಗೂ ಹಲವು ಹೋರಾಟಗಾರರು ಪೊಲೀಸರ ಗುಂಡಿಗೆ ಬಲಿಯಾದರು. ಜೊತೆ ಜೊತೆಗೆ ಕೆಲ ಪೊಲೀಸರ ಹಾಗೂ ನಾಗರಿಕರ ಸಾವುಗಳೂ ಆಗಿ ಹೋದವು. ಇವೆಲ್ಲಾ ಆದ ಮೇಲೆ ಬಹುಶಃ ಈಗೊಂದು ಆರೆಂಟು ವರ್ಷಗಳ ಹಿಂದೆ ಕರ್ನಾಟಕದ ನಕ್ಸಲಿಯರ ನಡುವೆ ಸೈದ್ಧಾಂತಿಕ ಭಿನ್ನಾಭಿಪ್ರಾಯಗಳು ಶುರುವಾಗಿರುವ ಸುದ್ದಿಗಳು ಹಬ್ಬತೊಡಗಿತು. ಒಂದು ಗುಂಪಿನ ಕಾರ್ಯಕರ್ತರದ್ದು "ಸಶಸ್ತ್ರ ಹೋರಾಟವೇ ಪ್ರಧಾನ, ಬೇರೆಲ್ಲಾ ಜನ, ಸಂಘಟನೆಗಳು ಸಶಸ್ತ್ರ ಹೋರಾಟವನ್ನು ಬಲಪಡಿಸುವ ದಿಸೆಯಲ್ಲೇ ಕಾರ್ಯ ನಿರ್ವಹಿಸಬೇಕೆಂಬ" ನಿಲುವು.

ಮತ್ತೊಂದೆಡೆ ಭಿನ್ನಮತೀಯರು "ಸಾಮಾಜಿಕ ಬದಲಾವಣೆಗಳಿಗೆ ಹೋರಾಟ ಅನಿವಾರ್ಯ ನಿಜ. ಆದರೆ ಸಶಸ್ತ್ರ ಹೋರಾಟ ಎಂಬುದೇ ಒಂದು ಗೀಳಾಗಿ, ಅದು ಜನಸಾಮಾನ್ಯರ ಪಾಲ್ಗೊಳ್ಳುವಿಕೆಗೂ ಒಂದು ತೊಡಕಾಗಿ ಪರಿಣಮಿಸುತ್ತಿದೆ. ಸಾಮೂಹಿಕ ಆಂದೋಲನಗಳ ಮೂಲಕ ಕಟ್ಟಬಹುದಾದ ಹೋರಾಟಗಳನ್ನು ನಿರ್ಲಕ್ಷಿಸುವುದಾಗಲಿ ಅಥವಾ ಅಂತಹ ಹೋರಾಟಗಳು ಬೆಳೆಯುತ್ತಿದ್ದಾಗ ಅವನ್ನೆಲ್ಲಾ ಸಾರಾಸಗಟಾಗಿ ಸಶಸ್ತ್ರ ಹೋರಾಟದತ್ತ ಏಕಾಏಕಿ ನಿರ್ದೇಶಿಸುವುದಾಗಲಿ ಸರಿಯಲ್ಲ" ಎಂಬ ಅಭಿಪ್ರಾಯ ಮಂಡಿಸಿತು ಎನ್ನಲಾಗಿದೆ.




ಬಹಳ ಮುಖ್ಯವಾಗಿ 20ನೇ ಶತಮಾನದ ಮಧ್ಯದ ಕಾಲದಲ್ಲಿ ಮಾವೊ ತ್ಸೆ ತುಂಗ್ ಚೀನಾದಲ್ಲಿ ಅಳವಡಿಸಿಕೊಂಡ ಕಾರ್ಯ ವಿಧಾನಗಳು 21ನೇ ಶತಮಾನದ ಆಧುನಿಕ ಇಂಡಿಯಾಗೆ 'ಅಲ್ಲಿ ಹೇಗಿತ್ತೋ ಇಲ್ಲಿಯೂ ಹಾಗಿರಲಿ' ಎಂದು ರೆಡಿಮೇಡ್ ಸೂತ್ರದಂತೆ ಅಳವಡಿಸಲು ಆಗುವುದಿಲ್ಲವೆಂಬ ಭಿನ್ನ ನಿಲುವುಗಳು ವ್ಯಕ್ತವಾದವೆನ್ನಲಾಗಿದೆ.

ಇಂತಹ ಭಿನ್ನಾಭಿಪ್ರಾಯದ ಚರ್ಚೆಗಳು ಇಂಟರ್‌ನೆಟ್‌ನಲ್ಲೂ ನೋಡಲು ಸಿಗುತ್ತವೆ.

ಈ ತರದ ಭಿನ್ನಾಭಿಪ್ರಾಯಗಳೆಲ್ಲಾ ಬೆಳೆಯುತ್ತಾ ಕೊನೆಗೆ ಕರ್ನಾಟಕದಲ್ಲಿ ನಕ್ಸಲಿಯ ಪಕ್ಷ ವಿಭಜನೆಯೇ ಆಯಿತೆಂದು ಹೇಳಲಾಗುತ್ತಿದೆ.

ಬಹುತೇಕ ಸಿರಿಮನೆ ನಾಗರಾಜ್, ನೂರ್ ಶ್ರೀಧರ್ ಇನ್ನೂ ಮುಂತಾದವರು ಆಗಲೇ ನಕ್ಸಲರ ಗುಂಪು ತ್ಯಜಿಸಿ ಹೊರ ಬಂದಿರಲಿಕ್ಕೂ ಸಾಕು.

ಕವಿ ಅಡಿಗರಿಗೆ 'ಚಿಂತಾಮಣಿಯಲ್ಲಿ ಕಂಡ ಮುಖ'ದಂತೆ ನನಗೆ ಟ್ರಾಫಿಕ್ ಸಿಗ್ನಲ್ ಹತ್ತಿರ ಕಂಡ ಭ್ರಮೆ ಮೂಡಿಸಿದ ಸಿರಿಮನೆ ನಾಗರಾಜ್‌ರ ಮುಖದ ಪ್ರಸ್ತಾಪ ಈಗೇಕೆ ಮಾಡುತ್ತಿದ್ದೇನೆಂದರೆ...



ನೂರ್‌ಶ್ರೀಧರ್ ಪುಸ್ತಕ

ಕರ್ನಾಟಕದ ಹೊಸ ಕಾಂಗ್ರೆಸ್ ಸರ್ಕಾರದ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಗೃಹಮಂತ್ರಿ ಕೆ.ಜೆ. ಜಾರ್ಜ್ ನಕ್ಸಲರ ಕುರಿತಂತೆ ಕೆಲವು ಹೇಳಿಕೆಗಳನ್ನು ನೀಡುತ್ತಿದ್ದಾರೆ.

'ನಕ್ಸಲರು ಸಶಸ್ತ್ರ ಹೋರಾಟ ತ್ಯಜಿಸಿ ಮುಖ್ಯವಾಹಿನಿಗೆ ಬರುವುದಾದರೆ ಸರ್ಕಾರ ಅಂತವರಿಗೆ ಅವಕಾಶ ನೀಡಲಿದೆ. ಜನರ ಸಮಸ್ಯೆಗಳನ್ನು ಪರಿಹರಿಸಲು ಮಾತುಕತೆಗೂ ಸಿದ್ಧವಿದೆ' ಎಂದಿದ್ದಾರೆ ಸಿದ್ದರಾಮಯ್ಯ.

ಈಗ ಕಾಡಿನಲ್ಲಿರುವ ಹಾಗೂ ಅಲ್ಲಿಂದ ಹೊರಬಂದಿರುವ ಹೋರಾಟಗಾರರು ಸರ್ಕಾರದ ಈ ಕರೆಯ ಬಗ್ಗೆ ಯಾಕೆ ಗಂಭೀರವಾಗಿ ಯೋಚಿಸಬಾರದೆಂದು ನಮ್ಮ ತಂಡಕ್ಕೆ ಅನಿಸುತ್ತಿದೆ. ಹಿಂಸೆ ಪ್ರತಿಹಿಂಸೆಯ ಚಕ್ರ ಪುನಃ ತಿರುಗಲು ಶುರುವಾದರೆ ಜನರಾಗಲಿ, ಜನಪರ ಸಂಘಟನೆಗಳಾಗಲೀ ಸಿನಿಮಾ ನೋಡಿದಂತೆ ಅವನ್ನೆಲ್ಲಾ ನೋಡಿಕೊಂಡು ಸುಮ್ಮನಿರಬೇಕಾಗುತ್ತದೆಯೇ ವಿನಃ ಯಾರದ್ದೇ ಮಧ್ಯ ಪ್ರವೇಶಕ್ಕೂ ಅಲ್ಲಿ ಅವಕಾಶವಿರುವುದಿಲ್ಲ. ಈ ನಕ್ಸಲರ ದೊಡ್ಡ ಸಮಸ್ಯೆ ಏನೆಂದರೆ ಗೆಲ್ಲಲು ಇಡೀ ಜಗತ್ತೇ ತಮ್ಮ ಮುಂದಿದೆ ಎಂದು ಭಾವಿಸಿರುತ್ತಾರೆ. ಆದರೆ ಅದೇ ಸಮಯದಲ್ಲಿ ತಮ್ಮ ಹಿಂದೇನೂ ಯಾರಿದ್ದಾರೆ ಅಂತಾ ನೋಡಿಕೊಳ್ಳುವುದಿಲ್ಲ, ಇಲ್ಲಿ ಯಾರೂ ನಕ್ಸಲರಿಗೆ ... ಕುರಿತಂತೆ ಇರುವ ಕಾಳಜಿ ಹಾಗೂ ಬದ್ಧತೆಗಳ ಬಗ್ಗೆ ಅನು... ಪಡಬೇಕಿಲ್ಲ, ಆದರೆ practicality ಇರದ ಯಾವು... ಹೋರಾಟ, ಚಟುವಟಿಕೆಗಳೂ ನಿರೀಕ್ಷಿಸುವ ರೀತಿ ... ತೀವ್ರತೆ ಹಾಗೂ ಮುನ್ನಗೆತಗಳನ್ನು ಕಾಣುವುದು ಅಸಾಧ್ಯ...

ಕಾಲ ಅದೆಷ್ಟು ಬೇಗ ಸರಿದು ಹೋಗಿದೆ ನೋ...

ಭಾಸ್ಕರ್, ಪಾರ್ವತಿ, ಹಾಜಿಮಾ, ಸಾಕೇತ್, ದಿನ... ಮನೋಹರ್, ಯಲ್ಲಪ್ಪ ಪರಮೇಶ್ವರ್, ಸುಂದರೇಶ್, ರಾಜ... ಮುಂತಾದವರು ಜೀವ ಚೆಲ್ಲಿ ವರ್ಷಗಳೇ ಸಂದು ಹೋ...


ದೇವಣ್ಣ, ನಂದಕುಮಾರ್, ಚಂದ್ರಶೇಖರ್ ಗೊರಬ... ಆಶಾ ಮುಂತಾದವರು ಜೈಲಿನಲ್ಲಿದ್ದಾರೆ. ಪ್ರಚಂಡ ಸಂಘ... ಸಾಮರ್ಥ್ಯವಿದ್ದ ನಿಲಗುಳಿ ಪದ್ಮನಾಭನೆಂಬ ಯುವಕ ... ತಿಂದಿದ್ದಾನೆ. ಕವಿ ಬಿ.ಜೆ.ಕೃಷ್ಣಮೂರ್ತಿ, ಹೊಸಗದ್ದೆ ಪ್ರಭಾ, ವಿಕ್ರಮ್ ... ಎಂಬ ಕೇಳಿರುವ ಹೆಸರುಗಳು ಹಾಗೂ ಖಚಿತವಾಗಿ ಗೊತ್ತಾಗದ ... ಅನೇಕರು ಈಗಲೂ ಮಲೆನಾಡಿನ ಕಾಡುಗಳಲ್ಲಿದ್ದಾರೆ.

ಭಿನ್ನಾಭಿಪ್ರಾಯ ಹೊಂದಿದ್ದವರೆಲ್ಲಾ ಹೊರಬಂದು ಓದು, ಬರವ... ಇನ್ನಿತರ ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರಬಹುದು. ಬ... ಅಂತವರಲ್ಲಿ ಒಬ್ಬರಿರಬಹುದಾದ ನೂರ್ ಶ್ರೀಧರ್ ಬರೆದಿರುವ 'ಭಾ... ಕ್ರಾಂತಿ ಹಾಗೂ ಮಾವೋವಾದಿ ಚಳವಳಿ' ಎಂಬ ಪುಸ್ತಕವನ್ನು ಕಳೆದ ... ನಾನೇ ಚಾರು ಪ್ರಕಾಶನದ ಮೂಲಕ ಪ್ರಕಟಿಸಿದ್ದೆ. ಆ ಪುಸ್ತಕದಲ್ಲಿ ... ಪ್ರಸ್ತಾಪಿಸಿರುವ ಹಲ ವಿಚಾರಗಳಿವೆ.

ಇಲ್ಲಿ ಮೇಲೆ ಕಾಣಿಸಿರುವ ಅನೇಕ ಹೆಸರು... ಹಾಗೂ ಆ ವ್ಯಕ್ತಿಗಳೆಲ್ಲಾ ಕರ್ನಾಟಕದ ಸಾಮಾಜಿಕ ಬದ... ಮುಖ್ಯವಾಹಿನಿಯಲ್ಲಿದ್ದವರೇ. ಈ ನಾಡಿನ ಬಹು... ಪ್ರಗತಿಪರರಿಗೆ ಇವರೆಲ್ಲರ ಪರಿಚಯವಿತ್ತು. ಗಿ... ನುಡಿಸುತ್ತಿದ್ದ ಚೆಸ್ ಆಟದ ವ್ಯಾಮೋಹಿ ನೂರ್ ಶ್ರೀ... ಕವಿ ಬಿ.ಜೆ. ಕೃಷ್ಣಮೂರ್ತಿ, ಸದಾ ಜನಸಾಮಾನ್ಯರ ಒ... ಬಯಸುತ್ತಾ ಮಲೆನಾಡಿನ ಆಗುಹೋಗುಗಳ ಬಗ್ಗೆ ಕ... ತೋರುತ್ತಿದ್ದ ಸಿರಿಮನೆ ನಾಗರಾಜ್, ನಂದಕುಮ... ಉತ್ತರ ಕರ್ನಾಟಕದ ಯುವಜನರ ಕಣ್ಮಣಿಯ... ಶಿಕ್ಷಕ ಗೊರಬಾಳ್ ಮುಂತಾದವರೆಲ್ಲಾ ಈಗ್ಗೆ ಹತ್ತ... ವರ್ಷಗಳ ಹಿಂದಿನ ತನಕ ಎಲ್ಲರಿಗೂ ಕಾಣ ಸಿಗುತ್ತಿದ್ದ... ಆಗಿದ್ದರು..

ನಂತರ ಇವರೆಲ್ಲಾ ಭಿನ್ನ ರಾಜಕೀಯ ಹೋರಾ... ಹಾದಿ ಆರಿಸಿಕೊಂಡರು. ಕಣ್ಣಿಗೆ ಕಾಣದಂತಾಗಿಬಿಟ್ಟ...

ಇದಕ್ಕೆ ಇನ್ನೊಂದು ಆಯಾಮವೂ ಇದೆ ಎನಿಸ...



ಸಾಕೇತ್

ಯಾರಾದರೂ ಒಮ್ಮೆ ನಕ್ಸಲರ ಹೋರಾಟದಲ್ಲಿ ಸೇರಿ... ಸಾಕು. ಸಾಲುಸಾಲಾಗಿ ಪೊಲೀಸರ ಕೇಸು... ಬೀಳತೊಡಗುತ್ತದೆ. ಒಂದು ನಿರ್ದಿಷ್ಟ ನಕ್ಸಲ್ ಗೆರಿಲ... ಕಾರ್ಯಾಚರಣೆಯಲ್ಲಿ ಅಂತವರು ಖುದ್ದಾಗಿ ಭಾಗಿಯಾಗಿದ... ಅಥವಾ ಇಲ್ಲವೋ ಎಂಬ ಖಚಿತ ಮಾಹಿತಿ ಪೊಲೀಸ... ಕೆಲವೊಮ್ಮೆ ಸುಲಭವಾಗಿ ಸಿಗುವುದಿಲ್ಲ. ಇದಲ್ಲದೆ ಪೊಲಿ... ಕೂಡಾ ಅಭ್ಯಾಸ ಬಲದಿಂದೆಂಬಂತೆ ತಮಗೆ ಗೊತ್ತ... ಹೆಸರುಗಳನ್ನೆಲ್ಲಾ ಕೇಸಿನಲ್ಲಿ ಸೇರಿಸುತ್ತಾ ಹೋಗುವ ಪರಿಪಾ... ಇದೆ. ಇದರಿಂದಾಗಿ ನಕ್ಸಲರ ಸಶಸ್ತ್ರ ಹೋರಾಟ... ಮುಖ್ಯವಾಹಿನಿಯೊಳಗೆ ಬಂದು ಸಾಮಾಜಿಕ ಚಳವಳಿ... ತೊಡಗಿಸಿಕೊಳ್ಳಬಯಸುವವರಿಗೆ ಈ ಪೊಲೀಸರ ವಿವೇಚನಾರಹಿತ ಕೇಸು... ಒಂದು ದೊಡ್ಡ ತೊಡಕಾಗಿ ಬಿಡುವುದುಂಟು. ಅಂತವರಿಗೆ ಒಂ... ಭೂಗತರಾಗಿಯೇ ಉಳಿಯಬೇಕು. ಇಲ್ಲ ಹೊರಬಂದು ಪೊಲೀಸು, ಕೋ... ಜೈಲುಗಳ ಪಾಲಾಗಬೇಕೆಂಬ ಎರಡೇ ಆಯ್ಕೆಗಳು ಉಳಿಯುತ್ತವೆ. ಇವೆರ... ಹೊರತಾದ ಕೊಂಚ ಸಹನೀಯವಾದ ಪಾಲಿಸಿಗಳನ್ನು ಸರ್ಕಾರ ರೂಪಿಸು... ಆದಲ್ಲಿ ಈಗಿರುವ ಪರಿಸ್ಥಿತಿ ಕೊಂಚ ಬದಲಾದರೂ ಆಗಬಹುದೇನೊ...

ಇಲ್ಲಿ ಒಂದು ವಿಚಾರ ಸ್ಪಷ್ಟವಾಗಿ ಹೇಳಿಬಿಡಬೇಕು. ಸಿದ್ದರಾಮಯ್ಯ ಕೆ... ರಾಜಕಾರಣಿಯಲ್ಲ, ಹಾಗಂತ ಅವರು ಮುಖ್ಯಮಂತ್ರಿಯಾದ ತಕ್ಷಣ ಕರ್ನಾ... ಸಮಸ್ತ ಸಮಸ್ಯೆಗಳು ಬಗೆಹರಿದು ಬಿಡುತ್ತವೆಂಬ ಭ್ರಮೆಯೂ ಯಾ... ಇರಬೇಕಾಗಿಲ್ಲ. ಈ ತಕ್ಷಣದಲ್ಲಿ ಇದೆಲ್ಲಕ್ಕಿಂತ ಮುಖ್ಯವಾಗಿ ಕಾಣುತ್ತಿರು... ಕರ್ನಾಟಕದಲ್ಲಿ ಕೋಮುವಾದಿ ಟೆರರಿಸ್ಟರಿಗೆ ಹಿನ್ನಡೆಯಾಗಿರುವುದು. ... ಪುನಃ ಚಿಗುರಿಕೊಳ್ಳುವ ಮುನ್ನ ಈಗ ನಿತ್ರಾಣಗೊಂಡಂತೆ ಕಾಣು... ಪ್ರಗತಿಪರ ಆಂದೋಲನಗಳಿಗೆ ಬಲ ತುಂಬುವ ಕೆಲಸ ತುರ್ತಾಗಿ ಆಗಬ...

ಆ ಗುರಿ ಸಾಧಿಸಲು ಬದ್ಧತೆ ಹಾಗೂ ಛಲವಿರುವ ನೂರಾರು ... ನಾಯಕರ, ಕಾರ್ಯಕರ್ತರ ಅಗತ್ಯವಿದೆ.

ಇರುವ ಸಮಯ, ಶಕ್ತಿ ಹಾಗೂ ಅವಕಾಶಗಳನ್ನು ಕಡೆಗಣಿಸದೆ ... ಮಾಡಬಹುದಾದ, ನಿರ್ವಹಿಸಬೇಕಾದ ಕರ್ತವ್ಯ ಇದೆಂಬ ಭಾವನೆ ಎಲ್ಲ... ಮೂಡಿದ್ದೇ ಆದಲ್ಲಿ..

ಆಚಾನಕ್ಕಾಗಿ ಟ್ರಾಫಿಕ್ ಸಿಗ್ನಲ್‌ನಲ್ಲಿ ಕಂಡಂತೆ ಭಾಸವಾದ ಸಿ... ನಾಗರಾಜರ ಮುಖ..

ಮುಂದೆಂದೊ ಒಂದು ದಿನ ಸಮಾಜದ ಮುಖ್ಯವಾಹಿನಿ... ಕಾಣುವಂತಾಗಬಹುದು... ಆಗ ಅವರೊಂದಿಗೆ ಇನ್ನೂ ಅನೇ... ಇರುವಂತಾದರೆ..!

ಓದುಗರಲ್ಲಿ ಒಂದು ಮನವಿ...

'ನಮಗೆ ಪತ್ರಿಕೆ ಸರಿಯಾಗಿ ಸಿಗುತ್ತಿಲ್ಲ' ಎಂಬ ಕೆಲ ಓದುಗರ ಆಕ್ಷೇಪಗಳು ಆಗಾಗ್ಗೆ ನಮ್ಮ ಕಚೇರಿತನಕ ತಲುಪುತ್ತಿದೆ. ಲಂಕೇಶ್‌ಗೆ ಎಲ್ಲಾ ಜಿಲ್ಲಾ, ತಾಲ್ಲೂಕು ಹಾಗೂ ಪುಟ್ಟ ಟೌನ್ ಸೆಂಟರ್‌ಗಳೂ ಸೇರಿದಂತೆ ಇನ್ನೂರೈವತ್ತಕ್ಕೂ ಹೆಚ್ಚು ವಿತರಣಾ ಏಜೆಂಟರಿದ್ದಾರೆ. ಅಂತಹ ಸ್ಥಳಗಳಲ್ಲಿ ಓದುಗರಿಗೆ ಪತ್ರಿಕೆ ಸುಲಭ ವಾಗಿ ಲಭ್ಯವಿದೆ. ಆದರೆ ಪೇಟೆಗಳಿಂದ ಕೊಂಚ ದೂರವಿರು ವವರಿಗೆ ಹಾಗೂ ಆಗಾಗ್ಗೆ ಪೇಟೆಯತ್ತ ಬರಲಾಗದ, ಕೊಂಚ ಇಂಟೀರಿಯರ್ ಏರಿಯಾಗಳಲ್ಲಿ ಇರುವವರಿಗೆ ನಿಯಮಿತವಾಗಿ 'ಲಂಕೇಶ್' ಪಡೆಯುವುದು ಸ್ವಲ್ಪ ಕಷ್ಟವಾಗುತ್ತಿರಲೂಬಹುದು.

ಇದಲ್ಲದೆ ಅನೇಕ ಊರುಗಳಲ್ಲಿ ಬಸ್ ಸ್ಟ್ಯಾಂಡ್ ನವೀಕರಣ, ಹೊಸ ನಿಲ್ದಾಣಗಳ ನಿರ್ಮಾಣದಿಂದಾಗಿ ಅಲ್ಲಿದ್ದ ಪತ್ರಿಕಾ ಸ್ಟಾಲ್‌ಗಳೂ ಕಾಣೆಯಾಗಿವೆ. ಇದರಿಂದಾಗಿ ಕೆಲ ಪುಟ್ಟ ಪಟ್ಟಣಗಳಲ್ಲೂ ತಾತ್ಕಾಲಿಕವಾಗಿ 'ಲಂಕೇಶ್' ವಿತರಣೆಗೆ ಅಡಚಣೆಯಾಗುತ್ತಿದೆ.

ಇದಕ್ಕಿರುವ ಸದ್ಯದ ಪರಿಹಾರವೆಂದರೆ ಪತ್ರಿಕೆಯ ಚಂದಾದಾರರಾಗುವುದು.

ಚಂದಾ ವಿವರ

ವಾರ್ಷಿಕ	ರೂ. 700
ಒಂದೂವರೆ ವರ್ಷಕ್ಕೆ	ರೂ. 1000
ಎರಡು ವರ್ಷಕ್ಕೆ	ರೂ. 1400

- ಹೀಗೆ ಚಂದಾ ಹಣವನ್ನು 'ಲಂಕೇಶ್ ಮೀಡಿಯಾ' ಹೆಸರಲ್ಲಿ ಡಿಡಿ/ಚೆಕ್/ಎಂಓ ಮೂಲಕ ಕಳುಹಿಸಿದರೆ 'ಲಂಕೇಶ್' ಅನ್ನು ನಾವೇ ಕಚೇರಿಯಿಂದ ನೇರವಾಗಿ ಓದುಗರಿಗೆ ಅಂಚೆ ಮೂಲಕ ತಲುಪಿಸುತ್ತೇವೆ. ನಿತ್ಯದ ಕೆಲಸಗಳ ಗಡಿಬಿಡಿಯಲ್ಲಿ ಮ್ಯಾಗಜಿನ್ ಸ್ಟಾಲ್ ಹುಡುಕಿಕೊಂಡು ಹೋಗಲಾಗದ ಓದುಗರೂ ಈ ಸೌಲಭ್ಯ ಬಳಸಿಕೊಳ್ಳಬಹುದು.

ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ

ವ್ಯವಸ್ಥಾಪಕರು

9880302817


080-26676427 ಅನ್ನು ಸಂಪರ್ಕಿಸಿ.

ಚಂದಾ ಹಣ ಕಳುಹಿಸುವಾಗ ನಿಮ್ಮ ಹೆಸರು, ವಿಳಾಸ, ಫೋನ್ ನಂಬರ್ ಅನ್ನು ಸ್ಪಷ್ಟವಾಗಿ ಬರೆಯಿರಿ.

- ವ್ಯವಸ್ಥಾಪಕರು
ಲಂಕೇಶ್ ಮೀಡಿಯಾ

ಜಾತಿ ವ್ಯವಸ್ಥೆಗೆ ಸಾವು ಬರುವುದೆಂದು

ನಮ್ಮ ದೇಶದಲ್ಲಿ ಇನ್ನೂ ಜಾತಿ ವ್ಯವಸ್ಥೆ ಎಷ್ಟು ಘೋರವಾಗಿದೆ ಎಂಬುದಕ್ಕೆ ಇತ್ತೀಚೆಗೆ ತಮಿಳುನಾಡಿನಲ್ಲಿ ...ಣವಾದ ಇಳವರಸನ್ ಎಂಬ ಯುವ ಪ್ರೇಮಿಯ ...ಂತ ಕತೆಯೇ ಒಂದು ಜ್ವಲಂತ ಉದಾಹರಣೆಯಾಗ ...ಬಹುದು. ಯಾಕೆಂದರೆ ಇವನ ಕತೆಯ ...ಂದೆ ಜಾತಿಯ ವಿಷವಿದೆ, ದಲಿತರ ಬಗ್ಗೆ ...ಸಹನೆ ತುಂಬಿದೆ, ಭೂಮಾಲೀಕರ ...ಬ್ಬಾಳಿಕೆಯ ಧೋರಣೆಯಿದೆ, ರಾಜಕಾರಣಿ...ಳ ಮಸಲತ್ತಿದೆ, ಅಸಹಾಯಕ ಯುವತಿ...ಯೊಬ್ಬಳ ಕಣ್ಣೀರಿದೆ. ಇದೆಲ್ಲದರಿಂದ ...ಗಾಲಾಗಿ ತನ್ನ ಪ್ರಾಣವನ್ನೇ ಕಳೆದುಕೊಂಡ ...ಳವರಸನ್ ಕತೆ ಹೀಗಿದೆ:




ತಮಿಳುನಾಡಿನ ಧರ್ಮಪುರಿ ಜಿಲ್ಲೆಯಲ್ಲಿ ...ಯ್ಯನ್‌ಕೊಟ್ಟೈ ಎಂಬ ಹಳ್ಳಿ ಇದೆ. 70 ...ದಶಕದಲ್ಲಿ ಈ ಹಳ್ಳಿ ತಮಿಳುನಾಡಿನ ...ಕ್ಸಲ್ ಚಟುವಟಿಕೆಗಳ ಕೇಂದ್ರವಾಗಿತ್ತು. ...ಗ ಈ ಹಳ್ಳಿ ಮತ್ತು ಅದರ ಸುತ್ತಮುತ್ತಲಿನ ...ಊರುಗಳು ನಕ್ಸಲ್ ಪ್ರಭಾವಕ್ಕೆ ಒಳಗಾಗಿ ...ಲ್ಲಿನ ಜನ ತಮ್ಮ ಜಾತಿಯ ಭೇದಗಳನ್ನು ಮರೆತು ...ಮಾನ ಸಮಾಜಕ್ಕಾಗಿ ಹೆಗಲಿಗೆ ಹೆಗಲು ಕೊಟ್ಟು ...ಹೋರಾಟ ಮಾಡಿದ್ದರು. ಈ ಹಳ್ಳಿಯವರೇ ಆಗಿದ್ದ ನಕ್ಸಲ್ ...ಯಕರಾದ ಕಾಮ್ರೇಡ್ ಅಪ್ಪು ಮತ್ತು ಬಾಲನ್ ಅವರನ್ನು ...ಪೊಲೀಸರು 1979ರಲ್ಲಿ ಹಳ್ಳಿಯ ದ್ವಾರದಲ್ಲೇ ...ನ್‌ಕೌಂಟರ್ ಮಾಡಿ ಸಾಯಿಸಿದ್ದರು. ಅವರಿಬ್ಬರ ...ನೆನಪಿನಾರ್ಥ ಇವತ್ತಿಗೂ ನಾಯ್ಕನ್‌ಕೊಟ್ಟೈ ಮುಂದೆ ಒಂದು ...ಬೃಹತ್ ಸ್ಮಾರಕವಿದೆ.

ಆದರೆ 90ರ ದಶಕದಲ್ಲಿ ನಕ್ಸಲ್ ಪ್ರಭಾವ ಕಡಿಮೆ ...ಯಾಗುತ್ತಿದ್ದಂತೆ ಇಲ್ಲಿ ಜಾತಿ ಎಂಬ ಕೆಟ್ಟ ಪದ್ಧತಿ ಮತ್ತೆ ...ಲಿಷ್ಠಗೊಂಡಿತು. ಅದರಲ್ಲೂ ತಮಿಳುನಾಡಿನಲ್ಲೇ ಪ್ರಥಮ ...ಬಾರಿಗೆ ಜಾತಿ ಆಧರಿಸಿ ಪಾಟ್ಟಾಳಿ ಮಕ್ಕಳ ಕಚ್ಚಿ ಎಂಬ ...ರಾಜಕೀಯ ಪಕ್ಷವನ್ನು ಹುಟ್ಟುಹಾಕಿದ ಡಾ.ರಾಮದಾಸ್ ...ಎಂಬ ವಣ್ಣಿಯಾರ್ ನಾಯಕ ಧರ್ಮಪುರಿ ಜಿಲ್ಲೆಯ ಜನರ ...ನಡುವೆ ಬಿರುಕುಗಳನ್ನು ಮೂಡಿಸಲಾರಂಭಿಸಿದ. ವಣ್ಣಿಯಾರ್ ...ಸಮುದಾಯವನ್ನು ಅತಿ ಹಿಂದುಳಿದ ಜಾತಿ ಎಂದು ...ಪರಿಗಣಿಸಲ್ಪಟ್ಟಿದ್ದರೂ ವಾಸ್ತವದಲ್ಲಿ ಆ ಜಾತಿಯು ...ಭೂಮಾಲೀಕ ಸಮುದಾಯವಾಗಿದೆಯಲ್ಲದೇ ಧರ್ಮಪುರಿ ...ಮತ್ತು ಸುತ್ತಮುತ್ತಲಿನ ಜಿಲ್ಲೆಗಳಲ್ಲಿ ಬಹುಸಂಖ್ಯಾತ ಜಾತಿಯೂ ...ಆಗಿದೆ. ರಾಮದಾಸ್ ತರಹದ ರಾಜಕಾರಣಿಗಳ ...ಮಸಲತ್ತಿನಿಂದ ವಣ್ಣಿಯಾರ್ ಸಮುದಾಯದಲ್ಲಿ ಸ್ವಜಾತಿ ...ಪ್ರೇಮ ಜಾಗೃತಗೊಳ್ಳುತ್ತಾ ಹೋದಂತೆ ಅವರಿಗಿಂತ ...ಸಮಾಜದಲ್ಲಿ 'ಕೆಳ' ಹಂತದಲ್ಲಿರುವ ದಲಿತರ ಮೇಲಿನ ...ದಬ್ಬಾಳಿಕೆಗಳು ಉಲ್ಬಣಿಸಲಾರಂಭಿಸಿದವು.

ದಲಿತ ಯುವಕರು ವಿದ್ಯೆ ಪಡೆದು ಕೈತುಂಬ ...ಸಂಪಾದಿಸುತ್ತಿರುವುದರಿಂದ ಮತ್ತು ಇತರರು ಮೈಬಗ್ಗಿಸಿ ...ಕಷ್ಟಪಟ್ಟು ದುಡಿಯುವುದರಿಂದ ಈಗ ದಲಿತರ ...ಮನೆಗಳಲ್ಲೂ ಬೈಕ್, ಸ್ಕೂಟರ್, ಫ್ರಿಜ್, ಟಿವಿ, ...ರೇಡಿಯೋಗಳು ಬಂದು ಕುಳಿತವಲ್ಲದೆ ಕಲ್ಲು ಅಥವಾ ...ಟೈಲ್ಸ್ ಹಾಸಿರುವ ಮನೆಗಳಲ್ಲಿ ವಾಸ ಮಾಡುತ್ತಿದ್ದಾರೆ. ...ದಲಿತ ಯುವಕರ ಮೈಮೇಲೆ ಜೀನ್ಸ್ ಪ್ಯಾಂಟ್, ಕೈಯಲ್ಲಿ ...ಮೊಬೈಲ್ ಇತ್ಯಾದಿಗಳು ಕಂಡುಬರಲಾರಂಭಿಸಿದೆ. ಹೀಗೆ ...ಆರ್ಥಿಕ ಸ್ವಾವಲಂಬನೆ ಯನ್ನು ಪಡೆದ ದಲಿತರು ಇತ್ತೀಚೆಗೆ ...ಭೂಮಾಲೀಕ ವಣ್ಣಿಯಾರ್ ಜಾತಿಯವರಿಗೆ ಅಧೀನರಾಗಿ ವರ್ತಿಸುತ್ತಿರಲಿಲ್ಲ. ಇದೆಲ್ಲ ವಣ್ಣಿಯಾರ್ ಅವರಲ್ಲಿ ದಲಿತರ ವಿರುದ್ಧ ಅಸಹನೆ ಹೆಪ್ಪುಗಟ್ಟುವಂತೆ ಮಾಡಿತ್ತು. ಇಷ್ಟೆಲ್ಲದರ ನಡುವೆಯೂ ವಣ್ಣಿಯಾರ್ ಮತ್ತು ದಲಿತ ಸಮುದಾಯದ ಹಲವು ಯುವಕ ಯುವತಿಯರು ಪರಸ್ಪರ ಪ್ರೀತಿಸಿ ಮದುವೆಯಾಗುವ ಮೂಲಕ ಜಾತಿಯ ನಿರ್ಬಂಧಗಳನ್ನು ಮೀರಿ ನಿಂತಿದ್ದರು.

ಹಾಗೆ ಜಾತಿ ಮೀರಿ ನಿಲ್ಲಲು ಯತ್ನಿಸಿದವರಲ್ಲಿ ಇಳವರಸನ್ ಕೂಡ ಒಬ್ಬ. 21ರ ಹರೆಯದ ದಲಿತ ಯುವಕ ಇಳವರಸನ್ ನಾಯ್ಕನ್‌ಕೊಟ್ಟೈ ಹಳ್ಳಿಯವನು. ಆತ ಧರ್ಮಪುರಿಯ ಕಾಲೇಜ್ ಒಂದರಲ್ಲಿ ಕಂಪ್ಯೂಟರ್ ಸೈನ್ಸ್ ಓದುತ್ತಿದ್ದ. ನಾಯ್ಕನ್‌ಕೊಟ್ಟೈ ಪಕ್ಕದಲ್ಲಿರುವ ಚೆಲ್ಲನಕೊಟ್ಟೈ ಹಳ್ಳಿಯ ವಣ್ಣಿಯಾರ್ ಯುವತಿ ದಿವ್ಯ ಕೂಡ ಧರ್ಮಪುರಿಯ ನರ್ಸಿಂಗ್ ಕಾಲೇಜಿನಲ್ಲಿ ಓದುತ್ತಿದ್ದಳು. ಇಳವರಸನ್ ಮತ್ತು ದಿವ್ಯ ದಿನನಿತ್ಯ ಒಂದೇ ಬಸ್ಸಿನಲ್ಲಿ ಧರ್ಮಪುರಿಗೆ ಹೋಗುತ್ತಿದ್ದರಿಂದ ಪರಸ್ಪರ ಪರಿಚಯವಾಗಿ ನಿಧಾನವಾಗಿ ಅದು ಪ್ರೇಮಕ್ಕೆ ತಿರುಗಿತು.

ಹೋದ ವರ್ಷ ದಿವ್ಯಾಳನ್ನು ಮದುವೆಯಾಗಲು ಆಕೆಯ ಜಾತಿಯವನೇ ಆದ, ತಿಂಗಳಿಗೆ 35,000 ಸಂಬಳ ಪಡೆಯುತ್ತಿದ್ದ ಪುರುಷನೊಬ್ಬ ಮುಂದಾದ. ಆಗ ಸಹಜವಾಗಿಯೇ ದಿವ್ಯ ಕಂಗಾಲಾದಳು. ಎಲ್ಲಿ ಅಪ್ಪ ಅಮ್ಮ ಆತನೊಂದಿಗೆ ತನಗೆ ಬಲವಂತವಾಗಿ ಮದುವೆ ಮಾಡುತ್ತಾರೋ ಎಂದು ಭಯಗೊಂಡಳು.



ಇಳವರಸನ್ ಕೂಡಲೇ ತನ್ನನ್ನು ಮದುವೆಯಾಗದಿದ್ದರೆ ತಾನು ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಕಣ್ಣೀರಿಟ್ಟಳು. ಅಷ್ಟು ಹೊತ್ತಿಗೆ ಇಳವರಸನ್ ಪೊಲೀಸ್ ಪೇದೆಯಾಗಿ ಆಯ್ಕೆಯಾಗಿದ್ದು ನೇಮಕಾತಿ ಪತ್ರಕ್ಕಾಗಿ ಕಾಯುತ್ತಿದ್ದ. ಹೇಗಿದ್ದರೂ ಜೀವನೋಪಾಯಕ್ಕೆ ಕೆಲಸ ಎಂಬುದು ಸಿಗುತ್ತದೆ ಎಂಬಭರವಸೆಯಲ್ಲಿ ಅವರಿಬ್ಬರೂ ಒಂದು ದಿನ ಊರು ಬಿಟ್ಟು ಓಡಿ ಹೋದರು.

ಕೆಲದಿನಗಳ ನಂತರ ಇಳವರಸನ್ ತನ್ನ ತಂದೆ ಇಳಂಗೋವನ್ ಅವರಿಗೆ ಫೋನ್ ಮಾಡಿ ತಾನು ದಿವ್ಯಳನ್ನು ಮದುವೆಯಾಗಿರುವ ವಿಚಾರ ತಿಳಿಸಿದ. ಆಗ ಇಳಂಗೋವನ್ ಅವರು "ಆಗಿದ್ದು ಆಯಿತು. ಮದುವೆ ಆಗಿದ್ದಾರೆ ಎಂದು ನಮ್ಮ ಮಕ್ಕಳನ್ನು ಬೀದಿಗೆ ಬಿಸಾಡಲು ಸಾಧ್ಯವೇ? ಇಬ್ಬರೂ ಮನೆಗೆ ಬನ್ನಿ" ಎಂದು ಕರೆದರು. ದಿವ್ಯ ಮತ್ತು ಇಳವರಸನ್ ನಾಯ್ಕನ್ ಕೊಟ್ಟೈ ಮನೆಗೆ ವಾಪಸ್ಸಾದರು. ತಮ್ಮದು ಅಂತರ್ಜಾತಿ ಮದುವೆಯಾಗಿದ್ದರಿಂದ ಸಮಸ್ಯೆ ಎದುರಾಗಬಹುದು ಎಂದು ಭಾವಿಸಿ ಇಳವರಸನ್ ಪೊಲೀಸರ ರಕ್ಷಣೆ ಕೋರಿದ್ದ. ಅದರಂತೆ ಧರ್ಮಪುರಿ ಪೊಲೀಸರು ನಾಯ್ಕನ್‌ಕೊಟ್ಟೈನಲ್ಲಿ ಸುಮಾರು 30 ಜನ ಪೊಲೀಸರನ್ನು ನೇಮಿಸಿದ್ದರು.

ದಿವ್ಯ ಎಂಬ ಯುವತಿ ಇಳವರಸನ್ ಎಂಬ ದಲಿತ ಯುವಕನನ್ನು ಮದುವೆಯಾಗಿದ್ದ ವಿಚಾರ ನಾಯ್ಕನ್‌ಕೊಟ್ಟೈ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಹರಡುತ್ತಿದ್ದಂತೆ ಕಪಟ ರಾಜಕಾರಣಿಗಳು ಎಚ್ಚೆತ್ತುಗೊಂಡರು. ಅದರಲ್ಲೂ ಇತ್ತೀಚೆಗೆ ವಣ್ಣಿಯಾರ್ ಸಮುದಾಯದ ನಡುವೆ ತನ್ನ ಪ್ರಭಾವ ಕಡಿಮೆಯಾಗಿದ್ದನ್ನು ಅರಿತಿದ್ದ ರಾಮದಾಸ್‌ರ ಪಾಟ್ಟಾಳಿ ಮಕ್ಕಳ ಕಚ್ಚಿ (ಪಿಎಂಕೆ) ಪಕ್ಷವು ಈ ಪ್ರಕರಣವನ್ನೇ ಉಪಯೋಗಿಸಿಕೊಂಡು ವಣ್ಣಿಯಾರ್ ಜಾತಿಯವರಲ್ಲಿ ತನ್ನ ಅಸ್ತಿತ್ವವನ್ನು ಗಟ್ಟಿ ಮಾಡಿಕೊಳ್ಳಲು ಮುಂದಾಯಿತು. ಆಗ ಪರಿಸ್ಥಿತಿ ಬಿಗಡಾಯಿಸಿತು. ಯಾಕೆಂದರೆ ಅದಕ್ಕೂ ಮುನ್ನವೇ 'ವಣ್ಣಿಯಾರ್ ಯುವತಿಯರನ್ನು ಮದುವೆಯಾಗುವ ದಲಿತರನ್ನು ಕೊಚ್ಚಿ ಕೊಂದು ಹಾಕಬೇಕು', 'ವಣ್ಣಿಯಾರ್ ಹೆಣ್ಣುಗಳು ವಣ್ಣಿಯಾರ್ ಪುರುಷರಿಗೆ ಮಾತ್ರ' ಎಂಬ ಘೋಷ ವಾಕ್ಯಗಳನ್ನು ಪಿಎಂಕೆ ಮತ್ತು ಅದರ ಆಧಾರ ಸ್ತಂಭವಾದ ವಣ್ಣಿಯಾರ್ ಸಂಘಂ ಚಾಲ್ತಿಗೆ ತಂದಿದ್ದವು.

ದಿವ್ಯ ಮತ್ತು ಇಳವರಸನ್ ವಿವಾಹ ಕುರಿತು ಚರ್ಚಿಸಲು ಕರೆದಿದ್ದ ಪಂಚಾಯತ್ ಸಭೆಯಲ್ಲಿ ವಣ್ಣಿಯಾರ್‌ಗಳು ದೊಡ್ಡ ಸಂಖ್ಯೆಯಲ್ಲಿ ಸೇರಿ "ಇನ್ನೆರೆಡು ದಿನಗಳಲ್ಲಿ ದಿವ್ಯಳನ್ನು ಆಕೆಯ ತಂದೆಗೆ ಮನೆಗೆ ಕಳುಹಿಸಬೇಕು" ಎಂದು ಒತ್ತಾಯಿಸಿದರು. ಅಷ್ಟೇ ಅಲ್ಲ, ಕೆಲ ದಿನಗಳ ನಂತರ ದಿವ್ಯಳ ತಾಯಿ, ಹಲವು ಸಂಬಂಧಿಕರು ಮತ್ತು ಜಾತಿಯ ಮುಖಂಡರು ದಿವ್ಯಳನ್ನು ಭೇಟಿಯಾಗಿ ಮನೆಗೆ ಹಿಂದಿರುಗುವಂತೆ ಒತ್ತಾಯಿಸಿದರು. ಆದರೆ ಆಕೆ ತಾನು ಕೈಹಿಡಿದಿರುವ ಇಳವರಸನ್ ಜೊತೆ ಇರುವುದಾಗಿ ಹೇಳಿದ್ದಲ್ಲದೆ ಯಾವ ಕಾರಣಕ್ಕೂ ತನ್ನ ಹೆತ್ತರವ ಮನೆಗೆ ಹಿಂದಿರುಗುವುದಿಲ್ಲ ಎಂದು ಹೇಳಿದಳು.

ವಿಧಿ ಇಲ್ಲದೆ ಆಕೆಯ ತಾಯಿ ಮತ್ತು ಇತರರು ವಾಪಸ್ ಹೊರಟರು. ಆದರೆ ಹೊರಡುವ ಮುನ್ನ ದಿವ್ಯಳ ನಿರ್ಧಾರವನ್ನು ಫೋನ್ ಮೂಲಕ ಆಕೆಯ ತಂದೆ ನಾಗರಾಜನ್‌ಗೆ ತಿಳಿಸಿದರು. ಆಗ ನಾಗರಾಜನ್‌ಗೆ ಏನನ್ನಿಸಿತೋ ಏನೋ, ಅವರೆಲ್ಲ ಮನೆಗೆ ಹಿಂದಿರುಗುವ ಹೊತ್ತಿಗೆ ಆತ ಅನುಮಾನಸ್ಪದ ರೀತಿಯಲ್ಲಿ ನೇಣು ಹಾಕಿಕೊಂಡು ಪ್ರಾಣ ಬಿಟ್ಟಿದ್ದು ಗೊತ್ತಾಯಿತು. ಆತ ಮಗಳ ನಿರ್ಧಾರದಿಂದ ಬೇಸತ್ತು ಆತ್ಮಹತ್ಯೆ ಮಾಡಿಕೊಂಡಿದ್ದರೋ ಅಥವಾ ಅವರ ಮಗಳು ದಲಿತನನ್ನು ಮದುವೆಯಾಗುವ ಮೂಲಕ ವಣ್ಣಿಯಾರ್ ಜಾತಿಗೆ 'ಅವಮಾನ' ಮಾಡಿದ್ದಾಳೆ ಎಂದು ಬೇರೆಯವರು ನಾಗರಾಜನ್‌ನನ್ನು ಕೊಂದು ಹಾಕಿದರೋ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ.

ಆದರೇನಂತೆ ವಣ್ಣಿಯಾರ್ ಸಂಘಂ ಮತ್ತು ಪಿಎಂಕೆ ಪಕ್ಷದವರು ನಾಗರಾಜನ್ ಅವರ ಹೆಣವನ್ನು ಇಟ್ಟುಕೊಂಡು ಗಲಭೆಗೆ ಮುಂದಾದರು. ದೂರದ ಊರುಗಳಿಂದ ಸುಮಾರು 1,000 ವಣ್ಣಿಯರ್ ಜಾತಿಯವರನ್ನು ಕರೆಸಿ, ಅವರಿಗೆಲ್ಲ ದೊಣ್ಣೆಗಳನ್ನು, ಪೆಟ್ರೋಲ್ ಬಾಂಬ್‌ಗಳನ್ನು ಕೊಟ್ಟು ದಲಿತರ ಮನೆಗಳ ಮೇಲೆ ದಾಳಿ ಮಾಡಲು ಕಳುಹಿಸಿದರು. ಅವರೆಲ್ಲ ಅದೆಷ್ಟು ವ್ಯವಸ್ಥಿತವಾಗಿ ದಾಳಿ ಮಾಡಿದರೆಂದರೆ ಆ ಹಳ್ಳಿಗೆ ಪೊಲೀಸರು ಸುಲಭವಾಗಿ ಬಾರದಂತೆ ಮರಗಳನ್ನು ಉರುಳಿಸಿ ರಸ್ತೆಗಳಿಗೆ ಅಡ್ಡಿಯಾಗಿಟ್ಟರು. ದಲಿತರ ರಕ್ಷಣೆಗೆಂದೇ ನಿಯೋಜಿತಗೊಂಡಿದ್ದ ಪೊಲೀಸರಿಂದಲೇ ನಡೆಯಲಿರುವ ದಾಳಿಯ ಬಗ್ಗೆ ದಲಿತರಿಗೆ ಎಚ್ಚರಿಕೆಯನ್ನು ನೀಡಿಸಿದರು.



• ಗೌರಿ ಲಂಕೇಶ್
ಪ್ರಧಾನ ಸಂಪಾದಕಿ
editorlankesh@gmail.com

ಹೆದರಿದ ದಲಿತರು ತಮ್ಮ ಮನೆಗಳಿಂದ ಓಡಿ ಹೋಗಿ ಪಕ್ಕದ ಹೊಲಗಳಲ್ಲಿ ಅವಿತುಕೊಂಡರು. ಆನಂತರ ದಾಳಿಕೋರರು ಪ್ರತಿ ಮನೆಯಲ್ಲಿದ್ದ ಹಣ ಮತ್ತು ಚಿನ್ನಾಭರಣಗಳನ್ನು ದೋಚಿ, ಅಲ್ಲಿದ್ದ ಎಲ್ಲ ಸಾಮಾನುಗಳಿಗೆ ಬೆಂಕಿ ಇಟ್ಟರು. ವಿಷಯ ಗೊತ್ತಿಲ್ಲದೆ ತಮ್ಮ ಮನೆಗಳಲ್ಲಿ ಉಳಿದುಕೊಂಡಿದ್ದ ಕೆಲವು ದಲಿತರನ್ನು "ಇಂತಹ ಒಳ್ಳೆಯ ಮನೆ, ಬೈಕು, ಇತ್ಯಾದಿಗಳಲ್ಲದೆ ನಿಮಗೆ ನಮ್ಮ ಜಾತಿಯ ಯುವತಿಯರೂ ಬೇಕೇನು" ಎಂದು ಹೀಯಾಳಿಸಿದರು. ದಾಳಿ ಪ್ರಾರಂಭವಾದ ಮೂರು ಗಂಟೆಗಳಲ್ಲಿ ಆ ಹಳ್ಳಿಯಲ್ಲಿದ್ದ 268 ದಲಿತರ ಮನೆಗಳು ನಾಶಗೊಂಡಿದ್ದವು. ಅವತ್ತು ಧ್ವಂಸಗೊಂಡ ಮನೆಗಳಲ್ಲಿ ಇಳವರಸನ್ ಮನೆಯೂ ಒಂದಾಗಿತ್ತು.

ಇದ್ಯಾವುದನ್ನೂ ದಿವ್ಯ ಮತ್ತು ಇಳವರಸನ್ ನಿರೀಕ್ಷಿಸಿರಲಿಲ್ಲ. ಆರಂಭದಲ್ಲಿ ದಿವ್ಯಳನ್ನು ಹೆತ್ತವರು ತಮ್ಮ ಮದುವೆಯನ್ನು ವಿರೋಧಿಸುತ್ತಾರಾದರೂ ಆನಂತರ ಅವರು ಸುಮ್ಮನಾಗುತ್ತಾರೆಂದು ಭಾವಿಸಿದ್ದರು. "ನಮ್ಮ ಮದುವೆಗೂ ಜಾತಿಗೂ ಏನು ಸಂಬಂಧ? ನಮ್ಮಿಬ್ಬರ ನಡುವೆ ಎಂದೂ ಜಾತಿ ಮುಖ್ಯವಾಗಿಲ್ಲ. ನಾನು ಕನಸು ಮನಸ್ಸಿನಲ್ಲೂ ಜಾತಿ ಸಂಘಟನೆಗಳು ಮತ್ತು ರಾಜಕೀಯ ಪಕ್ಷಗಳು ನಮ್ಮ ಸಂಬಂಧವನ್ನೇ ತಮ್ಮ ಲಾಭಕ್ಕೆ ದುರ್ಬಲಕ್ಕೆ ಮಾಡಿಕೊಳ್ಳುತ್ತವೆ ಎಂದು ಲೆಕ್ಕಹಾಕಿರಲಿಲ್ಲ" ಎಂದು ಇಳವರಸನ್ ಒಂದು ಸಂದರ್ಶನದಲ್ಲಿ ದುಃಖ ವ್ಯಕ್ತಪಡಿಸಿದ್ದ.

ದಾಳಿಯಾದ ಮೇಲೆ ಇಳವರಸನ್ ಕುಟುಂಬ ಕೆಲ ದಿನಗಳ ಕಾಲ ಚೆನ್ನೈ, ಬೆಂಗಳೂರು ಸೇರಿದಂತೆ ಇತರೆ ಕಡೆಗಳಲ್ಲೂ ತಮ್ಮ ಸಂಬಂಧಿಕರ ಮನೆಗಳಲ್ಲಿ ಆಶ್ರಯ ಪಡೆದಿತ್ತು. ಕೊನೆಗೆ ಧರ್ಮಪುರಿಯಲ್ಲೇ ಒಂದು ಮನೆಯನ್ನು ಬಾಡಿಗೆ ಪಡೆದು ಅಲ್ಲಾದರೂ ನೆಮ್ಮದಿಯ ಜೀವನ ನಡೆಸಲು ಪ್ರಯತ್ನಿಸಿದರು.

ಇಷ್ಟೆಲ್ಲದರ ಮಧ್ಯೆಯೂ ಇಳವರಸನ್, ಆತನ ತಂದೆ ಇಳಂಗೋವನ್ ಮತ್ತು ತಾಯಿ ಕೃಷ್ಣವೇಣಿ ದಿವ್ಯಳ ಮನಃಸ್ಥಿತಿಯ ಬಗ್ಗೆ ಎಚ್ಚರವಹಿಸುತ್ತಿದ್ದರು. ತನ್ನ ತಂದೆ ಸತ್ತಿದ್ದರ ಬಗ್ಗೆ, ತಾಯಿ ಆತಂಕದಲ್ಲಿ ಇರುವುದರ ಬಗ್ಗೆ

▶ 13

ದೈಹಿಕ ಸೌಂದರ್ಯ ಮುಖ್ಯವಲ್ಲ ಎಂದು ತೋರಿಸಿಕೊಟ್ಟ ಮರಿಯನ್

ಕಳೆದ ವಾರ ಫ್ರಾನ್ಸ್ ದೇಶದ ಮರಿಯನ್ ಬಾರ್ತೋಲಿ ...ಎಂಬ ಟೆನ್ನಿಸ್ ಆಟಗಾರ್ತಿ ಪ್ರತಿಷ್ಠಿತ ವಿಂಬಲ್ಡನ್ ...ಪ್ರಶಸ್ತಿಯನ್ನು ಗೆದ್ದಾಗ ಬಿಬಿಸಿ ರೇಡಿಯೋದ ಒರ್ವ ಕ್ರೀಡಾ ...ಕಾಮೆಂಟೇಟರ್ ಮತ್ತು ಟ್ವಿಟರ್ ಲೋಕದ ಕ್ಷುದ್ರ ಜೀವಿಗಳು ...ಬಹಳ ಬೇಸರಗೊಂಡರು. ಅದಕ್ಕೆ ಕಾರಣ ಮರಿಯನ್ ...ಬಾರ್ತೋಲಿ ತನ್ನ ಪ್ರತಿಸ್ಪರ್ಧಿ ಜರ್ಮನಿಯ ಸಬಿನ್ ಲಿಸಿಕಿ ...ಯಂತಹ ಸುಂದರಿಯಲ್ಲ ಎಂಬುದೇ ಆಗಿತ್ತು.

ಸಬಿನ್ ಲಿಸಿಕಿ ಬೆಳ್ಳಗೆ, ತೆಳ್ಳಗೆ, ಎತ್ತರಕ್ಕೆ ಮತ್ತು ...ಹೊಂಬಣ್ಣದ ಕೇಶರಾಶಿಯನ್ನು ಹೊಂದಿದ್ದರೆ ಮರಿಯನ್ ...ಬಾರ್ತೋಲಿ ಸ್ವಲ್ಪ ಕಪ್ಪಗೆ, ದಪ್ಪಗೆ, ಕುಳ್ಳಗೆ ಮತ್ತು ಕಪ್ಪು ...ಬಣ್ಣದ ಕೂದಲನ್ನು ಹೊಂದಿದ್ದಾಳೆ. ಆದರೆ ಮರಿಯನ್ ...ಚೆನ್ನಾಗಿ ಆಡುತ್ತಾ ಗೆಲುವಿನತ್ತ ಸಾಗುತ್ತಿದ್ದಂತೆ ಟ್ವಿಟರ್ ...ಲೋಕದ ಕೆಲವರು ಕಂಗಾಲಾದರು. ತಕ್ಷಣವೇ ಅವರೆಲ್ಲ ...ಆಕೆಯನ್ನು 'ಹಂದಿ', 'ದಪ್ಪ', 'ದುಮ್ಮಿ' ಎಂದೆಲ್ಲ ಮೂದಲಿಸ...ಲಾರಂಭಿಸಿದರು. 'ಸುಂದರಿ ಲಿಸಿಕಿ ವಿರುದ್ಧ ಇಂತಹ ಕುರೂಪಿ ...ಗೆಲ್ಲುವುದನ್ನು ಸಹಿಸಲಾಗುವುದಿಲ್ಲ', 'ಆಕೆ ಗಂಡಸರಂತೆ ...ಬೆವರು ಸುರಿಸುತ್ತಿದ್ದಾಳೆ, ಛೀ' ಎಂದೆಲ್ಲ ಹೇಳುವ ಮೂಲಕ ...ತಮ್ಮ ಬುದ್ಧಿಹೀನಾಂದ್ಯತೆಯನ್ನು ಪ್ರದರ್ಶಿಸಿದರು.

ಆದರೆ ಇದ್ಯಾವುದರ ಪರಿವೆಯೇ ಇಲ್ಲದೆ ಟೆನ್ನಿಸ್ ...ಕೋರ್ಟ್ ಮೇಲೆ ತನ್ನ ಅದ್ಭುತ ಆಟವನ್ನು ಮುಂದುವರೆಸಿದ್ದ



ಮರಿಯನ್ ಮನಸ್ಸಿನಲ್ಲಿ ನಡೆಯುತ್ತಿದ್ದದ್ದು ಆಚ್ಚರಿ ಮೂಡಿಸುವಂತಿದೆ. ಸ್ಪರ್ಧೆ ಮುಗಿದ ನಂತರ ಮರಿಯನ್ ಪತ್ರಕರ್ತರಿಗೆ ಹೇಳಿದ್ದೇನು ಗೊತ್ತಾ?


"ಸಬಿನ್ ಚೆನ್ನಾಗಿ ಆಟವಾಡುತ್ತಿದ್ದರೂ ನನ್ನೆದುರಿಗೆ ಆಕೆ ಸೋಲುತ್ತಿರುವುದನ್ನು ಸಹಿಸಲಾರದೆ ಗೊಂದಲಗೊಳ್ಳುತ್ತಿದ್ದದ್ದನ್ನು ನೋಡಿ ನನಗೆ ಬೇಸರವಾಗುತ್ತಿತ್ತು. ಆಕೆಯನ್ನು ಅಲ್ಲಿಯೇ ಅಪ್ಪಿಕೊಂಡು 'ಇದೊಂದು ಟೆನ್ನಿಸ್ ಆಟವಷ್ಟೇ. ಯಾಕೆ ಅಷ್ಟು ಚಿಂತೆ ಮಾಡುತ್ತಿ' ಎಂದು ಹೇಳಬೇಕೆನಿಸುತ್ತಿತ್ತು. ಕೊನೆಗೂ ಆಟ ಮುಗಿದ ನಂತರ ಆಕೆಯನ್ನು ಅಪ್ಪಿಕೊಂಡಾಗ ಆ ನನ್ನ ಭಾವನೆಯನ್ನು ಆಕೆಗೆ ತಿಳಿಸಿದೆ ಎಂದು ಭಾವಿಸುತ್ತೇನೆ" ಎಂದಳು.

ಗೆದ್ದ ಕೂಡಲೇ ಮರಿಯನ್ ತನ್ನ ತಂದೆಯನ್ನು ಅಪ್ಪಿಕೊಂಡಾಗ ಬಿಬಿಸಿ ರೇಡಿಯೋದ ಕಾಮೆಂಟೇಟರ್ ಜಾನ್ ಇನ್ವರ್ಡೇಲ್ ಎಂಬಾತ ಸಾರ್ವಜನಿಕವಾಗಿ ಏನೆಂದು ಹೇಳಿದ ಗೊತ್ತಾ? "ಪ್ರಾಯಶಃ ಮರಿಯನ್ ಚಿಕ್ಕವಳಾಗಿದ್ದಾಗ ಆಕೆಯ ಅಪ್ಪ 'ಜೀವನದಲ್ಲಿ ನೀನೆಂದೂ ಸುಂದರಿಯಾಗಲಾರೆ. ಆದ್ದರಿಂದ ಕಷ್ಟಪಟ್ಟು ಆಡಿ ಗೆಲ್ಲುವುದನ್ನು ರೂಢಿಸಿಕೋ' ಎಂದು ಉಪದೇಶ ನೀಡಿರಬಹುದೇ?" ಎನ್ನುವ ಮೂಲಕ ತನ್ನ ಸಂಕುಚಿತ ಮನಃಸ್ಥಿತಿಯನ್ನು ಬಹಿರಂಗಪಡಿಸಿದ.

ತಕ್ಷಣವೇ ಪ್ರಜ್ಞಾವಂತರು ಇನ್ವರ್ಡೇಲ್ ವಿರುದ್ಧ ತಿರುಗಿ ಬಿದ್ದರು. "ಟೆನ್ನಿಸ್‌ನಂತಹ ಆಟದಲ್ಲಿ ಗೆಲ್ಲಲು ಬೇಕಿರುವುದು ಕ್ರೀಡಾಶಕ್ತಿ ಹೊರತು ಸೌಂದರ್ಯವಲ್ಲ. ಇಂತಹ ಸರಳ ಸತ್ಯ ಗೊತ್ತಿರದ ಇನ್ವರ್ಡೇಲ್ ಆಕೆಯ ಆಟದ ಶೈಲಿಯ ಬಗ್ಗೆ ಮಾತನಾಡದೇ ಆಕೆಯ ರೂಪದ ಬಗ್ಗೆ ಮಾತನಾಡುವುದು ಆತನ ಮನೋವ್ಯಾಧಿಯನ್ನು ತೋರುತ್ತದೆ" ಎಂದು ಬಿಬಿಸಿಗೆ ದೂರಿತ್ತರು. ಆದರೆ ಮರಿಯನ್ ಆಗಲಿ, ಆಕೆಗೆ ಟೆನ್ನಿಸ್ ಆಟ ಕಲಿಸಿದ ಆಕೆಯ ತಂದೆಯಾಗಲಿ ಟ್ವಿಟರ್ ಲೋಕದ ಕೊಳಕರ ಬಗ್ಗೆಯಾಗಲಿ ಇನ್ವರ್ಡೇಲ್ ತರಹದ ವಕ್ರ ಬುದ್ಧಿಯವರ ಬಗ್ಗೆಯಾಗಲಿ ತಲೆ ಕೆಡಿಸಿಕೊಳ್ಳಲಿಲ್ಲ. ಮರಿಯನ್ ತಂದೆ "ಈಕೆ ನನ್ನ ಮಗಳು. ಆಕೆ ನನ್ನ ಕಣ್ಣಲ್ಲಿ ಸುಂದರಿಯೇ" ಎಂದಷ್ಟೇ ಹೇಳಿದರು. ಮರಿಯನ್ ಕೂಡ "ಹೌದು, ನನಗೆ ಹೊಂಬಣ್ಣದ ಕೂದಲಿಲ್ಲ. ನಾನೆಂದೂ ರೂಪದರ್ಶಿಯಾಗುವ ಕನಸನ್ನು ಖಂಡಿತವಾಗಿ ಕಂಡಿಲ್ಲ. ಆದರೆ ವಿಂಬಲ್ಡನ್‌ನಲ್ಲಿ ಪ್ರಶಸ್ತಿಯನ್ನು ಗೆಲ್ಲುವ ಕನಸನ್ನು ಕಂಡಿದ್ದೆ. ಆ ಕನಸು ಇವತ್ತು ನನಸಾಗಿದೆ. ಅದಕ್ಕಿಂತ ಮುಖ್ಯ ವಾದದ್ದು ನನಗೆ ಇನ್ನೊಂದಿಲ್ಲ. ಬೇರೆಯವರ ಮಾತುಗಳ ಬಗ್ಗೆ ನಾನು ತಲೆಕೆಡಿಸಿಕೊಳ್ಳುವುದಿಲ್ಲ" ಎಂದು ಹೇಳುವ ಮೂಲಕ ಇನ್ವರ್ಡೇಲ್‌ಗೆ ಪರೋಕ್ಷವಾಗಿ ಉಗಿದಳು.

ಮರಿಯನ್ ಬಾರ್ತೋಲಿ ಕೆಲವು ವಕ್ರದೃಷ್ಟಿಯವರ ಕಣ್ಣಲ್ಲಿ ಚಂದ ಇಲ್ಲದಿರಬಹುದು. ಆದರೆ ಟೆನ್ನಿಸ್‌ನಲ್ಲಿ ಗೆಲ್ಲಬೇಕೆಂಬ ಆಕೆಯ ಛಲ, ಆಟದ ಶೈಲಿ ಮತ್ತು ಗೆದ್ದಾಗಲೂ ಆಕೆ ತೋರಿದ ಸೂಕ್ಷ್ಮತೆಯಿಂದಾಗಿ ಆಕೆ ಪ್ರಜ್ಞಾವಂತರ ಕಣ್ಣುಗಳಿಗೆ ಅತಿ ಸುಂದರಿಯಂತೆ ಕಾಣಿಸುತ್ತಾಳೆ. ದೇಹ ಸೌಂದರ್ಯಕ್ಕಿಂತಲೂ ಆತ್ಮ ಸೌಂದರ್ಯ ಮುಖ್ಯ ಎಂಬುದನ್ನು ಮರಿಯನ್ ಬಾರ್ತೋಲಿ ತೋರಿಸಿಕೊಟ್ಟಿದ್ದಾಳೆ. ಆಕೆ ಎಲ್ಲ ಯುವತಿಯರಿಗೆ ಮಾದರಿಯಾಗಬೇಕಿದೆ. ●

ಮಾಲಿನ್ಯ ಪ್ರೇಮಿ ವಾಮನಾಚಾರ್ಯ



ಮೂವತ್ತು ವರ್ಷಗಳಿಂದಲೂ ಸಾಧ್ವಿ ಶಿರೋಮಣಿಯಂತೆ ಪೋಸು ಕೊಡುತ್ತಾ ರಾಜಕೀಯ ಪಡಸಾಲೆಗಳಲ್ಲಿ ರಾಜ ಪುರೋಹಿತನಂತೆ ಅಡ್ಡಾಡುತ್ತಿದ್ದ ಡಾಕ್ಟರ್ ವಾಮನಾಚಾರ್ಯನ ಮುಖವಾಡ ಇದೀಗ ಕಳಚಿ ಬಿದ್ದಿದೆ. ಈ ಮನುಷ್ಯ ಹ್ರಾಣಿ ಹೋದಬಂದಲ್ಲೆಲ್ಲಾ ಪ್ರಾಮಾಣಿಕತೆ, ಶುದ್ಧ ಚಾರಿತ್ರ್ಯ, ಪಾರದರ್ಶಕತೆ, ರಾಷ್ಟ್ರೀಯ ಸೇವೆ ಮುಂತಾದ ಮೌಲ್ಯಯುತ ಪದಗಳನ್ನು ಯಥೇಚ್ಛವಾಗಿ ಬಳಸುತ್ತಿದ್ದರು. ಈಗ ತಾನು ಎಂಥಾ ಆಷಾಢಭೂತಿ, ಡೋಂಗಿ ರಾಷ್ಟ್ರ ಭಕ್ತ ಎಂಬುದನ್ನು ಆಧಾರಸಮೇತ ತಾವೇ ರುಜುವಾತುಪಡಿಸಿ ತನ್ನ ಇಮೇಜಿನ ಬಗ್ಗೆ ಇದ್ದ ಅಲ್ಪಸ್ವಲ್ಪ ಗೊಂದಲಗಳನ್ನೂ ನಿವಾರಿಸಿದ್ದಾರೆ.

ಆರೆಸ್ಸೆಸ್-ಬಿಜೆಪಿ ಕೂಟದ ಕಾರ್ಯಾಚರಣೆಯಲ್ಲಿ ಸದಾ ತೆರೆಮರೆಯಲ್ಲಿ ಚುರುಕಾಗಿ ಓಡಾಡುತ್ತಿದ್ದ ಈತ ಸಾಮಾನ್ಯ ವ್ಯಕ್ತಿಯೇನಲ್ಲ; ರಾಜ್ಯ ಬಿಜೆಪಿಯ ಉಪಾಧ್ಯಕ್ಷರಾಗಿದ್ದವರು, ಬಿಜೆಪಿಯ ರಾಷ್ಟ್ರೀಯ ಕಾರ್ಯಕಾರಿಣಿಯ ಸದಸ್ಯರಾಗಿದ್ದವರು. ಬಿಜೆಪಿ ಮತ್ತೆ ಅಧಿಕಾರಕ್ಕೆ ಬರುವುದು ಕನಸು ಎಂಬುದು ಯಾವಾಗ ಚೆಡ್ಡಿಗಳಿಗೆ ಖಚಿತವಾಯಿತೋ, ಆಗಲೇ ತಮ್ಮ ರಾಜ ಪುರೋಹಿತನಂತಿದ್ದ ವಾಮನಾಚಾರಿಯನ್ನು ಆಯಕಟ್ಟಿನ ಜಾಗವಾದ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಚೇರ್ಮನ್ ಹುದ್ದೆಯಲ್ಲಿ ಕೂರಿಸಿ ಸಿಹಿ ಹಂಚಿ ಸಂಭ್ರಮಿಸಿದ್ದರು.

ಈ ಆಸಾಮಿ ಸೀಟಿಗೆ ಬಂದು ಕೂತಾಗಿನಿಂದ ತಮ್ಮ ಹಿಡನ್ ಅಜೆಂಡಾಗಳನ್ನು ಒಂದೊಂದಾಗಿ ಕರಾರುವಾಕ್ಕಾಗಿ ಜಾರಿಗೆ ತರುತ್ತಿದ್ದಾರೆ. ಕ್ರಿಯಾಶೀಲತೆಯ, ಸದಾಶಯದ ಪುಂಗಿ ಊದುತ್ತಲೇ ಬೆನ್ನ ಮೇಲೆ ಕೈಸವರಿ ದಾರ ತಡಕುವ ಕಲೆಯಲ್ಲಿ ಈತ ನಿಷ್ಣಾತ. ಮಂಡಳಿಯ ಚುಕ್ಕಾಣಿ ಹಿಡಿದ ಕ್ಷಣದಲ್ಲೇ ವಾಸ್ತುಶಾಸ್ತ್ರದ ಹೆಸರಿನಲ್ಲಿ ಜನಿವಾರಿಗಳನ್ನು ಬಿಗಿದಪ್ಪಿದ ಆಚಾರ್ಯ, ಕಳೆದ ಚುನಾವಣೆಯಲ್ಲಿ ಹೀನಾಯ ಸೋಲುಂಡು ದಿಕ್ಕೆಟ್ಟಿರುವ ತಮ್ಮ ಪರಿವಾರದ ಬಂಧುಗಳಿಗೆ ಪುನರ್ವಸತಿ ಕಲ್ಪಿಸಲು ಕಾಯಾ ವಾಚಾ ಮನಸಾ ದುಡಿಯುತ್ತಿದ್ದಾರೆ.

ಇತ್ತೀಚೆಗೆ ಸಿಂಹ ಎಂಬ ಮುಖ್ಯ ಪರಿಸರ ಅಧಿಕಾರಿಯ ನಿವೃತ್ತಿಯಾಗಿದ್ದೇ ತಡ, ಆ ಸ್ಥಾನಕ್ಕೆ ಜನಿವಾರಿಯಾದ ನಂದಕುಮಾರ್‌ರನ್ನು ಮುಖ್ಯ ಪರಿಸರ ಅಧಿಕಾರಿಯನ್ನಾಗಿ ಪ್ರೊಮೋಷನ್ ನೀಡಿದ ವಾಮನಾಚಾರ್ಯ ತಮ್ಮ ರಾಜಧರ್ಮ ಪಾಲಿಸಿದ್ದಾರೆ. ಎಲ್ಲಾ ಸೇವಾ ನಿಯಮಾವಳಿಗಳನ್ನು ಗಾಳಿಗೆ ತೂರಿ, ನಂದಕುಮಾರನಿಗಿಂತ ಹೆಚ್ಚಿನ ಹಿರಿತನ ಹೊಂದಿದ್ದ ಬೇರೆಲ್ಲಾ ಹಿರಿಯ ಪರಿಸರ ಅಧಿಕಾರಿಗಳನ್ನು ಕಡೆಗಣಿಸಿದ್ದಾರೆ.

ನಿಯಮದಂತೆ ಈ ರೀತಿಯ ಪ್ರೊಮೋಷನ್ ನೀಡುವಾಗ ಡಿಪಾರ್ಟ್‌ಮೆಂಟಲ್ ಪ್ರೊಮೋಷನ್ ಕಮಿಟಿಯನ್ನು ಮಾಡುತ್ತಾರೆ. ವಾಮನಾಚಾರಿ ಅಂಥಾ ತಪ್ಪು ಮಾಡಲಿಲ್ಲ, ಇದಕ್ಕೆ ಮೊದಲು ಸೀನಿಯಾರಿಟಿ ಪಟ್ಟಿಯನ್ನು ನೋಟಿಫೈ ಮಾಡಬೇಕಿತ್ತು, ಹೋಗಲಿ, ಹಾಲಿ ಇರುವ ಸೀನಿಯಾರಿಟಿ ಲಿಸ್ಟ್‌ನಂತಾದರೂ ಪ್ರೊಮೋಷನ್ ನೀಡಲಾಗಿದೆಯೇ? ಖಂಡಿತಾ ಇಲ್ಲ. ಹೀಗೆಲ್ಲಾ ನಿಯಮಾವಳಿಗಳನ್ನು ಪಾಲಿಸುತ್ತಾ ಕೂತರೆ ದಾರಧಾರಿಗಳಿಗೆ ಸ್ಥಾನಮಾನ ಕೊಡೋರ್‍ಯಾರು?

ಈ ಅಕ್ರಮ ನೇಮಕಾತಿಯೊಳಗೆ ಮತ್ತೊಂದು ಅಕ್ರಮವೂ ಇದೆ. ನಂದಕುಮಾರ್‌ಗೆ ಕೊಟ್ಟಿರುವುದು ಮಾಮೂಲಿ ಪ್ರೊಮೋಷನ್ ಅಲ್ಲ; ರೆಟ್ರಾಸ್ಪೆಕ್ಟಿವ್ ಪ್ರೊಮೋಷನ್. ಅಂದರೆ ಸೇವೆಯಲ್ಲಿ ಹಿರಿತನ ಹೊಂದಿದ ಅಧಿಕಾರಿಯನ್ನು ಕಡೆಗಣಿಸಿ, ಕಿರಿಯ ಅಧಿಕಾರಿಗೆ ಪ್ರೊಮೋಷನ್ ನೀಡಿದ್ದ ಸಂದರ್ಭದಲ್ಲಿ, ಅದನ್ನು ಹಿರಿತನ ಹೊಂದಿದ ಅಧಿಕಾರಿ ಆಕ್ಷೇಪಿಸಿದ್ದರೆ ಆಗ ಹಿರಿತನ ಹೊಂದಿದ್ದ ಅಧಿಕಾರಿಗೆ ಪ್ರೊಮೋಷನ್ ನೀಡುವಾಗ ಹಿಂದಿನಿಂದಲೇ ಜಾರಿಗೆ ಬರುವಂತೆ ರೆಟ್ರಾಸ್ಪೆಕ್ಟಿವ್ ಪ್ರೊಮೋಷನ್ ನೀಡಲಾಗುತ್ತದೆ. ದಾರಧಾರಿ ಪ್ರೊಮೋಷನ್‌ಗಾಗಿ ತಮ್ಮ ಅಸಾಧಾರಣ ಪ್ರತಿಭೆಯನ್ನು ಬಳಸಿ ಇಂಥಾ ವಿಕೃತಿಯನ್ನು ಸೃಷ್ಟಿಸಲಾಗಿದೆ.

ಹೇಸಿಗೆ ಹುಟ್ಟಿಸುವಷ್ಟು ಅಕ್ರಮ ಎಸಗಿದರೂ ಅದರ ಬಗ್ಗೆ ಯಾವುದೇ ಅಧಿಕೃತ ದಾಖಲಾತಿ ಸಿಗದಂತೆ ಗೌಪ್ಯತೆ ಕಾಪಾಡುವುದು ಒಂದು ಬ್ರಹ್ಮ ವಿದ್ಯೆಯೇ ಸರಿ. ಆಚಾರ್ಯರಿಗೆ ಅಂಥಾ ಕಲೆ ಸಿದ್ಧಿಸಿದೆ. ಸಾಮಾನ್ಯವಾಗಿ, ಇಂತಹ ನೇಮಕಾತಿ ಅಥವಾ ಪ್ರೊಮೋಷನ್ ಕುರಿತು ಅವರ ಎಲ್ಲಾ ಕಿರಿಯ ಅಧಿಕಾರಿಗಳಿಗೆ ಸರ್ಕ್ಯುಲರ್ ನೀಡಲಾಗುತ್ತದೆ. ಆದರೆ ದಾರಧಾರಿ ನಂದಕುಮಾರ್ ಹಿರಿಯ ಪರಿಸರ ಅಧಿಕಾರಿಯಾಗಿ ಪ್ರೊಮೋಷನ್ ಪಡೆದು ಕರ್ತವ್ಯ ನಿರ್ವಹಿಸಲು ಪ್ರಾರಂಭಿಸಿದಾಗ್ಯೂ, ಒಬ್ಬ ಕಿರಿಯ ಅಧಿಕಾರಿಗೂ ಈ ಬಗ್ಗೆ ಸರ್ಕ್ಯುಲರ್ ನೀಡಿಲ್ಲ. ಯಾರಾದರೂ ನ್ಯಾಯಾಲಯದ ಮೊರೆ ಹೋಗಬೇಕೆಂದರೂ ಈ ಕಡತದ ಪ್ರತಿ ಲಭ್ಯವಿಲ್ಲ. ಹೇಗಿದೆ ಬ್ರಹ್ಮ ವಿದ್ಯೆ?

ಸಂಘ ಪರಿವಾರಿಗಳಿಗೆ ಪುನರ್ವಸತಿ

ಮತ್ತೊಂದು ಪ್ರಕರಣದಲ್ಲಿ ಬೇಳೂರು ಸುದರ್ಶನ್ ಎನ್ನುವ ಮತ್ತೊಬ್ಬ ಸಂಘಪರಿವಾರದ ದಾರಧಾರಿಯನ್ನು ಎಲ್ಲಾ ಸೇವಾ ನಿಯಮಾವಳಿಗಳನ್ನೂ ಗಾಳಿಗೆ ತೂರಿ ವೆಬ್‌ಸೈಟ್ ಮತ್ತಿತರ ಕೆಲಸಗಳನ್ನು ಮಾಡಿಸಲೆಂದು ತಿಂಗಳಿಗೆ ಸುಮಾರು 75 ಸಾವಿರ ರೂ. ಗಳಷ್ಟು ಕನ್ಸಲ್ಟೇಷನ್ ಶುಲ್ಕ ನೀಡಿ ಸೇವೆಯ ಎರವಲು ಪಡೆಯಲಾಗುತ್ತಿದೆ. ಬೋರ್ಡ್‌ನ ಅನುಮತಿಯೇ ಇಲ್ಲದ ಈ ಕೃತ್ಯ ಕರ್ನಾಟಕ ಟ್ರಾನ್ಸ್‌ಪರೆನ್ಸಿ ಇನ್ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಕಾಯ್ದೆಯ ಸ್ಪಷ್ಟ ಉಲ್ಲಂಘನೆ.

ಈ ಹಿಂದೆ ಬಿಜೆಪಿ ಅಧಿಕಾರದಲ್ಲಿದ್ದಾಗ ಬಯೋಫ್ಯೂಯೆಲ್ ಮಂಡಳಿ ಎಂಬುದನ್ನು ಸೃಷ್ಟಿಸಿ ಅದಕ್ಕೆ ಸಂಘಪರಿವಾರದಲ್ಲಿ ಸಕ್ರಿಯವಾಗಿ ಗುರುತಿಸಿಕೊಂಡ ಮತ್ತೊಬ್ಬ ದಾರಧಾರಿ ವ್ಯಕ್ತಿ ವೈ.ಬಿ. ರಾಮಕೃಷ್ಣನನ್ನು ಅಧ್ಯಕ್ಷನನ್ನಾಗಿ ನೇಮಿಸಿ, ಕ್ಯಾಬಿನೆಟ್ ಸಚಿವನ ಸ್ಥಾನಮಾನ ನೀಡಲಾಗಿತ್ತು. ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರುತ್ತಿದ್ದಂತೆಯೇ, ಈ ಬಯೋಫ್ಯೂಯೆಲ್ ರಾಮಕೃಷ್ಣನಿಗೆ ಸಂಚಕಾರ ಬಂತು. ಆಗ ತಮ್ಮ ವಟುವಿನ ಕಷ್ಟವನ್ನು ನಿವಾರಿಸಲು ಆಚಾರ್ಯ ಮಾಲಿನ್ಯ ಮಂಡಳಿಯಲ್ಲಿ ಕನ್ಸಲ್ಟೆಂಟ್ ಆಗಿ ನೇಮಕ ಮಾಡಿಕೊಳ್ಳಲು ಮುಂದಾಗಿದ್ದಾರೆ ಎಂಬ ಸುದ್ದಿ ಹರಡಿದೆ.



ಪ್ರತಿಭಟನೆ....

ಈ ಬಗ್ಗೆ ಮಂಡಳಿಯಲ್ಲಿ ತೀವ್ರ ಆಕ್ಷೇಪಣೆ ಇರುವುದರಿಂದ ಇನ್ನೂ ಅಧಿಕೃತ ನೇಮಕಾತಿ ಪತ್ರವನ್ನು ನೀಡಿಲ್ಲ. ಆದರೇನಂತೆ? ಸದರಿ ವೈ.ಬಿ. ರಾಮಕೃಷ್ಣ ಈಗಾಗಲೇ 1ನೇ ತಾರೀಕಿನಿಂದ ತಮ್ಮ "ಕನ್ಸಲ್ಟೆಂಟ್" ಕೆಲಸ ಪ್ರಾರಂಭಿಸಿದ್ದಾರಂತೆ.

ಇನ್ನು ಈ ಮಹಾನುಭಾವ ಮಾಲಿನ್ಯ ನಿಯಂತ್ರಿಸುತ್ತಿರುವ ಪರಿಯನ್ನು ಸ್ವಲ್ಪ ಪರಿಶೀಲಿಸೋಣ.

ಮಂಡ್ಯ ಜಿಲ್ಲೆಯ ಕೆಆರ್‌ಪೇಟೆ ತಾಲ್ಲೂಕಿನಲ್ಲಿ ಐಸಿಎಲ್ ಶುಗರ್ಸ್ ಹೆಸರಿನಲ್ಲಿ ಒಂದು ಶುಗರ್ ಫ್ಯಾಕ್ಟರಿ ಮತ್ತು ಅದರ ಜೊತೆ ಒಂದು ಕೋಜನರೇಷನ್ ಪ್ಲಾಂಟ್ ನಿರ್ಮಿಸಲು ಇದೇ ವಾಮನ ಇತ್ತೀಚೆಗೆ ಅನುಮತಿ ನೀಡಿದ್ದಾನೆ. ಭಾರೀ ಮಾಲಿನ್ಯ ಉಂಟುಮಾಡಲಿರುವ ಈ ಉದ್ದೇಶಿತ ಕಾರ್ಖಾನೆಯ ವಿರುದ್ಧ ಸ್ಥಳೀಯ ರೈತರು ಹಾಗೂ ಸಂಘಸಂಸ್ಥೆಗಳು ಪರಿಸರ ಭವನಕ್ಕೆ ಇದೇ ಜೂನ್ 14ರಂದು ಮುತ್ತಿಗೆ ಹಾಕಿ ಪ್ರತಿಭಟಿಸಿದ್ದರು. ಆದರೆ ಜನರ ಪ್ರತಿಭಟನೆಗೆ ವಿರುದ್ಧವಾಗಿ ಕಂಪನಿ ಪರವಾದ ಪ್ರತಿಭಟನೆಯೊಂದನ್ನು ಆಯೋಜಿಸುವಂತೆ ಕಂಪನಿಯವರನ್ನು ಎತ್ತಿಕಟ್ಟುವಷ್ಟು ನೀಚಮಟ್ಟಕ್ಕೆ ವಾಮನ ಇಳಿದಿದ್ದಾನೆ. ಜೂನ್ 15ರಂದು ನಡೆದ ಈ ಪ್ರಹಸನ ಒಂದು ಫ್ಲಾಪ್ ಶೋ ಆಗಿ ಇವರಿಗೆ ಮುಖಭಂಗವಾಯ್ತು ಎಂಬುದು ಬೇರೆ ಮಾತು.

ಕಳೆದ ಒಂದು ವರ್ಷದಿಂದಲೂ ಈ ಉದ್ದೇಶಿತ ಕಂಪನಿಗಾಗಿ ಕಟ್ಟಡ ಕಾರ್ಯ ಎಗ್ಗಿಲ್ಲದೆ ಸಾಗಿದೆ. ಈ ಬಗ್ಗೆ ಮಾಲಿನ್ಯ ನಿಯಂತ್ರಣ ಮಂಡಳಿಯ ಮೈಸೂರು ವಿಭಾಗೀಯ ಕಚೇರಿಯು ಇದೇ ಏಪ್ರಿಲ್ 19ರಂದು ಕಳಿಸಿರುವ ತನ್ನ ಶಿಫಾರಸ್ಸಿನಲ್ಲಿ 'ನೀರು ಮತ್ತು ಗಾಳಿಗಳನ್ನು ವಿಷಮಯ ಮಾಡುವ ಈ ಯೋಜನೆ ಯಾವುದೇ ಪೂರ್ವಾನುಮತಿ ಇಲ್ಲದೆ ಕಾನೂನುಬಾಹಿರವಾಗಿ ನಿರ್ಮಾಣವಾಗುತ್ತಿದೆ... ಆದ್ದರಿಂದ ಕಾಮಗಾರಿಯನ್ನು ಸ್ಥಗಿತಗೊಳಿಸಬೇಕೆಂದು' ಸ್ಪಷ್ಟವಾಗಿ ತಿಳಿಸಿದೆ. ಜೊತೆಗೆ ಅಕ್ರಮ ಬಿಲ್ಡಿಂಗ್‌ಗಳ ಫೋಟೋ ಕೂಡ ಲಗತ್ತಿಸಿದೆ.

ಇಷ್ಟೆಲ್ಲಾ ಆಗಿದ್ದರೂ ಮಾಲಿನ್ಯ ಪ್ರಿಯ ವಾಮನ ಇದೇ ಏಪ್ರಿಲ್ 24ರಂದು ಐಸಿಎಲ್ ಶುಗರ್ಸ್ ಕಂಪನಿಗೆ ಕ್ಲಿಯರೆನ್ಸ್ ಕೊಟ್ಟು ಪುಣ್ಯ ಕಟ್ಟಿಕೊಂಡಿದ್ದಾನೆ.

ಕೆಆರ್ ಪೇಟೆ ರೈತ ಸಂಘದ ಹಿರಿಯ ಮುಖಂಡರ ನೇತೃತ್ವದಲ್ಲಿ ಒಂದೂವರೆ ವರ್ಷದಿಂದಲೂ ಸ್ಥಳೀಯರು ಪ್ರತಿಭಟನೆ ಮಾಡಿದ್ದಾರೆ. ಮಂಡಳಿಯ ಅಧ್ಯಕ್ಷರನ್ನು ಭೇಟಿ ಮಾಡಲು ಎಷ್ಟೇ ಪ್ರಯತ್ನಿಸಿದರೂ ಪ್ರಯೋಜನವಾಗಿಲ್ಲ. ಕೊನೆಗೆ ಜೂನ್ 20ರಂದು ರಾಜೇಗೌಡ ಮತ್ತಿತರ ರೈತ ಮುಖಂಡರು ಬೆಂಗಳೂರಿನ ಕಚೇರಿಗೆ ಹೋದಾಗ, ರೈತರಿಗೆ ಮುಖ ತೋರಿಸುವ ನೈತಿಕತೆಯೂ ಇಲ್ಲದ ವಾಮನಾಚಾರಿ ಕಳ್ಳನಂತೆ ತಪ್ಪಿಸಿಕೊಂಡಿದ್ದಾನೆ.

ಇಷ್ಟೆಲ್ಲಾ ಯಾತಕ್ಕಾಗಿ ಗೊತ್ತೆ?

ಈ ಐಸಿಎಲ್ ಶುಗರ್ಸ್ ಕಂಪನಿಯ ಮಾಲೀಕ ಶ್ರೀನಿವಾಸನ್ ಸಾವಿರಾರು ಕೋಟಿಗಳ ಭಾರೀ ಕುಳ; ಬಿಸಿಸಿಐ ಎಂಬ ಕ್ರಿಕೆಟ್ ಮಂಡಳಿಯ ಅಧಿಪತಿಯಾಗಿದ್ದ ಈತ ಇತ್ತೀಚೆಗಷ್ಟೆ ಕ್ರಿಕೆಟ್ ಹಗರಣವೊಂದರಲ್ಲಿ ಸಿಲುಕಿ ಭಾರೀ ಸುದ್ದಿ ಮಾಡಿದ್ದ ನೋಡಿ. ಅದೇ ಶ್ರೀನಿವಾಸನ್. ಆತನ ಇಂಡಿಯಾ ಸಿಮೆಂಟ್ಸ್ ಕಂಪನಿ ದೇಶದ ದೊಡ್ಡ ಕಂಪನಿಗಳಲ್ಲೊಂದು. ವಾಮನಾಚಾರಿಗೆ ಇಂಥಾ ಮಹನೀಯರ ಕೃಪಾಕಟಾಕ್ಷ ಸಿಕ್ಕಿರುವಾಗ ರೈತರ ಸಮಸ್ಯೆ ಮಾಲಿನ್ಯದ ಸಮಸ್ಯೆ ಕಟ್ಟಿಕೊಂಡು ಏನಾಗಬೇಕು ಹೇಳಿ?

ಇದೇ ರೀತಿ ನಾಗಮಂಗಲ ತಾಲ್ಲೂಕಿನಲ್ಲಿ 'ಪ್ರೇಮ್ ಶುಗರ್ಸ್ ಮತ್ತು ಕೆಮಿಕಲ್ಸ್ ಕಾರ್ಪೋರೇಷನ್' ಎಂಬ ಕಂಪನಿಯೊಂದಕ್ಕೆ ಶುಗರ್ ಫ್ಯಾಕ್ಟರಿ ಮತ್ತು ಕೋ ಜೆನರೇಷನ್ ಪ್ಲಾಂಟ್‌ಗೆ ಅನುಮತಿ ನೀಡಲಾಗಿದೆ. ವಿಶೇಷವೇನೆಂದರೆ ಈ ಕಂಪನಿಯ ಪ್ರಸ್ತಾಪ ಮಂಡಳಿಯ ಮಾರ್ಗದರ್ಶಿ ಸೂತ್ರಗಳಿಗೆ ಅನುಗುಣವಾಗಿಲ್ಲವೆಂಬ ಕಾರಣಕ್ಕಾಗಿ ವಾಮನಾಚಾರಿ ಬರುವ ಮುಂಚೆಯೇ, ಅಂದರೆ 20 ಸೆಪ್ಟೆಂಬರ್ 6ರಂದು ಅನುಮತಿ ನಿರಾಕರಿಸಲಾಗಿತ್ತು

ಈ ಮನೆಹಾಳು ಕಂಪನಿಯ ಜಾಗ ಇರುವುದು ಶಿ ನದಿಯಿಂದ ಕೇವಲ ಅರ್ಧ ಕಿಲೋಮೀಟರ್ ದೂರ ಕುಣಿಗಲ್ ಪಟ್ಟಣ ಮತ್ತು ಸುತ್ತಲ ಹಲವಾರು ಗ್ರಾಮ ಕುಡಿಯುವ ನೀರನ್ನು ಸರಬರಾಜು ಮಾಡುತ್ತಿ ಮಾರ್ಕೊನಹಳ್ಳಿ ಡ್ಯಾಮ್‌ನಿಂದ ಕೇವಲ 680 ಮೀ ದೂರದಲ್ಲಿದೆ. ಈ ಡ್ಯಾಮ್‌ನ ಬ್ಯಾಕ್‌ವಾಟರ್‌ನಿ 100-200 ಮೀಟರ್ ದೂರದಲ್ಲೇ ನಿರ್ಮಾಣ ಕಾ ಸಾಗಿದೆ.

ಆದರೆ ಇಂಥಾ ಕುಡಿವ ನೀರಿನ ಮೂಲಗಳ ಕಾರ್ಖಾನೆಗಳು ಕನಿಷ್ಠ 1500 ಮೀಟರ್ ದ ಇರಬೇಕೆಂದು ಪರಿಸರ ನಿಯಮಾವಳಿ ಹೇಳು ಈ ಆಚಾರಿ ಕನಿಷ್ಠ ಸ್ಥಳ ಪರಿಶೀಲನೆಯ ಮಾಡದೆ, ತನ್ನ ಎಸಿ ಆಫೀಸಿನಲ್ಲೇ ಕು ಅಕ್ಟೋಬರ್ 27ರಂದು ಸ್ಥಳ ಪರಿಶೀ ಮಾಡಿದ್ದಾಗಿ ಹೇಳಿ, ಅನುಮೋದನೆ ನೀಡಿದ ಈ ಬಗ್ಗೆ ಮಂಡ್ಯ ಜಿಲ್ಲೆಯ ಹಟ್ನ ಮ ಕಾಳಿಂಗನಹಳ್ಳಿಯ ರೈತರು ಲೋಕಾಯ ಕೋರ್ಟಿನಲ್ಲಿ ಕೇಸು ದಾಖಲಿಸಿದ್ದಾರೆ.

ಹೀಗೆ ಹೇಳುತ್ತಾ ಹೋದರೆ ವಾಮ ಚಾರಿಯ ಮಾಲಿನ್ಯ ಪುರಾಣಕ್ಕೆ ಕೊನೆಯೇ

ಇನ್ನೊಂದು ತಮಾಷೆ ನೋಡಿ. ಈ ಸ ಪರಿವಾರದವರಲ್ಲಿ ಒಂದು ವಿಶಿಷ್ಟ ತಂತ್ರ ಅದು ತಮ್ಮ ಕೆಲವು ನಾಯಕರನ್ನು ಸತ್ಯಹರಿಶ್ಚಂ ತುಂಡು ಎಂಬಂತೆ ಫೋಕಸ್ ಮಾಡಿಬಿಡುವು ಹೀಗೆ ಖ್ಯಾತಿಗೆ ಬಂದ ರಾಮಚಂದ್ರೇಗ ವಿ.ಎಸ್. ಆಚಾರ್ಯ, ಸುರೇಶ್‌ಕುಮ ಮುಂತಾದವರ ಸಾಲಿನಲ್ಲಿ ವಾಮನಾಚಾರ್ಯರೂ ಒಬ್ಬ ಇವರೆಲ್ಲ ಬಿಜೆಪಿ ಅಧಿಕಾರಾವಧಿಯಲ್ಲಿ ಉಳಿದೆಲ್ಲರ ನಿಜ ಬಯಲಾಗಿ ಜನರೆದುರು ಬೆತ್ತಲಾಗಿ ನಿಂತಿದ್ದರು. ಇದ ವಾಮನಾಚಾರ್ಯರ ಸರದಿ ಸ್ವಲ್ಪ ತಡವಾಗಿ ಬಂ ಅಷ್ಟೆ.

ಒಮ್ಮೆ ವಾಮನಾಚಾರ್ಯ ಮೀಡಿಯಾದೆದುರು ಹೇಳಿಕೆ ನೀಡಿದ್ದ.

"ಕಸ ತುಂಬಿದ ಲಾರಿ ರಸ್ತೆಯಲ್ಲಿ ಹಾದುಹೋಗು ಅಕ್ಕಪಕ್ಕದಲ್ಲಿರುವವರೆಲ್ಲಾ ಮೂಗು ಮುಚ್ಚಿಕೊಳ್ಳು ಆದರೆ ನಾನು ಮೂಗು ಮುಚ್ಚಿಕೊಳ್ಳೋಲ್ಲ. ನನಗೆ ಕಸದ ವಾಸನೆ ಬಹಳ ಇಷ್ಟ. ಅದು ಮಹಾನ್ ರಾಷ್ಟ್ರೀ ಸಂಪತ್ತು."

ಕಸದ ವಾಸನೆ ವಾಮನನಿಗೆ ಯಾಕೆ ಇಷ್ಟ ಗೊ ರಾಷ್ಟ್ರೀಯ ಸಂಪತ್ತಾಗಬೇಕಿದ್ದ ಕಸವನ್ನು ಮಾನ್ಯರು ತ ಖಾಸಗಿ ಸಂಪತ್ತಾಗಿ ಪರಿವರ್ತಿಸಿಕೊಂಡು ಸನ್‌ರೆ ಕಾಂಪೋಸ್ಟ್ ಎಂಬ ಕಂಪನಿಯೊಂದನ್ನು ಆರಂಭಿಸಿ ಮೂಲಕ ಹಣ ಮಾಡುವ ದಂಧೆಗಿಳಿದಿದ್ದಾರೆ.

ಇವರಿಗೆ ಹೇಳೋರು ಕೇಳೋರು ಅಂತಾ ಯಾರಾದ ಇದ್ದಾರಾ?

ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯ ಭ್ರಷ್ಟರಿಂದ ಮುಕ್ತಗೊಳಿಸುವ ಜವಾಬ್ದಾರಿ ಕಾಂಗ ಸರ್ಕಾರದ ಮೇಲಿದೆ.

• ದೊಡ್ಡಿಪಾಳ್ಯ ನರಸಿಂಹಮೂರ್ತಿ

ವಾಮನಾಚಾರಿಯ ವಾಮಮಾರ್ಗ


ವಾಮನಾಚಾರ್ಯ ಮೂಲತಃ ಎಂಬಿಬಿಎಸ್ ಪಡೆದು ಒಂದಷ್ಟು ಕಾಲ ವೈದ್ಯ ವೃತ್ತಿ ಮಾಡಿಕೊಂಡಿದ್ದರು. ಅದರಲ್ಲಿ ಅಂಥಾ ಸುಖ ಕಾಣಲಿಲ್ಲ, 1980ರ ದಶಕದಲ್ಲೇ ವೈದ್ಯ ವೃತ್ತಿಯನ್ನು ತೊರೆದುಬಿಟ್ಟರು. ನಂತರ ಬೆಂಗಳೂ ಮಾಗಡಿ ರಸ್ತೆಯ ಮಾಚೋಹಳ್ಳಿಯಲ್ಲಿ ಸನ್‌ರೈಸ್ ಕಾಂಪೋಸ್ಟ್ ಎಂಬ ಕಂಪನಿಯೊಂದನ್ನು ಶುರು ಮಾಡಿ ಉದ್ಯಮಿ ಲಾಭ ಕಂಡುಕೊಂಡರು. ಅದನ್ನೂ ಮೀರಿದ ಸುಖ ಆಚಾರ್ಯರಿಗೆ ಸಿಕ್ಕಿದ್ದು ಸಂಘಪರಿವಾರದ ಸಖ್ಯದಲ್ಲಿ. ಸುಮ ಮೂರು ದಶಕಗಳಿಂದಲೂ ಸಕ್ರಿಯವಾಗಿರುವ ಇವರು ಆರೆಸ್ಸೆಸ್-ಬಿಜೆಪಿಗಳ ನಾನಾ ಹುದ್ದೆಗಳನ್ನು ಅಲಂಕರಿಸಿ

ಇಂಥಾ ವಾಮನರಿಗೆ ಬಿಜೆಪಿ ಅಧಿಕಾರಕ್ಕೆ ಬಂದರೂ ಏನೂ ಗಿಟ್ಟಿರಲಿಲ್ಲ. ಹಾಗಾಗಿ ಕೊನೆ ಗಳಿಗೆಯಲ್ಲಾದರೂ ಕೊರತೆಯನ್ನು ನೀಗಿಸುವ ಉದ್ದೇಶದಿಂದ ಇವರನ್ನು ಮಾಲಿನ್ಯ ನಿಯಂತ್ರಣ ಮಂಡಳಿಯ ಅಧ್ಯಕ್ಷ ಗಾದಿಗೆ ಕೂರಿಸಲಾಯಿ ವಾಮನ ಆಚಾರ್ಯರನ್ನು ಪಟ್ಟಕ್ಕೆ ಕೂರಿಸುವ ಕೆಲವೇ ವಾರಗಳ ಮುಂಚೆಯೇ ಮಂಡಳಿಯಲ್ಲಿ ಒಮ್ಮಿಂದೊಮ್ಮೆ ಭಾರೀ ಎತ್ತಂಗಡಿಗಳು ನಡೆದವು. 8 ಹಿರಿಯ ಪರಿಸರ ಅಧಿಕಾರಿಗಳು, 18 ಡೆಪ್ಯೂಟಿ ಪರಿಸರ ಅಧಿಕಾರಿಗಳು, ಎನ್ವಿರಾಯಿನ್‌ಮೆಂಟ್ ಆಫೀಸರ್‌ಗಳು ಮತ್ತು 26 ಅಸಿಸ್ಟೆಂಟ್ ಆಫೀಸರ್‌ಗಳನ್ನು ಎತ್ತಂಗಡಿ ಮಾಡಲಾಯಿ ಇವೆಲ್ಲವೂ ನಡೆದದ್ದು ನಿಯಮಬಾಹಿರವಾಗಿ. ನೇರವಾಗಿ ಸಿಎಂ ಸದಾನಂದಗೌಡನ ಆದೇಶದ ಮೇರೆಗೆ!

ಆಗ ಅಧಿಕಾರಕ್ಕಾಗಿ ಹಂದಿ-ನಾಯಿಗಳಂತೆ ಕಚ್ಚಾಡುತ್ತಿದ್ದ ಬಿಜೆಪಿಯ ಒಳಜಗಳ ಈ ವಿಷಯದಲ್ಲೂ ಮಾಡಿತ್ತು. ಯಡಿಯೂರಪ್ಪ ತನ್ನ ಶಿಷ್ಯ ಮಂಜಪ್ಪನನ್ನು ಈ ಗಾದಿಗೆ ಕೂರಿಸಲು ತೀವ್ರ ಪ್ರಯತ್ನ ನಡೆಸಿದ್ದರು. ಸುಮ ಆರು ತಿಂಗಳ ಕಾಲ ಹಗ್ಗಜಗ್ಗಾಟ ನಡೆಸಿದ ನಂತರ, 2012ರ ಸೆಪ್ಟೆಂಬರ್‌ನಲ್ಲಿ ಕಿಂಗ್‌ಪಿನ್ ಅನಂತಕುಮಾರ್ ತ ಸ್ವಜಾತಿಬಂಧು ವಾಮನಾಚಾರ್ಯರಿಗೆ ಪಟ್ಟ ಕಟ್ಟುವಲ್ಲಿ ಯಶಸ್ವಿಯಾಗಿದ್ದರು.

ಹೀಗೆ ವಕ್ಕರಿಸಿದ ವಾಮನಾಚಾರ್ಯ ಕನ್ನಡ ನಾಡಿನ ನೆಲ-ಜಲ-ಗಾಳಿಯ ಮಾಲಿನ್ಯಕ್ಕೆ ಕಾರಣವಾಗಿರುವ ಮಾತ್ರವಲ್ಲ; ಸ್ವತಃ ಮಂಡಳಿಯ ಒಳಗೆ ಜಾತಿ ರಾಜಕಾರಣ ಮಾಡುತ್ತಾ ಕಾನೂನನ್ನೇ ಮಲಿನಗೊಳಿಸುತ್ತಿದ್ದಾನೆ.

ವನ್ಯಜೀವಿ ಪೀಡಕ ಅನಿಲ್ ಕುಂಬ್ಳೆ



ಕರ್ನಾಟಕ ವನ್ಯಜೀವಿ ಮಂಡಳಿಯ ಉಪಾಧ್ಯಕ್ಷ ಅನಿಲ್ ...ಂಬ್ಳೆ ಎಂಬ ಬೇಜವಾಬ್ದಾರಿ ವ್ಯಕ್ತಿಯ ಕುರಿತಾದ ವರದಿ ...ದು.

ಹೌದು...

ಈತ ಕ್ರಿಕೆಟರ್ ಅನಿಲ್ ಕುಂಬ್ಳೆಯೇ!

ಈ ಕುಂಬ್ಳೆಗೆ ಕ್ರಿಕೆಟ್ ಗೊತ್ತಿತ್ತು, ಆಟದಿಂದ ನಿವೃತ್ತನಾದ ...ತರ ಕಾಮೆಂಟರಿ ಮಾಡಿಕೊಂಡು, ವಿಜಯ್ ಮಲ್ಯನ ...ಯಲ್ ಚಾಲೆಂಜರ್ಸ್ ಟೀಂನ ಕೋಚ್ ಆಗಿ ...ಮಾಡಿಕೊಂಡಿದ್ದ.

ಆದರೆ ಯಾವ ಕಾರಣಕ್ಕೂ ಅನಿಲ್ ಕುಂಬ್ಳೆ ಪರಿಸರ ...ನೋ ಇಲ್ಲ ವನ್ಯಜೀವಿ ಸಂಶೋಧಕನೋ ಆಗಿರಲಿಲ್ಲ. ...ಸ್ಥಿತಿ ಹೀಗಿದ್ದಾಗಲೂ ಆಗಿನ ಬಿಜೆಪಿ ಸರ್ಕಾರ 2009ರ ...ಕ್ಟೋಬರ್‌ನಲ್ಲಿ ಅನಿಲ್ ಕುಂಬ್ಳೆಯನ್ನು ಕರ್ನಾಟಕ ...ನ್ಯಜೀವಿ ಮಂಡಳಿಯ ಉಪಾಧ್ಯಕ್ಷನನ್ನಾಗಿ ತಂದು ...ಪ್ರತಿಷ್ಠಾಪಿಸಿತು.

ಅಷ್ಟು ಹೊತ್ತಿಗಾಗಲೇ ಈ ಕುಂಬ್ಳೆ ಬಿಡುವಿದ್ದಾಗ ...ವೊಮ್ಮೆ ಕಾಡು ಸುತ್ತಿ ಒಂದೆರಡು ಪ್ರಾಣಿ-ಪಕ್ಷಿಗಳ ...ಟೋ ತೆಗೆದಿದ್ದ. ಅದೊಂದು ಮಹಾನ್ ಸಾಧನೆ ...ಬಂತೆ ಪ್ರಚಾರವೂ ಸಿಗುತ್ತಿತ್ತು. ಬಿಜೆಪಿಗಳಿಗೆ ಇಷ್ಟೇ ...ಸಾಗಿತ್ತು, ಕುಂಬ್ಳೆಗೆ ವನ್ಯಜೀವಿ ಮಂಡಳಿಯನ್ನೇ ದಾನ ...ಮಾಡಿ ಕೃತಾರ್ಥರಾದರು.

ಅದು ಹಾಳಾಗಿ ಹೋಗಲಿ, ಈ ಕುಂಬ್ಳೆ ಮಂಡಳಿಯ ...ೈಸ್ ಚೇರ್‌ಮನ್ ಆದ ಮೇಲಾದರೂ ಅಲ್ಲಿ ಕುಳಿತು ...ದಾದರೂ ಕೆಲಸ ಮಾಡಿದನಾ ಅಂತ ನೋಡಿದರೆ ಅರಣ್ಯ ...ಶಾಖೆಯೊಳಗೊಂದು ಬಂಜರು ಭೂಮಿ ...ನೋಡಿದಂತಾಗುತ್ತದೆ.

...ಕುಂಬ್ಳೆ ವನ್ಯಜೀವಿ ಮಂಡಳಿಯ ಅಧಿಕಾರ ...ಹಿಸಿಕೊಂಡ ನಂತರ ಅರ್ಜೆಂಟಾಗಿ ನಾಗರಹೊಳೆ, ಹಾಸನ, ...ಮ ಘಟ್ಟ ಅಂತ ನಾಲ್ಕಾರು ಊರು ತಿರುಗಿದ. ಹೋಗಿ ...ದ ಕಡೆಯೆಲ್ಲ "ವನ್ಯಜೀವಿ ರಕ್ಷಣೆ ನಮ್ಮೆಲ್ಲರ ಕರ್ತವ್ಯ" ...ತ ಹೇಳಿಕೆ ಕೊಟ್ಟ. "ಪಶ್ಚಿಮ ಘಟ್ಟ ಉಳಿಸುತ್ತೇವೆ. ...ಗಾರಿಕೆ ಪ್ರದೇಶಗಳಲ್ಲಿ ಓಡಾಡಿ ಅರಣ್ಯನಾಶದ ಬಗ್ಗೆ ...ವಿ ತಯಾರಿಸಿ ಸರ್ಕಾರಕ್ಕೆ ಕೊಡ್ತೀನಿ" ಅಂತಲೂ ಅನೌನ್ಸ್ ...ಮಾಡಿದ್ದ.

ಇದೆಲ್ಲಾ ಆಗಿ ಈಗ ನಾಲ್ಕನೇ ವರ್ಷ ನಡೆಯುತ್ತಿದೆ. ...ರೆ ಅನಿಲ್ ಕುಂಬ್ಳೆ ಹೇಳಿದ್ದ ಒಂದು ಕೆಲಸವನ್ನೂ ...ಡಲಿಲ್ಲ. ಅಸಲಿಗೆ ಈತ ವಿಶ್ವೇಶ್ವರಯ್ಯ ಟವರ್‌ನಲ್ಲಿರುವ ...ಆಫೀಸಿಗೂ ನೆಟ್ಟಗೆ ಹೋದವನಲ್ಲ. ಒಂದು ಮೀಟಿಂಗ್ ...ತ ಮಾಡಲಿಲ್ಲ. ಕಳೆದ ಬೇಸಿಗೆಯಲ್ಲಿ ಬರಗಾಲ ಬಂದು ...ವಿ ಪ್ರಾಣಿಗಳಿಗೆ ಕುಡಿಯಲೂ ನೀರಿರದ ದುಃಸ್ಥಿತಿ ...ದಿದ್ದಾಗಲೂ ತಲೆ ಕೆಡಿಸಿಕೊಳ್ಳಲಿಲ್ಲ. ಇತ್ತೀಚಿಗೆ ...ನೆಗಳು ಬೆಂಗಳೂರಿಗೆ ಎಂಟ್ರಿ ನೀಡಿದಾಗಲೂ ಅನಿಲ್ ...ಬ್ಳೆ ವನ್ಯಜೀವಿ ಮಂಡಳಿಯಲ್ಲಿ 'ನೋ ಎಂಟ್ರಿ'ಯೇ..!

ಈ ಪುರುಷಾರ್ಥಕ್ಕೆ ಕುಂಬ್ಳೆಗೆ ಆ ಮಹತ್ವದ ಹುದ್ದೆ ...ಕೆ ನೀಡಬೇಕಿತ್ತೋ?

ಅಲಂಕಾರಕ್ಕೊಬ್ಬ ಅನಿಲ್


ಕರ್ನಾಟಕ ವನ್ಯಜೀವಿ ಮಂಡಳಿ (Karnataka ...ld Life Board) ಎಂಬುದೊಂದು ಶಾಸನಬದ್ಧ ...ರಾಜ್ಯದ ಮುಖ್ಯಮಂತ್ರಿ, ಅದರ ಚೇರ್‌ಮನ್ ...ರುತ್ತಾರೆ.

ಈಗ ಅನಿಲ್ ಕುಂಬ್ಳೆ ಇದರ ಕೋ-ಚೇರ್‌ಮನ್. ...ನ ಜೊತೆಗೆ ಸಂಜಯ್ ಗುಬ್ಬಿ, ಎಂ.ಎ. ಮಧ್ಯಸ್ಥ ...ಜಾ ಶಂಕರ್ ಹಾಗೂ ವಿಜಯ ಕುಮಾರ್ ಎಂಬ ...ರೂ ಇದ್ದಾರೆ. ಈ ಮಂಡಳಿಗೆ ಪ್ರತಿ ವರ್ಷ ರೂಪಾಯಿ ...ಷ್ಟು ಲಕ್ಷದ ತನಕ ಸರ್ಕಾರಿ ಅನುದಾನವೂ ಬರುತ್ತಿದೆ. ...ಟಕದ ಅರಣ್ಯ ರಕ್ಷಣೆ ಹಾಗೂ ನಿರ್ವಹಣೆಗೆ ಅರಣ್ಯ ಇಲಾಖೆಯೇ ಇದೆ. ಅಧಿಕಾರಿ ಮಟ್ಟದಿಂದ ಆರಂಭಿಸಿ ಫಾರೆಸ್ಟ್ ವಾಚರ್‌ಗಳ ತನಕ ಹತ್ತಾರು ಸಾವಿರ ಸಿಬ್ಬಂದಿಯೂ ಇದ್ದಾರೆ. ಈ ಇಲಾಖೆಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ರೂಪಿಸಿರುವ ಪ್ರತ್ಯೇಕ ಕಾಯ್ದೆ, ಕಾನೂನು ಹಾಗೂ ನಿಯಮಗಳೇ ಇವೆ.

ಅನಿಲ್ ಕುಂಬ್ಳೆ ತರದವರನ್ನು ನಂಬಿಕೊಂಡು ಈ ಇಲಾಖೆ ನಡೆಯುತ್ತಿರಲಿಲ್ಲ. ಆದರೂ ವನ್ಯಜೀವಿ ಮಂಡಳಿ ಅಂತ ಒಂದಿದೆಯಲ್ಲ, ಆ ಮಂಡಳಿಗೆ ಒಂದಿಷ್ಟು ಕಿಮ್ಮತ್ತಂತೂ ಇದೆ. ಅರಣ್ಯ ಹಾಗೂ ವನ್ಯಜೀವಿಗಳ ರಕ್ಷಣೆ ಕುರಿತಂತೆ ಒಂದಷ್ಟು ಸಲಹೆ ಸೂಚನೆ ನೀಡುವುದು. ಸರ್ಕಾರಿ ಪಾಲಿಸಿಗಳ ಕುರಿತಂತೆ ಎಕ್ಸ್‌ಪರ್ಟ್ ಒಪೀನಿಯನ್ ನೀಡುವ ಅವಕಾಶಗಳೆಲ್ಲಾ ಇವೆ. ಈ ಕೆಲಸಗಳೆಲ್ಲ ಆಗಬೇಕೆಂದರೆ ಮಂಡಳಿಯ ಮುಖ್ಯಸ್ಥನಾದವನು ಹೊಣೆಗಾರಿಕೆಯಿಂದ ವರ್ತಿಸಬೇಕಾಗುತ್ತದೆ. ತನ್ನ ಬದುಕಿನ ಆದ್ಯತೆಗಳಲ್ಲಿ ಈ ಕೆಲಸಕ್ಕೂ ಹೆಚ್ಚಿನ ಸಮಯ ನೀಡಬೇಕಾಗುತ್ತದೆ. ಆದರೆ ಕುಂಬ್ಳೆಗೆ ಇದರ ಬಗ್ಗೆ ಕಿಂಚಿತ್ತೂ ಗಮನವಿದ್ದಂತಿಲ್ಲ. ಹಾಗಂತ ಬರುತ್ತಿರುವ ಸಂಬಳ-ಸಾರಿಗೆ ಭತ್ಯೆಯನ್ನೇನೂ ಕುಂಬ್ಳೆ ಬೇಡ ಅನ್ನುತ್ತಿಲ್ಲ. ನಯಾಪೈಸೆಯಷ್ಟು ಕೆಲಸ ಮಾಡಿರದಿದ್ದರೂ ಈ ಕುಂಬ್ಳೆ ವನ್ಯಜೀವಿ ಮಂಡಳಿಗೆ ಯಾವ ರೀತಿಯಲ್ಲಿ ಲಕ್ಷಾಂತರ ರೂಪಾಯಿ ಖರ್ಚು ಮಾಡಿಸುತ್ತಿದ್ದಾನೆಂದು ದಾಖಲೆ ಸಹಿತದ ವಿವರಗಳು ಇಲ್ಲಿವೆ.

ಅನಿಲ್‌ನ ಅಂಧಾ ದರ್ಬಾರ್

2009ರಲ್ಲಿ ಮಂಡಳಿಯ ಕೋ-ಚೇರ್‌ಮನ್ ಆದ ಬಳಿಕವೂ ಬೆಂಗಳೂರಿನ ರಾಯಲ್ ಚಾಲೆಂಜರ್ಸ್ ಕ್ರಿಕೆಟ್ ಟೀಂನಲ್ಲಿ ಆಡುತ್ತಿದ್ದ ಕುಂಬ್ಳೆ ನಂತರ ಅದೇ ಟೀಂನ ಕೋಚ್ ಕೂಡ ಆದ. ಜೊತೆಯಲ್ಲಿ ಕರ್ನಾಟಕ ಕ್ರಿಕೆಟ್ ಅಸೋಸಿಯೇಷನ್ನಿನ ಅಧ್ಯಕ್ಷನೂ ಆದ ಆಗಲಿ, ಅದು ಅವನ ಆಯ್ಕೆ. ಅವನ ಇಷ್ಟದ ಕ್ಷೇತ್ರವೂ ಹೌದು. ಆದರೆ ವನ್ಯಜೀವಿ ಮಂಡಳಿಯ ಮುಖ್ಯಸ್ಥನಾಗಿ ಒಂದು ದಿನವೂ ಕಚೇರಿಗೆ ಬರದಿದ್ದರೂ ಅನಾಮತ್ತು 19.94 ಲಕ್ಷ ರೂಪಾಯಿ ಸರ್ಕಾರಿ ಹಣ ಖರ್ಚು ಮಾಡಿ ತನ್ನ ಚೇಂಬರ್ ನವೀಕರಿಸಿಕೊಂಡಿದ್ದಾನೆ. ಆಫೀಸಿನ ಫರ್ನೀಚರ್‌ಗೆಂದು ಮೂರು ಲಕ್ಷ ಸುರಿದಿದ್ದಾನೆ. ಏರ್ ಕಂಡೀಷನ್‌ಗಾಗಿ ಎರಡೂ ಕಾಲು ಲಕ್ಷ ಖರ್ಚಾಗಿದೆ. ಜೊತೆಗೆ ತನ್ನ ಓಡಾಟಕ್ಕೆ ಹಾಗೂ ಸ್ಟೇಟಸ್‌ಗೆ ತಕ್ಕ ಗಾಡಿ ಬೇಕೆಂದು 10.58 ಲಕ್ಷದ ದೊಡ್ಡ ಕಾರನ್ನೂ ಖರೀದಿಸಿದ್ದಾನೆ.


ರಮಾನಾಥ್ ರೈ

ಇದಾದ ಮೇಲೆ ಗಾಡಿ ಖರ್ಚು..!

ಅದಕ್ಕೂ ಹಲವು ಲಕ್ಷ ರೂಪಾಯಿ ಖರ್ಚಾಗಿದೆ.

ಇದೆಲ್ಲದರ ಆಚೆಗೆ ಸಂಬಳ ಇತ್ಯಾದಿಗೆಂದು ಪ್ರತಿ ವರ್ಷ ಎರಡೂ ಮುಕ್ಕಾಲು ಲಕ್ಷ ರೂಪಾಯಿಗಳನ್ನು ಯಾವ ಹಿಂಜರಿಕೆ, ಸಂಕೋಚಗಳಿರದೆ ಪಡೆದು ಜೇಬಿಗಿಳಿಸಿದ್ದಾನೆ. ವರ್ಷಕ್ಕೆ ಮೂವತ್ತು ಸಾವಿರ ರೂಪಾಯಿ ತನಕ ಫೋನ್ ಖರ್ಚು. ಒಂದು ಲಕ್ಷ ರೂ. ತನಕ ಇತರ ಖರ್ಚೆಂದು ಮಂಡಳಿಯ ಹಣ ಹರಿಸಿದ್ದಾನೆ.

ಇದರರ್ಥ, ಅನಿಲ್ ಕುಂಬ್ಳೆ ಹಣ ದುರುಪಯೋಗ ಮಾಡಿದ್ದಾನೆ ಅಥವಾ ಭ್ರಷ್ಟಾಚಾರ ಮಾಡಿದ್ದಾನೆ ಅಂತಲ್ಲ, ಆದರೆ ನೈತಿಕತೆ ಹಾಗೂ ಹೊಣೆಗಾರಿಕೆ ಇರದ ನಡವಳಿಕೆಗಳಿವು. ಒಪ್ಪಿಕೊಂಡ ಕೆಲಸ ಮಾಡಲಾಗದವನು ಅದಕ್ಕಾಗಿ ಸಮಯ ನೀಡಲಾಗದವನಿಗೆ ಕಾರೇಕೆ ಬೇಕು? ಆಫೀಸಿನ ಅಲಂಕಾರವೇಕೆ ಬೇಕು? ಎಂಬ ಪ್ರಶ್ನೆ ಇದು.

ಮಂಡಳಿಯಲ್ಲಿ RSS ಗುಂಪು

ಅನಿಲ್ ಕುಂಬ್ಳೆಯ ಕತೆ ಹೀಗಾದ್ದರೆ ವನ್ಯಜೀವಿ ಮಂಡಳಿಯ ಇತರರ ಪಾಡು ಹಾಗೇ ಇದೆ. ಮಂಡಳಿಯ ಮೆಂಬರ್‌ಗಳ ಪೈಕಿ ಬಹುತೇಕರು ಬ್ರಾಹ್ಮಣರಾಗಿದ್ದಾರೆ. ಇವರಲ್ಲಿ ಕೆಲವರು RSS ಗುಂಪಿನ ಜನ.

ಸಂಜಯ್ ಗುಬ್ಬಿ ಎಂಬಾತ ಈ ಮೊದಲು ಕುಖ್ಯಾತ ಹುಲಿ ಸಂಶೋಧಕ ಉಲ್ಲಾಸ ಕಾರಂತ್ ಜೊತೆಯಲ್ಲಿದ್ದಾತ. ಪಕ್ಷಾಂತರಿ ಪ್ರವೀಣ ರಾಜಕಾರಣಿ ವಿ. ಸೋಮಣ್ಣನ ಗೆಳೆತನವೂ ಈ ಗುಬ್ಬಿಗಿದೆ. ಇನ್ನೂ ಎನ್.ಎ. ಮಧ್ಯಸ್ಥ ಎಂಬುವರು ಪೂರ್ಣಪ್ರಜ್ಞಾ ಕಾಲೇಜಿನ ನಿವೃತ್ತ ಅಧ್ಯಾಪಕ. ಇವರಿಗೆ ಪಕ್ಷಿಗಳ ಕುರಿತಂತೆ ಒಂದಷ್ಟು ತಿಳುವಳಿಕೆ ಇದೆಯಾದರೂ ಮಂಡಳಿಯ ಮೆಂಬರ್ ಆಗಿ ಮಾಡಿರುವ ಕೆಲಸ ಅಷ್ಟಕಷ್ಟೆ. ಗಿರಿಜಾ ಶಂಕರ್ ಎಂಬ ಇನ್ನೊಬ್ಬ ಮೆಂಬರ್ ಕೂಡಾ RSS ಹಿನ್ನೆಲೆಯಾತ. ಚಿಕ್ಕಮಗಳೂರಿನ ಈತನೂ ಉಲ್ಲಾಸ್ ಕಾರಂತನ ಪಟಾಲಂನವರು.



ಇವರೆಲ್ಲಾ ಒಬ್ಬರ ಬೆನ್ನನ್ನು ಇನ್ನೊಬ್ಬ ಕೆರೆಯುತ್ತಾ ಒಟ್ಟಿನಲ್ಲಿ ಅಧಿಕಾರ ಮತ್ತಿತರ ಸವಲತ್ತುಗಳೆಲ್ಲಾ ತಮ್ಮ ವಲಯದೊಳಗೇ ಇರುವಂತೆ ನೋಡಿಕೊಳ್ಳುತ್ತಾರೆ. ಇದಕ್ಕೆ ಸಾಕ್ಷಿಯೆಂದರೆ ಅನಿಲ್ ಕುಂಬ್ಳೆ ತಾನೇ ಸ್ಥಾಪಿಸಿರುವ 'ಜಂಬೋ ವನ್ಯಜೀವಿ ಪ್ರಶಸ್ತಿ'ಯನ್ನೂ ಉಲ್ಲಾಸ ಕಾರಂತನಿಗೆ ವಿತರಿಸಿದ್ದು!

ಈ ಪ್ರಶಸ್ತಿಯ ಹಿಂದೆ ಅನಿಲ್ ಕುಂಬ್ಳೆಯ ವ್ಯಾಪಾರಿ ಬುದ್ಧಿ ಎದ್ದು ಕಾಣುವಂತಿದೆ.

ಅದರ ಕತೆ ಹೀಗಿದೆ.

ಕುಂಬ್ಳೆ ಫೌಂಡೇಶನ್ & ಜಂಬೋ ಪ್ರಶಸ್ತಿ

ತಾನು ಕಾಲಿಟ್ಟಲೆಲ್ಲಾ ಕಾಸು ಹಾಗೂ ಕೀರ್ತಿಗೆ ಬರುವ ಅವಕಾಶಗಳನ್ನು ಹುಡುಕುವುದೇ ಅನಿಲ್ ಕುಂಬ್ಳೆಯ ಚಾಳಿ. ಕುಂಬ್ಳೆ ವನ್ಯಜೀವಿ ಮಂಡಳಿಯ ಮುಖ್ಯಸ್ಥನಾಗಿ ನೇಮಕಗೊಂಡ ಮೇಲೆ ಯಾವ ಮಹತ್ಕಾರ್ಯಗಳನ್ನು ಮಾಡದಿದ್ದರೂ ವನ್ಯಜೀವಿಗಳಿಗೆ ಸಂಬಂಧಿಸಿದಂತೆ 'ಕುಂಬ್ಳೆ ಫೌಂಡೇಶನ್' ಎನ್ನುವ ಸಂಸ್ಥೆ ಸ್ಥಾಪಿಸಿದ. ಚಿಕ್ಕವನಾಗಿದ್ದಾಗ ಮನೆಯಲ್ಲಿ ಸಾಕಿದ್ದ ಅಥವಾ ಓಡಾಡಿಕೊಂಡಿರುತ್ತಿದ್ದ ಇಲಿ, ಬೆಕ್ಕು, ಹಾರಾಡಿಕೊಂಡಿದ್ದ ಪಾರಿವಾಳಗಳನ್ನೇ ದೊಡ್ಡದೆಂದು ಪ್ರಚಾರ ಮಾಡಿಕೊಂಡು 'ವನ್ಯಪ್ರೇಮಿ' ಎನಿಸಿಕೊಂಡ. ಅಲ್ಲಿ ಇಲ್ಲಿ ಓಡಾಡಿ ತೆಗೆದಿದ್ದ ಕಾಡು ಪ್ರಾಣಿಗಳ ಫೋಟೋಗಳನ್ನು ತೋರಿಸಿಯೇ ವನ್ಯಜೀವಿ ತಜ್ಞ ಎನಿಸಿಕೊಂಡಿದ್ದ. ಆ ಕ್ಷೇತ್ರದಲ್ಲಿರುವ 'ಬ್ರಾಹ್ಮಣ'ರು ಲಾಬಿ ನಡೆಸಿ, ಪುರೋಹಿತರ ಪಾರ್ಟಿ ಬಿಜೆಪಿ ಸರ್ಕಾರದ ಮೇಲೆ ಪ್ರಭಾವ ಬೀರಿ ಕುಂಬ್ಳೆಗೊಂದು ಹುದ್ದೆ ಕೊಡಿಸಿದ ಮೇಲೆ ಕುಂಬ್ಳೆ ಈ ಫೌಂಡೇಶನ್ ಸ್ಥಾಪಿಸಿದ. ಇದಾದ ತಕ್ಷಣ ತನ್ನ ಫೌಂಡೇಶನ್ ವತಿಯಿಂದಲೇ 'ಜಂಬೋ ಪ್ರಶಸ್ತಿ' ಸ್ಥಾಪಿಸಿದ. ಬಯೋಕಾನ್ ಮುಂತಾದ ಮಾಲಿನ್ಯಕಾರಕ ಖಾಸಗಿ ಕಂಪನಿಗಳಿಂದ ಹಣ ಎತ್ತಿ ಉಲ್ಲಾಸ ಕಾರಂತನಿಗೊಂದು ಹಾಗೂ ಅರಣ್ಯ ಇಲಾಖೆಯ ಕೆಲವರಿಗೆ ಪ್ರಶಸ್ತಿ ಕೊಟ್ಟು ವನ್ಯಜೀವಿ ಮಂಡಳಿಯ ಚಟುವಟಿಕೆಗಳನ್ನು ಪೂರ್ತಿ ನಿರ್ಲಕ್ಷಿಸಿ ಬಿಟ್ಟ. ಆದರೆ ಆ ಸ್ಥಾನಮಾನ ಬಳಸಿಕೊಂಡು ತನ್ನ ಫೌಂಡೇಶನ್‌ಗೆ ಪ್ರಚಾರ ಗಿಟ್ಟಿಸಿಕೊಂಡು ಬೀಗ ತೊಡಗಿದ. ಆಶ್ಚರ್ಯ ಅಂದರೆ ಒಂದು ಸಾರಿ ಪ್ರಶಸ್ತಿ ಕೊಟ್ಟದ್ದೇ ಬಂತು ಆಮೇಲೆ ಮೂರು ವರ್ಷವಾದರೂ ಇನ್ನೊಬ್ಬರಿಗೆ ಪ್ರಶಸ್ತಿ ಕೊಡಲಿಲ್ಲ. ಈ ಪ್ರಶಸ್ತಿಗಿಟ್ಟಿರುವ 'ಜಂಬೋ' ಅಂದರೆ ಆನೆ ಎಂಬ ಅರ್ಥವಿದೆಯಾದರೂ ಅದು ಅನಿಲ್ ಕುಂಬ್ಳೆಗಿರುವ ನಿಕ್‌ನೇಮ್ ಕೂಡಾ ಆಗಿದೆ.

ಈಗ ಹೇಳಿ...

ಅನಿಲ್ ಕುಂಬ್ಳೆಯಿಂದ ಕರ್ನಾಟಕದ ಅರಣ್ಯ ಹಾಗೂ ವನ್ಯಜೀವಿಗಳಿಗೆ ಏನಾದರೂ ಉಪಯೋಗವಿದೆಯಾ?

ಕುಂಬ್ಳೆ ಈಗ ಮುಂಬೈ ಇಂಡಿಯನ್ಸ್ ಟೀಂನ ಕೋಚ್ ಆಗಿ ಸೇರಿಕೊಂಡಿದ್ದಾನೆ. ಟೆನ್‌ವಿಕ್ ಎಂಬ ಕ್ರೀಡಾ ಕಂಪನಿ ನಡೆಸುತ್ತಿದ್ದಾನೆ. ತನ್ನ ಮೊದಲ ಹಾಗೂ ಕೊನೆಯ ಆದ್ಯತೆ ಕ್ರಿಕೆಟ್ ಹಾಗೂ ಕ್ರಿಕೆಟ್ ಬ್ಯುಸಿನೆಸ್ ಮಾತ್ರ ಆಗಿದೆ ಎಂಬುದಕ್ಕೆ ತಾನೇ ಸಾಕ್ಷಿ ಪುರಾವೆ ನೀಡುತ್ತಿದ್ದಾನೆ.

ಅರಣ್ಯ ಸಚಿವ ರಮಾನಾಥ ರೈ ಇದನ್ನೆಲ್ಲಾ ಗಮನಿಸಬೇಕಿದೆ.


ಅನಿಲ್ ಕುಂಬ್ಳೆಯಂತಹ ನಿಷ್ಪ್ರಯೋಜಕರನ್ನು ವನ್ಯಜೀವಿ ಮಂಡಳಿಯಿಂದ ಹೊರ ಕಳುಹಿಸಿ ಪರಿಸರ, ಪ್ರಾಮಾಣಿಕ ಕಾಳಜಿ ಹೊಂದಿರುವ ತಜ್ಞರನ್ನು ಆ ಸ್ಥಾನಕ್ಕೆ ತರಬೇಕಿದೆ.

• ಪಾರ್ವತೀಶ

ಟೆನ್‌ವಿಕ್, ಮುಂಬೈ ಇಂಡಿಯನ್ಸ್, KSCA ದಂಧೆಯಲ್ಲಿ ಮುಳುಗಿರುವ ವನ್ಯಜೀವಿ ಪ್ರೇಮಿ..!

ಕೆಲವು ಕಿಲಾಡಿಗಳಿರುತ್ತಾರೆ.

ಪುಗಸಟ್ಟೆ ಸಿಕ್ಕರೆ ಯಾವುದನ್ನು ಬೇಡ ಅನ್ನುವುದಿಲ್ಲ. ಕಳೆದ ನಾಲ್ಕು ವರ್ಷಗಳಿಂದ ಕರ್ನಾಟಕ ವನ್ಯಜೀವಿ ಮಂಡಳಿಯ ಮುಖ್ಯಸ್ಥನಾಗಿರುವ ಕುಂಬ್ಳೆ ಇದೇ ನಾಲ್ಕು ವರ್ಷಗಳಲ್ಲಿ ಬೇರೆ ಏನೇನು ಮಾಡುತ್ತಿದ್ದಾನೆಂದು ನೋಡಿ.



2008ರಲ್ಲಿ ಕ್ರಿಕೆಟ್‌ನಿಂದ ನಿವೃತ್ತನಾದ ಮೇಲೆ, 2009ರಲ್ಲಿ ವನ್ಯಜೀವಿ ಮಂಡಳಿಗೆ ನೇಮಕಗೊಂಡ ಮೇಲೂ ಕುಂಬ್ಳೆ ಬೆಂಗಳೂರಿನ ರಾಯಲ್ ಚಾಲೆಂಜರ್ಸ್ ಟೀಂ ಸೇರಿಕೊಂಡ. ಕೆಲಕಾಲ ಅಲ್ಲಿ ಆಡಿ ನಂತರ ಆ ಕ್ರಿಕೆಟ್ ಟೀಂನ ಕೋಚ್ ಆದ. ಈ ನಡುವೆ ಕರ್ನಾಟಕ ಸ್ಟೇಟ್ ಕ್ರಿಕೆಟ್ ಅಸೋಸಿಯಷನ್ನಿನ ಚುನಾವಣೆಗೆ ಸ್ಪರ್ಧಿಸಿ ಅಧ್ಯಕ್ಷನೂ ಆದ. ತನಗಿದ್ದ ಕೀರ್ತಿ ಹಾಗೂ ಪ್ರಭಾವವನ್ನು ಎನ್‌ಕ್ಯಾಶ್ ಮಾಡಿಕೊಳ್ಳಬೇಕೆಂದು ಟೆನ್‌ವಿಕ್ ಸ್ಪೋರ್ಟ್ಸ್ ಕಂಪನಿ ಶುರು ಮಾಡಿದ. ಚೆನ್ನೈನ ಏಂಜಲ್ ಇನ್‌ವೆಸ್ಟರ್ಸ್ ಎಂಬುವರ ಜೊತೆ ಸೇರಿ ಪ್ರಾರಂಭಿಸಿದ್ದ 'ಟೆನ್‌ವಿಕ್' ಶಾಲಾ ಕಾಲೇಜು ಮಕ್ಕಳಿಗೆ ಕ್ರೀಡಾ ತರಬೇತಿ ನೀಡುವ, ಕ್ರೀಡಾ ಪರಿಕರಗಳನ್ನು ಮಾರುವ ವ್ಯವಹಾರ ನಡೆಸುತ್ತಿದೆ. ಟೆನ್‌ವಿಕ್‌ನಲ್ಲಿ ಟೇಬಲ್ ಟೆನ್ನಿಸ್ ಆಟಗಾರ ಭಾರದ್ವಾಜ್ ಹಾಗೂ ಕುಂಬ್ಳೆಯ ಸೋದರ ದಿನೇಶ್ ಕುಂಬ್ಳೆ ಕೂಡಾ ಪಾಲುದಾರರಾಗಿದ್ದಾರೆ. ಇವರೇನು ಮಾಡಿದರೆಂದರೆ ತಮ್ಮ ಟೆನ್‌ವಿಕ್ ಕೇಂದ್ರದಲ್ಲಿ ಕ್ರಿಕೆಟ್ ತರಬೇತಿ ಪಡೆಯುತ್ತಿದ್ದ ಹುಡುಗರನ್ನು ಅನಿಲ್ ಕುಂಬ್ಳೆಯ ಪ್ರಭಾವ ಬಳಸಿಕೊಂಡು KSCAಯ ರಣಜಿ, ಅಂಡರ್ 19, ಅಂಡರ್ 16 ಟೀಂಗಳಿಗೆ ಹಾಗೂ ಕೆಲವರನ್ನು ರಾಯಲ್ ಚಾಲೆಂಜರ್ಸ್‌ನ IPL ಟೀಂಗಳಿಗೂ ಸೇರಿಸುತ್ತಿದ್ದರು. ಆಮೇಲೆ ಇದೊಂದು ದೊಡ್ಡ ವಿವಾದವಾಯಿತು.

ಈ ಟೆನ್‌ವಿಕ್ ಚೆನ್ನೈನ C-Cube Sports ಎಂಬ ಕಂಪನಿಯೊಂದಿಗೂ ಬ್ಯುಸಿನೆಸ್ ಪಾಲುದಾರಿಕೆ ಹೊಂದಿದೆ. ಅಸ್ತಿತ್ವಕ್ಕೆ ಬಂದ ಮೊದಲ ವರ್ಷದಲ್ಲೇ ಅನಿಲ್ ಕುಂಬ್ಳೆಯ ಟೆನ್‌ವಿಕ್ ಕಂಪನಿ 8 ಕೋಟಿ ರೂ.ನಷ್ಟು ವಹಿವಾಟು ನಡೆಸಿತ್ತು. 2014-15ರ ವೇಳೆಗೆ 40 ಕೋಟಿ ಟರ್ನ್ ಓವರ್ ಮಾಡುತ್ತೇನೆಂದು ಕುಂಬ್ಳೆ ಹೇಳಿಕೊಳ್ಳುತ್ತಿದ್ದಾನೆ.

ಇಲ್ಲಿ ಕುಂಬ್ಳೆ ಏನು ಯೋಚಿಸುತ್ತಿದ್ದಾನೆ ಗೊತ್ತೆ? ಭಾರತದ ಕ್ರೀಡಾ ಕ್ಷೇತ್ರವೀಗ ವಿಪರೀತ ಬ್ಯುಸಿನೆಸ್ ಸಾಧ್ಯತೆ ಹೊಂದುತ್ತಿದೆ. 2015ರ ವೇಳೆಗೆ ಕ್ರೀಡಾ ವಸ್ತುಗಳ ಮಾರುಕಟ್ಟೆ 18 ಸಾವಿರ ಕೋಟಿ ರೂ. ನಷ್ಟು ವಿಸ್ತರಿಸಲಿದೆ.


2019ರ. ವೇಳೆಗೆ ಕ್ರೀಡಾ ಪ್ರಾಯೋಜಕತ್ವ ವ್ಯವಹಾರವು 20 ಸಾವಿರ ಕೋಟಿ ರೂ. ತಲುಪುವ ಅಂದಾಜಿದೆ. ಅದೇ ರೀತಿ ಕ್ರೀಡಾ ತರಬೇತಿ, ಮ್ಯಾನೇಜ್‌ಮೆಂಟ್ ಉದ್ಯಮವೂ ಒಂದು ನೂರು ಕೋಟಿ ರೂಪಾಯಿಯಷ್ಟಾಗುವ ಅಂದಾಜಿದೆ.

ಇದರಲ್ಲಿ ತಾನೆಷ್ಟು ಪಾಲು ಗಿಟ್ಟಿಸಬಹುದೆಂದು ಯೋಚಿಸುತ್ತಿರುವ ಅನಿಲ್ ಕುಂಬ್ಳೆ ಈಗ ರಾಯಲ್ ಚಾಲೆಂಜರ್ಸ್ ಟೀಂ ತ್ಯಜಿಸಿ ಮುಂಬೈ ಇಂಡಿಯನ್ಸ್ ಟೀಂನ ಕೋಚ್ ಆಗಿ ಸೇರಿಕೊಂಡಿದ್ದಾನೆ.


ಇದು ರಿಲಯನ್ಸ್ ಗ್ರೂಪ್‌ನ ಟೀಂ!

ಶತಕೋಟ್ಯಾಧೀಶ್ವರ ಅಂಬಾನಿ ಜೊತೆ ಕೈ ಜೋಡಿಸಿ ತಾನೂ ತನ್ನ ಟೆನ್‌ವಿಕ್ ಕ್ರೀಡಾ ಕಂಪನಿಯೂ ನೂರಾರು ಕೋಟಿ ಗಳಿಸಬಹುದೆಂದು ಲೆಕ್ಕಾ ಹಾಕುತ್ತಿರುವ ಕುಂಬ್ಳೆಗೆ ಈ ಗದ್ದಲದಲ್ಲಿ ಮರೆತೇ ಹೋಗಿರುವ ಸಂಗತಿ ಯಾವುದು ಗೊತ್ತೆ?


ತಾನು ಕರ್ನಾಟಕ ವನ್ಯಜೀವಿ ಮಂಡಳಿಯ ಮುಖ್ಯಸ್ಥನೆಂಬ ವಿಚಾರ!


ಸವಿತಾ–ಸಿದ್ದೇಗೌಡ ಮದುವೆ ಸಂದರ್ಭದಲ್ಲಿ...



ಶವ ಹೂತಿಟ್ಟಿದ್ದ ಸ್ಥಳ...


ಸಿದ್ದೇಗೌಡನ ತಲೆಬುರುಡೆ ಮತ್ತು ಮೂಳೆಗಳು

ಮಳವಳ್ಳಿ: ಹತ್ಯೆಗೈದ 8 ವರ್ಷಗಳ ನಂತರ ಸೆರೆಸಿಕ್ಕ ಹಂತಕ


ಲೋಕೇಶ್

ಹೂತಿಟ್ಟ ಸಮಾಧಿಯೊಳಗಿಂದಲೂ ಸತ್ಯ ಹ್ಲೂಂಕರಿಸಿ ಬಿಡುತ್ತದೆನ್ನುವುದಕ್ಕೆ ಮಳವಳ್ಳಿ ತಾಲ್ಲೂಕಿನ ನೆಲಮಾಕನಹಳ್ಳಿ ಸಿದ್ದೇಗೌಡನ ಕೊಲೆ ಪ್ರಕರಣವೇ ಸಾಕ್ಷಿ. ಪತ್ನಿಯ ಅನೈತಿಕ ಸಂಬಂಧದ ಕಾರಣಕ್ಕೇ ಹತ್ಯೆಯಾಗಿದ್ದ ಸಿದ್ದೇಗೌಡನ ನಿಗೂಢ ಪ್ರಕರಣಕ್ಕೆ ಅನಾಮಧೇಯ ಪತ್ರವೊಂದು ಬರೋಬ್ಬರಿ ಎಂಟು ವರ್ಷಗಳ ನಂತರ ಹಠಾತ್ ಟ್ವಿಸ್ಟ್ ನೀಡಿದ್ದಲ್ಲದೆ ಹಂತಕನಿಗೆ ಜೈಲು ಹಾದಿಯನ್ನೂ ತೋರಿಸಿದೆ. ಅಂತೂ ಅಪರಾಧಗಳಿಗೆ **Longevity** ಇದ್ದರೂ **Infinity** ಇಲ್ಲವೆನ್ನುವುದು ಇದರಿಂದ ಮತ್ತೊಮ್ಮೆ ಸಾಬೀತಾದಂತಾಗಿದೆ.


ಡಿವೈಎಸ್ಪಿ ಚಿಕ್ಕಣ್ಣ


ಕಳೆದ ವಾರದ ಹಿಂದಷ್ಟೇ ಮಳವಳ್ಳಿಯ ಡಿವೈಎಸ್ಪಿ ಜಿ.ಕೆ.ಚಿಕ್ಕಣ್ಣನವರಿಗೆ ಅನಾಮಧೇಯ ಪತ್ರವೊಂದು ಬಂದಿತ್ತು. ಅದರಲ್ಲಿ ನೆಲಮಾಕನಹಳ್ಳಿಯ ಲೋಕೇಶ ಎಂಬಾತ ಸಿದ್ದೇಗೌಡನ ಹೆಂಡತಿ ಸವಿತಾಳೊಂದಿಗೆ ಅಕ್ರಮ ಸಂಬಂಧ ಇಟ್ಟುಕೊಂಡಿದ್ದು, ಇದನ್ನು ಪ್ರಶ್ನಿಸಿದ ಸಿದ್ದೇಗೌಡನನ್ನು ಲೋಕೇಶ ಕೊಲೆ ಮಾಡಿ ಶವವನ್ನು ತನ್ನ ಮನೆಯ ಹಾಲ್‌ನಲ್ಲಿ ಹೂತು ಹಾಕಿದ್ದಾನೆ ಎಂದು ಬರೆಯಲಾಗಿತ್ತು. ಪತ್ರ ಬರೆದವರ ಹೆಸರು ಇರಲಿಲ್ಲವಾದರೂ 'ಇಂತಿ ನೊಂದ ನತದೃಷ್ಟ ಹೆಣ್ಣು' ಎನ್ನುವ ಒಕ್ಕಣೆ ಇತ್ತು. ಅನಾಮಧೇಯ ಪತ್ರವಾದರೂ ಅದರಲ್ಲಿ ಸತ್ಯದ ಎಳೆ ಇರಬಹುದೆನ್ನುವ ಅನುಮಾನದಲ್ಲೇ ಡಿವೈಎಸ್ಪಿ ಚಿಕ್ಕಣ್ಣ, ಸಿಪಿಐ ಪ್ರತಾಪರೆಡ್ಡಿ, ಪಿಎಸ್‌ಐ ಸುಬ್ಬಯ್ಯ, ಮೊದಲಾದವರ ಟೀಮ್ ಲೋಕೇಶ್‌ನನ್ನು ಕಸ್ಟಡಿಗೆ ತೆಗೆದುಕೊಂಡು ವಿಚಾರಣೆ ಶುರು ಮಾಡುತ್ತಿದ್ದಂತೆ ಎಂಟು ವರ್ಷಗಳ ಹಳೆಯ ಕೊಲೆಯೊಂದು ಅನಾವರಣಗೊಳ್ಳುತ್ತಾ ಸಾಗಿತ್ತು.


ಪತಿ, ಪತ್ನಿ 'ಔರ್' ಅವನು

ನೆಲಮಾಕನಹಳ್ಳಿಯ ಸಿದ್ದೇಗೌಡ ತನ್ನ ಅಕ್ಕನ ಮಗಳಾದ ಸವಿತಾಳನ್ನು 15 ವರ್ಷಗಳ ಹಿಂದೆ ಮದುವೆ ಆಗಿದ್ದ. ಈ ದಂಪತಿಗೆ ಇಬ್ಬರು ಮಕ್ಕಳೂ ಇದ್ದರು. ಕುಡಿತ ದಾಸನಾಗಿದ್ದ ಸಿದ್ದೇಗೌಡ ಸವಿತಾಳಿಗೆ ದಿನಕಳೆದಂತೆ ಸಪ್ಪೆ ಅನ್ನಿಸತೊಡಗಿದ್ದ. ಅದೇ ಸಮಯಕ್ಕೆ ಊರಲ್ಲಿ ಬೀದಿ ಹೋರಿಯಂತೆ ಅಂಡಲೆದುಕೊಂಡು ಪಕ್ಕಾ ಪರೋಡಿಯಂತಿದ್ದ ಲೋಕೇಶ್ ಎಂಬಾತನಿಗೂ ಸವಿತಾಳ ಆಸೆ, ಅಸಹಾಯಕತೆಗಳ ಮೇಲೆ ಕಣ್ಣು ಬಿದ್ದಿತ್ತು. ಸಿದ್ದೇಗೌಡನ ಹೆಂಡದ ವೀಕ್‌ನೆಸ್ ಅರಿತಿದ್ದ ಲೋಕೇಶ ತನ್ನ ಕಾರ್ಯ ಸಾಧನೆಗಾಗಿ ಅದನ್ನೇ ಬಂಡವಾಳ ಮಾಡಿಕೊಳ್ಳಲು ನಿರ್ಧರಿಸಿದ. ಪ್ರತಿದಿನ ಸಿದ್ದೇಗೌಡನಿಗೆ ಮದ್ಯದ ಅಭ್ಯಂಜನ ಮಾಡಿಸುತ್ತಾ ಅವನ ಮನೆಗೆ ಬಂದುಹೋಗತೊಡಗಿದ ಲೋಕೇಶ್ ಕೆಲ ದಿನಗಳಲ್ಲೆ ಸವಿತಾಳೊಟ್ಟಿಗೆ ವ್ಯವಹಾರ ಕುದುರಿಸಿಕೊಂಡಿದ್ದ. ಸಿದ್ದೇಗೌಡನಿಲ್ಲದ ಸಂದರ್ಭದಲ್ಲಿ ಮನೆ ಹೊಕ್ಕುತ್ತಿದ್ದ ಲೋಕೇಶ್, ಸವಿತಾರ ಅಕ್ರಮ ಸಂಬಂಧ ಬಹಳ ದಿನಗಳವರೆಗೇನೂ ತನ್ನ 'ರಹಸ್ಯತೆ' ಉಳಿಸಿಕೊಳ್ಳಲಿಲ್ಲ. ಯಾವಾಗ ಊರಿಗೆ ಊರೇ ಲೋಕೇಶ–ಸವಿತಾಳ ಪಲ್ಲಂಗ ಪುರಾಣದ ಬಗ್ಗೆ ಮಾತನಾಡಲಾರಂಭಿಸಿತೋ ಆಗ ಕೆರಳಿದ ಸಿದ್ದೇಗೌಡ ಪತ್ನಿ ಸವಿತಾಳೊಂದಿಗೆ ಜಗಳವಾಡಿ, ಇದಕ್ಕೆಲ್ಲ ಫುಲ್‌ಸ್ಟಾಪ್ ಹಾಕುವಂತೆ ಧಮಕಿ ಹಾಕಿದ್ದ. ಆದರೆ ಕುಡುಕ ಗಂಡ ಸಿದ್ದೇಗೌಡನ ಜಗಳಕ್ಕಿಂತ ರೌಡಿ ಲೋಕೇಶ ನೀಡುವ ದೈಹಿಕ ಸುಖವೇ ಹಿತವಾಗಿದ್ದರಿಂದ ಸವಿತಾ ಲೋಕೇಶನೊಂದಿಗೆ ಕದ್ದುಮುಚ್ಚಿ ಗೆಳೆತನ ಮುಂದುವರೆಸೇ ಇದ್ದಳು. ಕೊನೆಗೊಮ್ಮೆ ಸಿಟ್ಟಿಗೆದ್ದ ಸಿದ್ದೇಗೌಡ ಹೆಂಡತಿ ಸವಿತಾಳ ಮೇಲೆ ಹಲ್ಲೆಯನ್ನೂ ಮಾಡಿದ್ದ. ಇದನ್ನೇ ನೆಪ ಮಾಡಿಕೊಂಡ ಆಕೆ ತವರು ಮನೆ ಸೇರಿದ್ದಳು.


ಇತ್ತ ಸವಿತಾ ತವರು ಮನೆ ಸೇರುತ್ತಿದ್ದಂತೆಯೇ ಪರೋಡಿ ಲೋಕೇಶ ವಿರಹವೇದನೆಯಿಂದ ಚಡಪಡಿಸತೊಡಗಿದ್ದ. ತನ್ನೂರಿನಲ್ಲೇ ಇದ್ದಾಗ ಸವಿತಾಳೊಂದಿಗೆ ಕದ್ದುಮುಚ್ಚಿ ನಡೆಸುತ್ತಿದ್ದ ಕಾಮಕೇಳಿ ತಪ್ಪಿ ಹೋದ್ದರಿಂದ, ಆಕೆ ತವರು ಮನೆ ಸೇರುವಂತೆ ಮಾಡಿದ ಗಂಡ ಸಿದ್ದೇಗೌಡನ ಮೇಲೆ ಲೋಕೇಶ ಸಿಡಿಮಿಡಿಗೊಂಡಿದ್ದ. ಸಿದ್ದೇಗೌಡನನ್ನೇ ನಿವಾರಿಸಿಬಿಟ್ಟರೆ ತಮ್ಮಿಬ್ಬರ ಪ್ರಣಯ ಪ್ರಸಂಗಕ್ಕೆ ಅಡಿಯೇ ಇರುವುದಿಲ್ಲವೆನ್ನುವ ಯಡವಟ್ಟು ತೀರ್ಮಾನಕ್ಕೆ ಬಂದ ಲೋಕೇಶ ಅದಕ್ಕಾಗಿ ಒಂದೊಳ್ಳೆ ಸಮಯ ಕಾಯುತ್ತಿದ್ದ.

2005ರ ಅದೊಂದು ರಾತ್ರಿ ಪಾನಗೋಷ್ಠಿಯ ನೆಪ ಮಾಡಿಕೊಂಡು ಲೋಕೇಶ, ಸಿದ್ದೇಗೌಡನನ್ನು ತನ್ನ ಮನೆಗೆ ಕರೆದೊಯ್ದಿದ್ದಾನೆ. ಇಬ್ಬರೂ ಸೇರಿ ಸಖತ್ತಾಗಿ ಕುಡಿದಿದ್ದಾರೆ. ಫುಲ್ ಟೈಟಾಗಿದ್ದ ಸಿದ್ದೇಗೌಡ ಮತ್ತಿನಲ್ಲಿ ಬಾಯಿ ಹರಿಬಿಟ್ಟು ತನ್ನ ಸಂಸಾರದ ಹರಿಕಥೆ ಆರಂಭಿಸಿದ್ದಾನೆ. 'ನೀನು ನನ್ನ ಹೆಂಡತಿಯಿಂದ ದೂರವಾಗು' ಅಂತ ಪಕ್ಕಾ ಪೀವೋಟು ಡೈಲಾಗನ್ನು ಸಿದ್ದೇಗೌಡ ಉದುರಿಸಿದ್ದೇ ತಡ ಸಿಟ್ಟಿಗೆದ್ದ ಲೋಕೇಶ ಅವನ ಕಪಾಳಕ್ಕೆ ಬಾರಿಸಿದ್ದ. ಒಬ್ಬರಿಗೊಬ್ಬರು ಕೈ ಮಿಲಾಯಿಸುವ ಹಂತಕ್ಕೆ ಜಗಳ ತಲುಪಿತ್ತು. ಇಂತಹ ಸುಸಂದರ್ಭಕ್ಕಾಗಿ ಕಾದು ಕುಳಿತಿದ್ದ ಲೋಕೇಶ ಪಕ್ಕದಲ್ಲೇ ಇದ್ದ ಡಿವಿಡಿ ಪ್ಲೇಯರ್‌ನ ಕೇಬಲ್‌ವೈರ್‌ನಿಂದ ಸಿದ್ದೇಗೌಡನ ಕುತ್ತಿಗೆಗೆ ಬಲವಾಗಿ ಬಿಗಿದಿದ್ದ. ಮೊದಲೇ ಮೈಮೇಲೆ ಖಬರ್ ಇಲ್ಲದಷ್ಟು ಪಾನಮತ್ತನಾಗಿದ್ದ ಸಿದ್ದೇಗೌಡನ ಪ್ರಾಣ ಹಾರಿಹೋಗಲು ಬಹಳ ಸಮಯವೇನೂ ಬೇಕಾಗಿರಲಿಲ್ಲ. ನೋಡನೋಡುತ್ತಲೇ ಆತ ಶವವಾಗಿ ಬಿದ್ದುಕೊಂಡಿದ್ದ.



ಪಿಎಸ್‌ಐ ಸುಬ್ಬಯ್ಯ


ಸಿದ್ದೇಗೌಡ

ಹೆಣವನ್ನು ಸುಟ್ಟುಬಿಡುವುದೇ ಉತ್ತಮವೆನ್ನುವ ತೀರ್ಮಾನಕ್ಕೆ ಬಂದ ಲೋಕೇಶ ತನ್ನ ಮನೆಯಲ್ಲೆ ಶವದ ಮೇಲೆ ಪೆಟ್ರೋಲ್ ಸುರಿದು ಬೆಂಕಿಹಚ್ಚಿದ್ದ. ಆದರೆ ದಟ್ಟವಾದ ಹೊಗೆ ತುಂಬಿಕೊಂಡಿದ್ದರಿಂದ ಜನರಿಗೆ ಗೊತ್ತಾಗುತ್ತದೆಂಬ ಭಯಕ್ಕೆ ಬಿದ್ದ ಆತ ಬೆಂಕಿಯನ್ನು ಆರಿಸಿ ಮನೆಗೆ ಬೀಗ ಜಡಿದು ಅಲ್ಲಿಂದ ಪರಾರಿಯಾಗಿದ್ದ. ಹಾಗಂತ ಹೆಣವನ್ನು ಹಾಗೇ ಬಿಡುವಂತಿರಲಿಲ್ಲ. ಅದಕ್ಕೊಂದು ಗತಿ ಕಾಣಿಸಲೇ ಬೇಕಿತ್ತು. ಅವನ ಅದೃಷ್ಟಕ್ಕೆ ಮಾರನೆ ದಿನ ರಾತ್ರಿ ಜೋರಾಗಿ ಮಳೆ ಬೀಳುತ್ತಿದ್ದರಿಂದ ಜನರ್‍ಯಾರು ಮನೆ ಬಿಟ್ಟು ಹೊರಬರುವುದಿಲ್ಲ ಎಂಬುದನ್ನು ಖಾತ್ರಿಪಡಿಸಿ ಕೊಂಡು ವಾಪಸ್ಸು ಬಂದವನೇ ಮನೆಯ ಹಾಲ್‌ನಲ್ಲೇ ಗುಂಡಿ ತೆಗೆದು ಸಿದ್ದೇಗೌಡನ ಶವವನ್ನು ಮೂಟೆಕಟ್ಟಿ ಹೂತುಬಿಟ್ಟ!


ಲಕ್ಷ್ಮಣ್ ಹೂಗಾರ್

ಟಿವಿ ಚಾನಲ್: ವಲಸೆ-ವಜಾ ಇತ್ಯಾದಿ


ರಂಗನಾಥ್ ಭಾರದ್ವಾಜ್

ಕನ್ನಡ ಟಿವಿ ಲೋಕದೊಳಗೆ ಇನ್ನೊಂದು ಸುತ್ತಿನ ವಲಸೆ ಹಾಗೂ ವಜಾ ಪ್ರಕರಣಗಳು ಚಾಲೂ ಆಗುತ್ತಿವೆ. ಇದು ಸಣ್ಣ ಪ್ರಮಾಣದ್ದೇ ಆದರೂ ಸುದ್ದಿ ಸುದ್ದಿಯೇ ತಾನೆ.

ಮೊದಲಿಗೆ ಹೇಳಬೇಕೆಂದರೆ, ಲಕ್ಷ್ಮಣ್ ಹೂಗಾರ್ ಟಿವಿ9 ಬಿಟ್ಟು ಸುವರ್ಣ ಚಾನಲ್ ಸೇರಿಕೊಂಡಿದ್ದಾರೆ. ಟಿವಿ ಜರ್ನಲಿಸ್ಟ್‌ಗಳ ಪೈಕಿ ರಾಜಕೀಯ ವಿಶ್ಲೇಷಕನಾಗಿ ತನ್ನದೇ ಆದ ಶೈಲಿ, ನಿಖರ ಮಾಹಿತಿ ಹಾಗೂ ವೇಗ ಎಲ್ಲವನ್ನೂ ಹೊಂದಿರುವ ಲಕ್ಷ್ಮಣ ಹೂಗಾರ್ ಟಿವಿ9 ಬಿಡಲು ವಿಶೇಷ ಸಮಸ್ಯೆಯೇನೂ ಇರಲಿಲ್ಲ. ಸುವರ್ಣದಲ್ಲೀಗ ಅವರು **Associate Editor** ಆಗಿದ್ದಾರೆ. ಜೊತೆಗೆ ಹುದ್ದೆಗೆ ತಕ್ಕ ಸಂಬಳವೂ ಉಂಟು. **TV9** ನಲ್ಲಿ ಆ ಅವಕಾಶವಿರಲಿಲ್ಲವಾದ್ದರಿಂದ ಲಕ್ಷ್ಮಣ್ ಹೂಗಾರ್ ಸಹಜವಾಗಿಯೇ ಬೆಳೆಯುವ ಅವಕಾಶವಿರುವೆಡೆ ಹೆಜ್ಜೆ ಹಾಕಿದ್ದಾರೆ.

ಈ ನಡುವೆ ಸುವರ್ಣ ಚಾನೆಲ್‌ನಿಂದ ರಂಗನಾಥ್ ಭಾರದ್ವಾಜ್, ಅರವಿಂದ ಕೇಶೂರಾಂ, ದಿವ್ಯ ಶ್ವೇತ ಹಾಗೂ ಉದಯ ಮರಕಿಣಿ ಹೊರ ಬೀಳುವ ಸಂದರ್ಭ ಎದುರಾಗಿದೆ. ಇವರ ಪೈಕಿ ರಂಗನಾಥ್ ಭಾರದ್ವಾಜ್‌ಗೆ ಜುಲೈ 16 ಡೆಡ್‌ಲೈನ್ ನೀಡಲಾಗಿದ್ದು ಅಷ್ಟರೊಳಗಾಗಿ ಅವರು ಟಿವಿ9 ಸೇರಿದರೂ ಆಶ್ಚರ್ಯವಿಲ್ಲ. ಉಳಿದವರ ಕತೆ ಏನಾಗುವುದೋ ಗೊತ್ತಿಲ್ಲ.

ಜನಶ್ರೀಲಿ ವಿಜಯ್ ನರಗುಂದ್!

ಕೊನೆಗೂ ಜನಶ್ರೀ ಚಾನಲ್‌ಗೊಬ್ಬರು ಸಾರಥಿ ಸಿಕ್ಕಿದ್ದಾರೆ. ಅದು ವಿಜಯ್ ನರಗುಂದ್!

ಅನಂತ್ ಚಿನಿವಾರ್ ಜನಶ್ರೀಯಿಂದ ಸುವರ್ಣಗೆ ಚಾನಲಾಂತರ ಮಾಡಿದ ಮೇಲೆ ಜನಶ್ರೀಗೆ ಕ್ಯಾಪ್ಟನ್ ಯಾರೆಂಬ ಕುತೂಹಲವಿತ್ತು. ಶಶಿಧರ್ ಭಟರಿಗೆ ಆಸಕ್ತಿ ಇತ್ತಾದರೂ ಹಣ ಹಾಕುವರೊಬ್ಬರು ಸಿಕ್ಕರೆ ಮಾತ್ರ ಅವರಿಗೆ ಅವಕಾಶವಿತ್ತು.


ಬಹುಶಃ ಹಾಗಾಗಲಿಲ್ಲೆಂದು ಕಾಣುತ್ತೆ. ಶಶಿಧರ್ ಭಟ್ ಒಂದೆಡೆ ತಮ್ಮ ಪ್ರಯತ್ನ ಕೈಬಿಡುತ್ತಿದ್ದಂತೆ ಕಾರ್ನರ್ ಕಿಕ್‌ನಿಂದ ಅನಿರೀಕ್ಷಿತ ಗೋಲು ಹೊಡೆದಂತೆ ವಿಜಯ್ ನರಗುಂದ್ ಜನಶ್ರೀಯ ಹೆಡ್ ಆಗಿ ಬಂದಿದ್ದಾರೆ.

ಹಿಂದೆ ಕೆಲಕಾಲ ಜನಶ್ರೀಯಲ್ಲೇ ಇದ್ದ ವಿಜಯ್ ನರಗುಂದ ಆ ನಂತರ ಸಂಯುಕ್ತ ಕರ್ನಾಟಕ ಸೇರಿದ್ದರು. ಈಗ ಪುನಃ ಜನಶ್ರೀಗೆ...

ಜನಶ್ರೀಯ ಆಡಳಿತ ಮಂಡಳಿಯ ನಿರ್ದೇಶಕರಲ್ಲಿ ಒಬ್ಬರಾದ ಬಿ.ಕೆ.ಬಿ.ಎನ್. ಮೂರ್ತಿಯವರೇ ಈಗ ಜನಶ್ರೀಯ ಪೂರ್ಣ ಉಸ್ತುವಾರಿ ವಹಿಸಿಕೊಂಡಿದ್ದಾರೆ ಎನ್ನಲಾಗಿದೆ. ವಿಜಯ್ ನರಗುಂದ್ ಒಂದು ರೀತಿಲಿ ಮೂರ್ತಿಯವರ ಕ್ಯಾಂಡಿಡೇಟ್.

ಜನಶ್ರೀ ಮತ್ತೆ ರೇಸಿಗೆ ಬೀಳಲಿ.. ಒಳಿತಾಗಲಿ... ಗೆಲ್ಲಲಿ.

ಚಿಕ್ಕಬಳ್ಳಾಪುರ : ಶಾಸಕ ಸುಧಾಕರ್ ಅಭಿಮಾನಿ ಪತ್ರಕರ್ತರ ಸಂಘ!


ಸುಧಾಕರ್

ಇದೊಂದು ತಮಾಷೆ ಮಾತಷ್ಟೆ!

ಇಂತಾದ್ದೊಂದು ಸಂಘ ಅಧಿಕೃತವಾಗಿ ಇರಲು ಸಾಧ್ಯವಿಲ್ಲ ನಿಜ.

ಆದರೆ ಚಿಕ್ಕಬಳ್ಳಾಪುರದ ಪತ್ರಕರ್ತರ ವಲಯದಲ್ಲಂತೂ ಇಂತಾದ್ದೊಂದು ಅಗೋಚರ ಸಂಘವಂತೂ ಇದೆ ಎನ್ನಲಾಗಿದೆ. ಅಲ್ಲಿನ ಶಾಸಕ ಡಾ. ಸುಧಾಕರ್‌ರನ್ನು ಓಲೈಸಲು ಸದಾ ಯತ್ನಿಸುವ ಕೆಲ ಪತ್ರಕರ್ತರು ದಿನ ಬೆಳಗಾದರೆ ತಾವು ಸುಧಾಕರ್ ಬಗ್ಗೆ ಬರೆದಿರುವ ವರದಿಗಳು, ಚಾನಲ್‌ನಲ್ಲಿ ಪ್ರಸಾರಗೊಂಡ ಸುದ್ದಿಗಳನ್ನು ಶಾಸಕರಿಗೆ ತೋರಿಸಿ ಇಂಪ್ರೆಸ್ ಮಾಡಲು ಯತ್ನಿಸುತ್ತಿರುವ ಸುದ್ದಿಗಳಿವೆ. ಒಂದು ವೇಳೆ ಶಾಸಕರು ಒಳ್ಳೆಯ ಕೆಲಸ ಮಾಡುತ್ತಿದ್ದರೆ ಅದಕ್ಕೆ ತಕ್ಕಷ್ಟು ಪ್ರಚಾರ ನೀಡಿದ್ದಲ್ಲಿ ಅದೇನೂ ತಪ್ಪಲ್ಲ. ಆದರೆ ಓಲೈಸುವ ಕಾರಣಕ್ಕಾಗಿಯೇ ಬಿಟ್ಟೂ ಬಿಡದೆ ಪ್ರಚಾರಾಂದೋಲನದ ರೀತಿಯಲ್ಲಿ ತಮ್ಮ ಕೈಲಿರುವ ಮೀಡಿಯಾಗಳನ್ನು ಬಳಸಿದರೆ ಅದು ಅಭಾಸಕಾರಿಯಲ್ಲವೇ?

ಪತ್ರಕರ್ತ ಮಿತ್ರರು ಈ ಸೂಕ್ಷ್ಮ ಅರಿತರೆ ಒಳಿತು.

ಮೀಡಿಯಾ ಮಸಾಲ

ಸಿದ್ದೇಗೌಡ ಸಮಾಧಿಯ ಮೇಲೆ ರಾಸಲೀಲೆ

ಕುಡಿತಕ್ಕೆ ದಾಸನಾಗಿದ್ದ ಸಿದ್ದೇಗೌಡ, ಪತ್ನಿ ಸವಿತಾಳ ಅನೈತಿಕ ಸಂಬಂಧದಿಂದ ಬೇಸತ್ತು ದೇಶಾಂತರ ಹೋಗಿರಬೇಕೆಂದು ಊರಿನವರು ತಿಳಿದುಕೊಂಡರು. ಅವನ ಬಗ್ಗೆ ಕಾಳಜಿ ವಹಿಸುವಂಥ ಆತ್ಮೀಯತೆಯನ್ನು ಸಿದ್ದೇಗೌಡ ಯಾರಲ್ಲೂ ಉಳಿಸಿ ಕೊಂಡಿರಲಿಲ್ಲ. ಹಾಗಾಗಿ ಯಾರೂ ಅಷ್ಟಾಗಿ ಅವನ ಕಣ್ಮರೆ ಬಗ್ಗೆ ತಲೆ ಕೆಡಿಸಿಕೊಳ್ಳಲಿಲ್ಲ. ಗಂಡ ಸಿದ್ದೇಗೌಡ ಕಾಣೆಯಾದ ನಂತರ ಸವಿತಾ ನೆಲಮಾಕನಹಳ್ಳಿಗೆ ವಾಪಾಸು ಬಂದವಳೇ ಲೋಕೇಶನೊಂದಿಗಿನ ಅಕ್ರಮ ಸಂಬಂಧವನ್ನು ರಾಜಾರೋಷವಾಗಿ ಮುಂದುವರಿಸಿದ್ದಳು. ಸಿದ್ದೇಗೌಡನ ಶವವನ್ನು ಹೂತುಹಾಕಿದ ಸ್ಥಳದಲ್ಲೇ ಮಂಚದ ಮೇಲೆಯೇ ಇವರಿಬ್ಬರ ರಾಸಲೀಲೆ ಎರಡು ವರ್ಷಗಳವರೆಗೆ ಮುಂದುವರೆದಿತ್ತು.

ಪಾಪಪ್ರಜ್ಞೆಯೋ, ಭಯವೋ ಗೊತ್ತಿಲ್ಲ 2007ರಲ್ಲಿ ಆ ಮನೆಗೆ ಬೀಗ ಜಡಿದ ಲೋಕೇಶ ಮಳವಳ್ಳಿಯ ಎನ್‌ಇಎಸ್ ಲೇಔಟ್‌ನಲ್ಲಿ ಹೊಸ ಮನೆ ಮಾಡಿ ಸವಿತಾಳ ಸಮೇತ ಅಲ್ಲಿ ಸೆಟ್ಲ್ ಆಗಿದ್ದ. ಕಳೆದ 6 ವರ್ಷಗಳಿಂದ ಸಿದ್ದೇಗೌಡ ಸಮಾಧಿಯಾಗಿದ್ದ ಮನೆ ಅಕ್ಷರಶಃ ಭೂತ ಬಂಗಲೆಯಂತೆ ಅನಾಥವಾಗಿ ಬಿದ್ದುಕೊಂಡಿತ್ತು.

ವಾರದ ಹಿಂದಷ್ಟೇ ಮತ್ತೊಂದು ಮದುವೆ

ಸಿದ್ದೇಗೌಡ ಕಾಣೆಯಾಗಿ 3 ವರ್ಷಗಳ ನಂತರ 2008ರಲ್ಲಿ ಆತ ಕಾಣೆಯಾದ ಬಗ್ಗೆ ಸಿದ್ದೇಗೌಡನ ಅಣ್ಣ ಕೆಂಪೇಗೌಡ ಎಂಬಾತ ದೂರು ನೀಡಿದ್ದ. ಅದೂ ಜಮೀನಿನ ವಿಷಯವಾಗಿ ಕೆಂಪೇಗೌಡ ಮತ್ತು ಸವಿತಾಳ ನಡುವೆ ವ್ಯಾಜ್ಯ ಹುಟ್ಟಿಕೊಂಡ ಪರಿಣಾಮವಾಗಿ ಅಂತಹದ್ದೊಂದು ದೂರು ದಾಖಲಾಗಿತ್ತು. ತನ್ನ ತಮ್ಮನ ಕಣ್ಮರೆಯ ಹಿಂದೆ ಲೋಕೇಶನ ಕೈವಾಡ ಇರುವುದಾಗಿ ಕೆಂಪೇಗೌಡ ಪೊಲೀಸರಿಗೆ ತಿಳಿಸಿದ್ದ. ಆಗ ಠಾಣೆಗೆ ಕರೆಸಿಕೊಂಡಿದ್ದ ಪೊಲೀಸರು ಲೋಕೇಶನ ಚಂದವಾದ ಕಥೆ ಕೇಳಿ ಬಿಟ್ಟು ಕಳಿಸಿದ್ದರು. ಆಗ ಕೆಂಪೇಗೌಡನನ್ನು ತಡವಿಕೊಂಡ ಲೋಕೇಶ ನಿನ್ನ ತಮ್ಮನಿಗೆ ಕಾಣಿಸಿದ ಗತಿಯನ್ನೇ ನಿನಗೂ ಕಾಣಿಸ್ತೀನಿ ಎಂದು ಬೆದರಿಕೆಯನ್ನೂ ಹಾಕಿದ್ದ. ಆದರೆ ದುಷ್ಟ ಲೋಕೇಶನ ಸಹವಾಸವೇ ಬೇಡವೆಂದು ಕೆಂಪೇಗೌಡ ಮತ್ತು ಊರಿನವರೆಲ್ಲಾ ತೆಪ್ಪಗಾಗಿದ್ದರು.

ಇತ್ತ ಸವಿತಾಳ ಜೊತೆ ಚಕ್ಕಂದ ಮುಂದುವರಿಸಿದ್ದ ಲೋಕೇಶ ಕೊಲೆ ರಹಸ್ಯ ಬಯಲಾಗುವುದಕ್ಕೂ 10 ದಿನಗಳ ಹಿಂದಷ್ಟೇ ಅಧಿಕೃತವಾಗಿ ಬೇರೊಬ್ಬಳನ್ನು ವಿವಾಹವಾಗಿದ್ದ. ಇದರಿಂದ ಸಿಟ್ಟಿಗೆದ್ದ ಸವಿತಾಳೇ ಹೀಗೊಂದು ಅನಾಮಧೇಯ ಪತ್ರ ಬರೆದಳೊ ಅಥವಾ ಸವಿತಾಳಂತೆಯೇ ಲೋಕೇಶನಿಂದ ಸಂಸಾರ ಭ್ರಷ್ಟಳಾದ ಮತ್ತ್ಯಾರೋ ಹೆಂಗಸು ಬರೆದಳೊ ಇಲ್ಲವೇ ಲೋಕೇಶನ ಗೌಡಿಸಂನಿಂದ ರೋಸಿ ಹೋಗಿದ್ದ ಊರಿನ ಜನರಲ್ಲೇ ಯಾರೋ ಒಬ್ಬರು ಇಂತಹ ಉಪಾಯ ಮಾಡಿದರೋ ಒಟ್ಟಿನಲ್ಲಿ ಕೊಲೆಗಡುಕ ಲೋಕೇಶ ಜೈಲು ಸೇರುವಂತಾಗಿದೆ.

ಅನಾಮಧೇಯ ಪತ್ರದ ಜಾಡು ಹಿಡಿದ ಪೊಲೀಸರು ಹಂತಕ ಲೋಕೇಶನನ್ನು ಬಂಧಿಸಿ ಸತ್ಯವನ್ನೆಲ್ಲ ಬಾಯಿಬಿಡಿಸಿದ ಮೇಲೆ ಶವವನ್ನು ಹೂತುಹಾಕಿದ್ದ ಜಾಗವನ್ನು ಅಗೆದಾಗ ಅಲ್ಲಿ ತಲೆಬುರುಡೆ, ಮೂಳೆಗಳು ಸಿಕ್ಕಿದ್ದವು. ಅವೆಲ್ಲವೂ ಸಿದ್ದೇಗೌಡನ ದೇಹದ ಪಳೆಯುಳಿಕೆ ಎಂಬುದೂ ಸಾಬೀತಾಗಿದೆ. ಪರಸ್ತ್ರೀ ಸವಿತಾ ಮೇಲಿನ ಮೋಹಕ್ಕಾಗಿ ಆಕೆಯ ಪತಿಯನ್ನೇ ಬರ್ಬರವಾಗಿ ಕೊಲೆ ಮಾಡಿ 8 ವರ್ಷಗಳ ಕಾಲ ಏನೂ ಗೊತ್ತಿಲ್ಲದವನಂತೆ ತಿರುಗಾಡಿಕೊಂಡಿದ್ದ ಲೋಕೇಶನ ಪೈಶಾಚಿಕ ಕೃತ್ಯದ ಬಗ್ಗೆ ನೆಲಮಾಕನಹಳ್ಳಿ ಗ್ರಾಮಸ್ಥರೇ ಬೆಚ್ಚಿಬಿದ್ದಿದ್ದಾರೆ. ಕಡೆಗಾದರೂ ಪರೋಡಿ ಲೋಕೇಶನ ಹಾವಳಿ ತಪ್ಪಿತಲ್ಲ ಅಂತ ಊರಿನವರು ನಿಟ್ಟುಸಿರು ಬಿಡುತ್ತಿದ್ದರೆ, ಅನಾಮಧೇಯ ಪತ್ರ ಬರೆದವರ್‍ಯಾರು ಎನ್ನುವ ಪ್ರಶ್ನೆ ಜನರನ್ನು ಇನ್ನೂ ಕಾಡುತ್ತಿದೆ....

● ನಾಗೇಶ್

'ಸಮಯ'ಕ್ಕೆ ಷರತ್ತುಗಳು!




ಹಾಲಿ ಸಿಬ್ಬಂದಿರಹಿತವಾಗಿ ನಡೆಯುತ್ತಿರುವ 'ಸಮಯ' ಚಾನಲ್ ಪುನಃ ಪೂರ್ಣ ಪ್ರಮಾಣದಲ್ಲಿ ಚಾಲೂ ಆಗಲೇಬೇಕಾದ ಅನಿವಾರ್ಯತೆ ಬಂದಂತೆ ಕಾಣುತ್ತಿದೆ.


'ಸಮಯ'ದ ಮಾಜಿ, ಹಾಲಿ ಹಾಗೂ ಭಾಗಶಃ ಮಾಲೀಕ ರಾಜಕಾರಣಿ ಮುರುಗೇಶ್ ನಿರಾಣಿಯವರು ನಾಳೆ ಮಾಜಿಯಾಗಲಿರುವ ಹಾಲಿ- ಭಾಗಶಃ ಮಾಲೀಕ ಸಚಿನ್ ನಾರಾಯಣ್‌ಗೆ ಹಾಕಿರುವ ಕಂಡೀಷನ್‌ಗಳೇ ಇದಕ್ಕೆ ಕಾರಣ.


ಬಂಡವಾಳದ ಕೊರತೆ ಹಾಗೂ ಕಡಿಮೆ TRP ಹೊಂದಿದ್ದ ಸಮಯ ಚಾನಲ್ ಏನೇ ಹೋರಾಟ ನಡೆಸಿದರೂ ಇನ್ನಿತರ ಚಾನಲ್‌ಗಳ ಪೈಪೋಟಿಯಲ್ಲಿ ಕೊಂಚ ನಿತ್ರಾಣಗೊಂಡಿತ್ತು. ಕೊನೆಕೊನೆಗೆ ಸಿಬ್ಬಂದಿಗೆ ಮೂರು ತಿಂಗಳಿಂದ ಸಂಬಳ ಕೊಡಲೂ ಆಗದೆ ಬಳಲಿತ್ತು. ನೂರಾರು ಜನ ಕೆಲಸ ಕಳೆದುಕೊಂಡರು. ಇದೆಲ್ಲದರಿಂದಾಗಿ ಸಮಯ ಅನಧಿಕೃತವಾಗಿ ಮುಚ್ಚಿದಂತೆಯೇ ಆಗಿತ್ತು. ಈಗ ಸಚಿನ್ ನಾರಾಯಣ್ ಮುರುಗೇಶ್ ನಿರಾಣಿಯವರಿಗೆ ಸಮಯ ಟಿವಿಯನ್ನು ನೀವೇ ವಹಿಸಿಕೊಳ್ಳಿ ಅಂತಾ ದುಂಬಾಲು ಬಿದ್ದಿದ್ದಾರೆ. ಅದಕ್ಕೆ ನಿರಾಣಿ 'ನಾನು ನಿಮಗೆ ಚಾನಲ್ ವಹಿಸಿಕೊಟ್ಟಾಗ ಅದು ಹೇಗಿತ್ತೊ ಅದೇ ಸ್ಥಿತಿಯಲ್ಲಿ ಕೊಟ್ಟರೆ ನೋಡೋಣ' ಅಂದಿದ್ದಾರೆ.

ಹಾಗಾಗಿ ಸಚಿನ್‌ಗೀಗ 'ಸಮಯ ಟಿವಿ'ಗೆ ಪುನಃ ಜೀವ ನೀಡಲೇಬೇಕಾದ ಅನಿವಾರ್ಯತೆ ಬಂದಿದೆ.

ಸೂಚನೆ: ಮೀಡಿಯಾ ಮಸಾಲಾಗ ಮಾಹಿತಿ ಕಳುಹಿಸುವವರು ಇನ್ನು ಮುಂದೆ kannadamediamasala@gmail.com (ಕನ್ನಡ ಮೀಡಿಯಾ ಮಸಾಲ)ಗೆ ನೇರವಾಗಿ ಕಳುಹಿಸಲು ಕೋರಿದೆ.







ದಾವಣಗೆರೆ ಎಂಪಿ ಎಲೆಕ್ಷನ್: 'ಕೈ' ಅಬ್ಬರದ ಮುಂದೆ 'ಕಮಲ' ಮಂಕು!

ದಾವಣಗೆರೆ ರಾಜಕಾರಣದಲ್ಲಿ ಈಗ ಎಂಪಿ ಎಲೆಕ್ಷನ್‌ನದ್ದೇ ಲೆಕ್ಕಾಚಾರ. ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಜಿಲ್ಲೆಯ ಏಳು ಕ್ಷೇತ್ರಗಳಲ್ಲಿ ವಿಜಯಪತಾಕೆ ಹಾರಿಸುವ ಮೂಲಕ ತನ್ನ ಅಧಿಪತ್ಯವನ್ನು ಮರುಸ್ಥಾಪಿಸಿದ್ದರೆ ಬಿಜೆಪಿ, ಕೆಜೆಪಿಗಳು ಅಕ್ಷರಶಃ ಧೂಳೀಪಟವಾಗಿ ಹೋಗಿವೆ. ಇದು ಮುಂಬರುವ ಲೋಕಸಭಾ ಚುನಾವಣೆ ಫಲಿತಾಂಶದ ಮೇಲೆ ಪ್ರತಿಫಲಿಸಬಹುದಾದರೂ ಯಥಾವತ್ ಇದೇ ರಿಸಲ್ಟ್ ನಿರೀಕ್ಷೆ ಮಾಡಲು ಸಾಧ್ಯವಿಲ್ಲ. ಕಾಂಗ್ರೆಸ್, ಬಿಜೆಪಿ, ಕೆಜೆಪಿ ಮೂರರಲ್ಲೂ ಅಂತಹ ಬೆಳವಣಿಗೆಗಳು ಘಟಿಸುತ್ತಿವೆ. ಹಾಗಾಗಿ ಎಲ್ಲಾ ಪಕ್ಷಗಳೂ ತಮ್ಮದೇ ತಾಲೀಮು ಶುರು ಹಚ್ಚಿಕೊಂಡಿವೆ. ಆದರೆ ಸದ್ಯದ ಕೈ ಪರವಿರುವ ಹವಾವನ್ನು 2014ರವರೆಗೂ ಕಾಯ್ದುಕೊಂಡಿದ್ದೇ ಆದಲ್ಲಿ ಬಿಜೆಪಿಯ ಹಾಲಿ ಸಂಸದ ಸಿದ್ದೇಶ್ವರ್ ಅಡಕೆ ತೋಟದತ್ತ ಮುಖ ಮಾಡಬೇಕಾದ್ದು ಗ್ಯಾರಂಟಿ.

ಕಳೆದ 2009ರ ಪಾರ್ಲಿಮೆಂಟ್ ಚುನಾವಣೆಯಲ್ಲೆ ಸಿದ್ದೇಶ್ವರ ಮಕಾಡೆ ಮಲಗುವ ಎಲ್ಲಾ ಸಾಧ್ಯತೆಗಳಿದ್ದವು. ಆತನ ಎದುರು ಸ್ಪರ್ಧಿಸಿದ್ದ ಶಾಮನೂರು ಎಸ್.ಎಸ್. ಮಲ್ಲಿಕಾರ್ಜುನ್ ಪ್ರಬಲ ಪೈಪೋಟಿಯನ್ನೇ ಒಡ್ಡಿದ್ದರು. ಆ ಸೋಲಿನ ಭವಿಷ್ಯ ಕಣ್ಮುಂದೆ ಸುಳಿಯುತ್ತಿದ್ದಂತೆಯೇ ಅಡಿಕೆ ಗಂಟನ್ನು ಬಿಚ್ಚಿ ಚನ್ನಗಿರಿ ತುಂಬಾ ಚೆಲ್ಲಾಡಿದ ಸಿದ್ದೇಶಿ ಜುಜುಬಿ ಎರಡು ಸಾವಿರ ಚಿಲ್ಲರೆ ಮತಗಳಿಂದ ಜಯವನ್ನು ಖರೀದಿಸಿಕೊಂಡಿದ್ದರು. ಆಗಿನ್ನೂ ಜಿಲ್ಲೆಯ ಏಳು ಕ್ಷೇತ್ರಗಳಲ್ಲಿ ಬಿಜೆಪಿ ಶಾಸಕರಿದ್ದರು, ಇಬ್ಬರು ಮಂತ್ರಿಗಳೂ ಇದ್ದರು. ಆದಾಗ್ಯೂ ಬಿಜೆಪಿಯ ಸಿದ್ದೇಶಿ ಏದುಸಿರು ಬಿಡುತ್ತಾ ಗೆಲ್ಲಬೇಕಾಗಿ ಬಂದದ್ದು ಆತನ ಸೋಲಲ್ಲದೆ ಮತ್ತಿನ್ನೇನು?

ಆದರೆ ಈಗ ಚಿತ್ರಣವೇ ಸಂಪೂರ್ಣ ಬದಲಾಗಿ ಹೋಗಿದೆ. ಜಿಲ್ಲೆಯ ಒಂದೇ ಒಂದು ಕ್ಷೇತ್ರದಲ್ಲೂ ಬಿಜೆಪಿಗೆ ವಾರಸುದಾರರಿಲ್ಲ. ಯಡ್ಡಿಯ ವಾಕ್‌ಔಟ್‌ನಿಂದಾಗಿ ಬಿಜೆಪಿ ಅಸ್ತಿತ್ವವನ್ನೇ ಕಳೆದುಕೊಂಡು ಕೂತಿದೆ. ಅತ್ತ ಕೆಜೆಪಿಯನ್ನು ನಂಬಿ ತೆಂಗಿನಕಾಯಿ ಹಿಡಿದ ಚನ್ನಗಿರಿಯ ಮಾಡಾಳು ವಿರುಪಾಕ್ಷಪ್ಪ ಹೊನ್ನಾಳಿಯ ಕಿಸ್ಸಿಂಗ್ ಕುಮಾರ ರೇಣುಕ, ಹರಿಹರದ ಹರೀಶ, ಜಗಳೂರಿನ ರಾಮಚಂದ್ರ ಮೊದಲಾದವರೆಲ್ಲ ಗೆಲ್ಲಲಾಗದೆ ಹ್ಯಾಪುಮೋರೆ ಹಾಕಿಕೊಂಡು ಕುಳಿತಿದ್ದಾರೆ. ಮಾಜಿ ತರಕಾರಿಮಂತ್ರಿ ರವೀಂದ್ರನಾಥ ಶೋಕಗೀತೆ ಹಾಡುತ್ತ ಬೆಂಗಳೂರಿನ ಹೊಸ ಬಂಗಲೆಯಲ್ಲಿ ಮೊಮ್ಮಕ್ಕಳ ಕೂಸುಮರಿಗೆ ಬೆನ್ನು ಆನಿಸಿ ಕೂತಿದ್ದಾರೆ. ಹರಪ್ಪನಹಳ್ಳಿಯ ಕರುಣಾಕರನಂತೂ ಬಿಜೆಪಿ ಎಂದರೇನೇ ಬೆಚ್ಚಿಬೀಳುವಂತ ಫೋಬಿಯಾದಲ್ಲಿದ್ದಾನೆ. ತನ್ನ ಇಡೀ ರಿಪಬ್ಲಿಕ್ ಶಕ್ತಿಯೇ ಚಂಚಲಗೂಡು, ಬಿಎಸ್‌ಆರ್ ಅಂತ ಹರಿದು ಹಂಚಿಹೋಗಿರುವ ಕರುಣಾಜನಕ ಸ್ಥಿತಿಯಲ್ಲಿರುವ ಕರುಣಾಕರ ಸಾಕಪ್ಪಾಸಾಕು ಎನ್ನುವ ಹತಾಶೆಯ ತುದಿತಲುಪಿದ್ದಾನೆ. ಉಳಿದಿರುವುದು ಸಚೇತಕ ಎಂ.ಎಲ್.ಸಿ ಶಿವಯೋಗಿ ಸ್ವಾಮಿ ಎಂಬ ಮೆತ್ತನೆಯ ಕಳ್ಳ. ಸ್ವತಾಸ್ನೋಮು ಬದಿಗಿಟ್ಟು ಸಮಯ ಸಾಧಕ ರಾಜಕಾರಣಕ್ಕೆ ಧುಮುಕಿರುವ ಶಿವಯೋಗಿಸ್ವಾಮಿಗೆ ಸ್ವತಃ ಗೆಲ್ಲುವ ತಾಕತ್ತಾಗಲಿ, ಮತ್ತೊಬ್ಬರನ್ನು ಗೆಲ್ಲಿಸುವ ಚಾಕ್ಯತೆಯಾಗಲಿ ಇಲ್ಲವೆನ್ನುವುದು ಸ್ಪಷ್ಟ ಸತ್ಯ. ಅಂತವನನ್ನು ನಂಬಿ ಕಮಲಕ್ಕೆ ಮತ ಹೊತ್ತಲು ಯಾರೂ ಕಾದು ಕುಳಿತಿಲ್ಲ, ಅಂತಹ ಮಹದಾಸೆಯೂ ಶಿವಯೋಗಿಗೆ ಇದ್ದಂತಿಲ್ಲ. ಒಟ್ಟಿನಲ್ಲಿ ಬಿಜೆಪಿ ಎಂಬೊಂದು ಭಯಂಕರ ಕೇಸರೀ ಪಕ್ಷ ದಾವಣಗೆರೆಯಲ್ಲಿದೆಯಾ? ಯಡ್ಡಿಯ ಕೆಜೆಪಿ ಎನ್ನುವ ಮತ್ತೊಂದು ಪಕ್ಷ ಇಲ್ಲಿ ಕಾಲಿಟ್ಟಿತ್ತಾ ಎನ್ನುವಂಥ ವಾತಾವರಣವಿರುವಾಗ ಜಿ.ಎಂ.ಸಿದ್ದೇಶಿ ಗೆಲುವು ದುಃಸ್ವಪ್ನವೇ ಸರಿ. ಇಂತಿಪ್ಪ ಒಬ್ಬೊಂಟಿಯ ಪರಿಸ್ಥಿತಿಯಲ್ಲಿ ಸಿದ್ದೇಶಿ ಹರಕೆಯ ಕುರಿಯಂತೆ ಚುನಾವಣೆಯ ಸಿದ್ಧತೆ ನಡೆಸಿದ್ದಾನೆ.

ಈ ನಡುವೆ ಕಳೆದ ಒಂದೆರಡು ಚುನಾವಣೆಗಳಿಂದ ಮಂಕಾಗಿದ್ದ ಶಾಮನೂರು ಶಿವಶಂಕರಪ್ಪ ಮಗದೊಮ್ಮೆ ತಮ್ಮ ಪ್ರಾಬಲ್ಯ ಪ್ರತಿಷ್ಠಾಪಿಸಿರುವುದಲ್ಲದೆ ಮಂತ್ರಿಗಿರಿಯನ್ನೂ ದಕ್ಕಿಸಿಕೊಂಡಿದ್ದಾರೆ. ದಾವಣಗೆರೆ ಉತ್ತರ ಮತಕ್ಷೇತ್ರದಿಂದ ಗೆದ್ದಿರುವ ಅವರ ಮಗ ಮಲ್ಲಿಕಾರ್ಜುನನ ರಾಜಕೀಯ ಚತುರತೆಯೂ ಈಗ ಸಿದ್ದೇಶಿಯನ್ನು ಮಾಜಿಮಾಡಲು ಸಜ್ಜಾಗಿ ನಿಂತಿದೆ. ಇಷ್ಟೆಲ್ಲಾ ಪೊಲಿಟಿಕಲ್ ಮೈನಸ್‌ಗಳನ್ನು 'ಪ್ಲಸ್'ಗಳನ್ನಾಗಿಸಿಕೊಳ್ಳದ ಹೊರತು ತನ್ನ ರಾಜಕೀಯ ಅಸ್ತಿತ್ವ ಭೀಮಸಮುದ್ರದ ಕೆರೆಯಲ್ಲಿ ಮುಳುಗುವುದು ಖರೆಯೆಂಬುದು ಖುದ್ದು ಸಿದ್ದೇಶಿಗೂ ತಿಳಿದಿರುವುದರಿಂದ ಯಡ್ಡಿಯನ್ನು ವಾಪಾಸ್ಸು ಬಿಜೆಪಿಗೆ ಕರೆತರುವ ಕಾರ್ಯಕ್ರಮಕ್ಕೆ ಪೌರೋಹಿತ್ಯ ವಹಿಸಲು ಮುತುವರ್ಜಿ ತೋರಿಸುತ್ತಿದ್ದಾನೆ.

ಆರಂಭದಿಂದಲೂ ಬಿಜೆಪಿ-ಕೆಜೆಪಿ ಎರಡೂ ಪಾರ್ಟಿಯ ದೋಣಿಗಳಲ್ಲಿ ತನ್ನೆರಡು ಕಾಲಿಟ್ಟುಕೊಳ್ಳುತ್ತಲೇ ಬಂದದ್ದು ಸಿದ್ದೇಶಿ ಅವಸಾನದ ಮೂಲ ಕಾರಣ. ಬಿಜೆಪಿಗಿಂತಲೂ ಯಡ್ಡಿಗೆ ಜಾತಿ ಆಧಾರದಲ್ಲಿ ಪರಮನಿಷ್ಠೆಯ ಗುಪ್ತಗಾಮಿನಿ ಹರಿಸುತ್ತಲೇ ಬಂದಿದ್ದ ಸಿದ್ದೇಶಿ ಹರಿಹರ, ಚನ್ನಗಿರಿ, ಹೊನ್ನಾಳಿ, ಜಗಳೂರು ಶಾಸಕರುಗಳನ್ನು ಕೆಜೆಪಿಗೆ ತಳ್ಳುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ. ಸಂಸದನ ಅವಧಿ ಮುಗಿಯುವ ತನಕ ಬಿಜೆಪಿಯಲ್ಲೇ ಇದ್ದು ನಂತರ ಕೆಜೆಪಿಗೆ ಜಿಗಿಯುವುದು ಸಿದ್ದೇಶಿಯ ಪ್ಲ್ಯಾನಾಗಿತ್ತು. ಆದರೆ ಯಾವಾಗ 2013ರ ವಿಧಾನಸಭಾ ಚುನಾವಣೆಯಲ್ಲಿ ಕೆಜೆಪಿ ಬಕ್ಕ ಬೋರಲಾಗಿ ಬಿತ್ತೋ ಆಗ ಸಿದ್ದೇಶಿ ಬಿಜೆಪಿಯತ್ತ 'ಯು' ಟರ್ನ್ ತೆಗೆದುಕೊಂಡು ತಾನು ಬಿಜೆಪಿಯ ಪರಮನಿಷ್ಠ ಸೇನಾನಿಯಂತೆ ಪಾರ್ಲಿಮೆಂಟ್ ಚುನಾವಣೆಗೆ ಕನವರಿಸಿದ್ದ. ಇದು ಯಡ್ಡಿಗೂ ಸಿದ್ದೇಶಿ ಮೇಲೆ ಮುನಿಸು ಹುಟ್ಟುವಂತೆ ಮಾಡಿತ್ತು.


ಆದರೆ, ಬಿಜೆಪಿಯಲ್ಲೇ ಉಳಿದು ಎಂ.ಪಿ. ಸ್ಥಾನಕ್ಕೆ ಸ್ಪರ್ಧಿಸಿದರೂ ಸಿದ್ದೇಶಿ ಹಾದಿ ಸುಗಮವೇನಿಲ್ಲ. ಆ ಹಾದಿಯಲ್ಲಿ ಮೊದಲನೇ ಮುಳ್ಳಾಗಿ ಕಾಣಿಸಿಕೊಳ್ಳೋದೆ ಮಾಜಿ ಮಂತ್ರಿ ರವೀಂದ್ರನಾಥ. ಮೊದಲಿನಿಂದಲೂ ಸಿದ್ದೇಶಿ ಮತ್ತು ರವೀಂದ್ರನಾಥ ರಾಜಕೀಯ ಅಸ್ತಿತ್ವಕ್ಕಾಗಿ ಪರಸ್ಪರ ಎಣ್ಣೆ ಸೀಗೇಕಾಯಿ ವೈಮನಸ್ಸು ಸೃಷ್ಟಿಸಿಕೊಂಡಿದ್ದಾರೆ. ತನ್ನ ಸೋಲಿಗೆ ಸಿದ್ದೇಶಿಯ ಅಸಹಕಾರವೂ ಕಾರಣವೆನ್ನುವ ಜಿದ್ದಿಗೆ ಬಿದ್ದಿರುವ ರವೀಂದ್ರನಾಥ 'ಒಳ ಪಗಡೆ' ಆಡಿದರೂ ಆಡಬಹುದು. ಅಲ್ಲದೆ ಯಡ್ಡಿಯ ಹಿಂದೆ ಅಲೆದಾಡಿದ ಸಿದ್ದೇಶಿಯ ಸಮಯಸಾಧಕತೆಯನ್ನೇ ದೊಡ್ಡದು ಮಾಡಿ ಬಿಜೆಪಿಯಲ್ಲೇ ಸಿದ್ದೇಶಿಯನ್ನು ಹಣಿಯಲು ಪ್ರಬಲ ಅಸ್ತ್ರವನ್ನೂ ಆತ ಪ್ರಯೋಗಿಸಬಹುದು. ಇನ್ನು ಕಳೆದ ಬಾರಿ ಸಿದ್ದೇಶಿಯ ಗೆಲುವಿಗೆ ಬೆವರು ಹರಿಸಿದ್ದ ಕಾರ್ಯಕರ್ತರೂ ಭ್ರಮನಿರಸನರಾಗಿ ಬೇರೆ ಪಕ್ಷಗಳ ಜಾಡು ಹಿಡಿದಿದ್ದಾರೆ. ಅವರನ್ನೆಲ್ಲ ಒಗ್ಗೂಡಿಸುವಂತ ಒಂದು ಶಕ್ತಿಯೇ ಬಿಜೆಪಿಯಲ್ಲಿಲ್ಲ. ಅದಕ್ಕೆಂದೇ ಸಿದ್ದೇಶಿ ಈಗ ಮತ್ತೊಮ್ಮೆ 'ಯಡ್ಡಿ ಬಿಜೆಪಿಗೆ ಬರಬೇಕು, ಬಿಜೆಪಿಯೂ ಯಡ್ಡಿಯನ್ನು ಮರ್ಯಾದೆಯಿಂದಲೇ ಮಡಿಸ್ನಾನ ಮಾಡಿಸಿ ಒಳಕರೆದುಕೊಳ್ಳಬೇಕು' ಎನ್ನುವ ಹೊಸಪ್ರಸಂಗ ಶುರು ಮಾಡಿರೋದು. ಕೆಜೆಪಿ-ಬಿಜೆಪಿ ಎಂಬೆರಡು ದಾಯಾದಿಗಳು ಒಂದಾಗದಿದ್ದರೆ ತಾನು ಪಾರ್ಲಿಮೆಂಟ್ ಚುನಾವಣೆಯಲ್ಲಿ ಸೋಲಲೇ ಬೇಕಾಗುತ್ತದೆ ಎನ್ನುವುದು ಆತನಿಗೇ ಖಾತ್ರಿಯಾದಂತಾಗಿದೆ.

ಹಾಗೆಯೇ ಕಾಂಗ್ರೆಸ್‌ನಲ್ಲೂ ವಾತಾವರಣ ಸಂಪೂರ್ಣ ನಿಚ್ಚಳವಾಗಿಲ್ಲ. ಶಾಮನೂರು ಶಿವಶಂಕರಪ್ಪ ತಮ್ಮ ರಾಜಕೀಯ ಅಸ್ತಿತ್ವ ಉಳಿಸಿಕೊಂಡಿದ್ದರೂ ಅವರಿಗೆ ಪಾರ್ಲಿಮೆಂಟ್ ಚುನಾವಣೆ ಅಗ್ನಿಪರೀಕ್ಷೆ ಎಂಬುದಂತೂ ಸತ್ಯ. ಈಗ ದಕ್ಕಿರುವ ಮಂತ್ರಿಸ್ಥಾನ ಮುಂದುವರೆಯಬೇಕೆಂದರೆ ಪಾರ್ಲಿಮೆಂಟ್‌ಗೆ ಕಾಂಗ್ರೆಸ್ ಅಭ್ಯರ್ಥಿಯನ್ನು ಗೆಲ್ಲಿಸಿ ಕಳಿಸಿ ಎನ್ನುವ ಹುಕುಮ್ಮೊ ದೆಹಲಿ ದೊರೆಸಾನಿಯಿಂದ ಹೊರಬಿದ್ದಿದೆಯಂತೆ. ಹಾಗಾಗಿಯೇ ಮಂತ್ರಿ ಶಿವಶಂಕರಪ್ಪ ಮತ್ತು ಶಾಸಕ ಪುತ್ರ ಮಲ್ಲಿಕಾರ್ಜುನ ಕ್ಷೇತ್ರದಲ್ಲಿ ಹೆಣಗಾಡಬೇಕಾಗಿದೆ. ಈ ನಡುವೆ ಕಾಂಗ್ರೆಸ್‌ನಿಂದ ಕ್ಯಾಂಡಿಡೇಟ್ ಯಾರು ಎನ್ನುವ ಪ್ರಶ್ನೆ ಎಲ್ಲರನ್ನೂ ಕಾಡುತ್ತಿದೆ. ಬಿಜೆಪಿಯ ಸಿದ್ದೇಶ್ವರನ ಹಣದ ಥೈಲಿಗೆ ಸೆಡ್ಡು ಹೊಡೆಯಬೇಕೆಂದರೆ ಶಾಮನೂರು ಅಂಡ್ ಸನ್ಸ್ ಟೀಮೇ ಗಟ್ಟಿ ಎನ್ನುವ ವಾಸ್ತವವಿದ್ದರೂ ಹಲವರ ಹೆಸರು ಆಗಾಗ ತೇಲಿಬಂದು ಗೊಂದಲ ಸೃಷ್ಟಿಸುತ್ತಿದೆ.

ಹರಿಹರದ ಮಾಜಿ ಮಂತ್ರಿ ನಾಗಪ್ಪನ ಹೆಸರು ಚಲಾವಣೆಗೆ ಬರುತ್ತದಾದರೂ ಪಾರ್ಟಿಯವರೇ ಮೂಗು ಮುರಿಯುತ್ತಾರೆ. ಜನಬೆಂಬಲವೂ ಇಲ್ಲದ, ಗಂಟಿನ ನಂಟೂ ಇಲ್ಲದ ನಾಗಪ್ಪನಿಗೆ ಜೈಕಾರ ಹಾಕಲು ಕಾರ್ಯಕರ್ತರ 'ಕೈ'ಗಳೇ ಹಿಂದೇಟು ಹಾಕುತ್ತಿವೆ. ಈ ನಡುವೆ ಕೊಂಡಜ್ಜಿ ಮೋಹನನ ಹೆಸರೂ ರೇಸ್‌ನಲ್ಲಿ ತೂರಾಡುತ್ತಿದೆ. ಈ ಹೆಸರಿಗೆ ಶಾಮನೂರು ಮನಸ್ಸು ಮಾಡಿ, ಮಲ್ಲಿಕಾರ್ಜುನ ಇರಲಿ ಎಂದರೆ ಮೋಹನನ ಕೊರಳು ದನಿಹೊರಡಿಸಬಹುದು. ಅಂತೂ ದಾವಣಗೆರೆ ಕಾಂಗ್ರೆಸ್ ಅಭ್ಯರ್ಥಿಯನ್ನು ಶಾಮನೂರು ಫ್ಯಾಮಿಲಿಯೇ ಫೈನಲೈಸ್ ಮಾಡುತ್ತದೆನ್ನುವುದು ಸತ್ಯ. ಮತ್ತೊಂದು ಅಂದಾಜಿನ ಪ್ರಕಾರ ಶಿವಶಂಕರಪ್ಪನವರ ಪುತ್ರ ಹಾಲಿ ಶಾಸಕ ಎಸ್.ಎಸ್.ಮಲ್ಲಿಕಾರ್ಜುನರೇ ಮಗದೊಮ್ಮೆ ಎಂ.ಪಿ ಎಲೆಕ್ಷನ್‌ಗೆ ಸ್ಪರ್ಧಿಸುತ್ತಾರೆ ಎನ್ನಲಾಗುತ್ತಿದೆ. ಕಳೆದ ಬಾರಿಗಿಂತ ಈ ಬಾರಿ ಅನುಕೂಲಕರ ವಾತಾವರಣ ಇರುವುದರಿಂದ ಹಿಂದಿನ ಚುನಾವಣೆಯ ಸೋಲಿನ ಮುಯ್ಯಿ ತೀರಿಸಿಕೊಳ್ಳಲೂ ಅವರ ಸ್ಪರ್ಧೆ ಬೇಕೇಬೇಕು ಎನ್ನುವ ಬೇಡಿಕೆಗಳೂ ಕಾರ್ಯಕರ್ತರ ನಡುವೆ ಹರಿದಾಡುತ್ತಿದೆ. ಆದರೆ ವಿಧಾನಸಭಾ ಚುನಾವಣೆಯಲ್ಲಿ ಶಿವಶಂಕರಪ್ಪ ಮತ್ತು ಪುತ್ರ ಮಲ್ಲಿಕಾರ್ಜುನ ಟಿಕೇಟ್ ಪಡೆಯಲು ಪಟ್ಟು ಹಿಡಿದು ಕೂತದ್ದು ನೋಡಿದರೆ ಅವರು ಅನಾಯಾಸವಾಗಿ ಶಾಸಕಗಿರಿಯನ್ನು ತ್ಯಜಿಸಿ ಯುದ್ಧಕ್ಕೆ ಸಿದ್ಧರಾಗುತ್ತಾರೆ ಎನ್ನುವಂತಿಲ್ಲ.

ಹೈಕಮಾಂಡ್ ಹುಕುಮ್ಮಿನಂತೆ ಮಂತ್ರಿಗಿರಿ ಉಳಿಯಬೇಕೆಂದರೆ ಯಾರೇ ಅಭ್ಯರ್ಥಿಯಾದರೂ ಅವರನ್ನು ಗೆಲ್ಲಿಸುವ ಜವಾಬ್ದಾರಿ ಶಾಮನೂರು ಧಣಿಗಳ ಹೆಗಲೇರುತ್ತದೆ. ಹಾಗಾಗಿ ಬೇರೆ ಯಾರನ್ನೋ ನಿಲ್ಲಿಸುವ ಬದಲಾಗಿ ಶಿವಶಂಕರಪ್ಪನವರ ಎರಡನೇ ಪುತ್ರ ಎಸ್.ಎಸ್. ಗಣೇಶ್‌ರೇ ಸ್ಪರ್ಧಿಸಲಿದ್ದಾರೆ ಎನ್ನುವುದು ಲೇಟೆಸ್ಟ್ ಬೆಳವಣಿಗೆ. ಅದಕ್ಕೆ ಪೂರಕವೆಂಬಂತೆ ಇತ್ತೀಚೆಗೆ ಇಲ್ಲಿನ ಲೋಕಲ್ ಪತ್ರಿಕೆಯೊಂದರಲ್ಲಿ ಅರ್ಧ ಪುಟದಷ್ಟು ಜಾಹಿರಾತು ನೀಡಿರುವ ಗಣೇಶ್ ತಾನೂ ಪಾರ್ಲಿಮೆಂಟ್ ಟಿಕೇಟು ಆಕಾಂಕ್ಷಿಯೆನ್ನುವ ಇಂಗಿತ ವ್ಯಕ್ತಪಡಿಸಿದ್ದಾರೆ. ಈ ಜಾಹಿರಾತು ಬಂದ ಮೇಲಂತೂ ಯಡ್ಡಿಯನ್ನು ಬಿಜೆಪಿಗೆ ಕರೆತರಬೇಕೆನ್ನುವ ಸಿದ್ದೇಶಿಯ ಕನವರಿಕೆ ಮತ್ತಷ್ಟು ಚುರುಕು ಪಡೆದುಕೊಂಡಿದೆ.

● ಟಿ.ಎಸ್.ಹನುಮಂತ



ಖರ್ಗೆಗೂ ಕಾಣಿಸದ ಹುಬ್ಬಳ್ಳಿ-ಅಂಕೋಲಾ ರೈಲು ಯೋಜನೆ!

ಹುಬ್ಬಳ್ಳಿ-ಅಂಕೋಲಾ ರೈಲು ಮಾರ್ಗ ನಿರ್ಮಾಣದ ಕನಸು ನೂರಾರು ವರ್ಷದ್ದು! ಈ ರೈಲು ಯೋಜನೆಗಾಗಿ ಉತ್ತರ ಕನ್ನಡಿಗರು ಮತ್ತು ಧಾರವಾಡ ಸೀಮೆಯ ಜನ ನಿರಂತರವಾಗಿ ಹಕ್ಕೊತ್ತಾಯ ಮಂಡಿಸುತ್ತಲೇ ಇದ್ದಾರೆ; ಬೇಡಿಕೆ ಈಡೇರಿಕೆಗಾಗಿ ಪ್ರತಿಭಟನೆ, ಚಳವಳಿ, ಕಾನೂನಿನ ಹೋರಾಟ, ಆಳುವವರಿಗೆ ಆಗ್ರಹ ಮಾಡಿಕೊಂಡು ಬಂದಿದ್ದಾರೆ. ಉತ್ತರ ಕರ್ನಾಟಕದ ಸಾಕ್ಷಿ ಪ್ರಜ್ಞೆಯಂತಿರುವ ಪಾಟೀಲ್ ಪುಟ್ಟಪ್ಪನಂಥವರೂ ಸದ್ರಿ ರೈಲು ಮಾರ್ಗಕ್ಕಾಗಿ ದೊಡ್ಡ ಧ್ವನಿ ಎತ್ತುತ್ತಿದ್ದಾರೆ. ದುರಂತವೆಂದರೆ, ಈ ಯೋಜನೆಗೆ ಹಲವು ಬಾರಿ ಸರ್ಕಾರ ಸ್ಕೆಚ್ ಹಾಕಿತ್ತಾದರೂ ಅದಕ್ಕೆ 'ರೆಡ್ ಸಿಗ್ನಲ್' ಬಿದ್ದದ್ದೇ ಹೆಚ್ಚು!

ಈ ಜನೋಪಯೋಗಿ ರೈಲು ಯೋಜನೆಯ ಕೂಸು ಬಲಗೊಂಡಿದ್ದು 2000 ದಶಕದಲ್ಲಿ. ಹುಬ್ಬಳ್ಳಿ-ಅಂಕೋಲಾ ನಡುವೆ ರೈಲು ಓಡಾಡಿದರೆ ಉತ್ತರ ಕನ್ನಡವಷ್ಟೇ ಅಲ್ಲ ಇಡೀ ಉತ್ತರ ಕರ್ನಾಟಕದ ಉದ್ಧಾರಕ್ಕೆ ಅನುಕೂಲವಾಗುತ್ತದೆ; ಗೋವಾ ಸೇರಿದಂತೆ ಕೊಂಕಣ ಪಟ್ಟಿಯಲ್ಲಿ ಪ್ರವಾಸೋದ್ಯಮ ಬೆಳೆಯುತ್ತದೆ. ಹಾಗಾಗಿ ಈ ರೈಲು ಮಾರ್ಗ ಬಲು ಬೇಗ ನಿರ್ಮಾಣವಾಗಲೇಬೇಕೆಂದು ಜನ ಹಠ ಹಿಡಿದರು. ಬೀದಿಗಿಳಿದು ಪ್ರತಿಭಟನೆ ನಡೆಸಿದರು. ಮಂತ್ರಿ-ಸಂಸದ-ಶಾಸಕರನ್ನು ಕೈತೊಳೆದು ಬೆನ್ನಟ್ಟಿದರು.


ಅಂತೂ-ಇಂತೂ ರೈಲು ಮಂತ್ರಾಲಯದ ಕಣ್ಣು 2004ರ ಹೊತ್ತಿಗೆ ತೆರೆದುಕೊಂಡಿತು. ಅಂಕೋಲಾ-ಹುಬ್ಬಳ್ಳಿ ಮಧ್ಯದ 168.22 ಕಿ.ಮೀ. ಉದ್ದದ ರೈಲು ಹಳಿ ನಿರ್ಮಾಣಕ್ಕೆ 998 ಕೋಟಿ ರೂಪಾಯಿಗಳ ನೀಲ ನಕ್ಷೆ ಸಿದ್ಧಮಾಡಿತು. ಅಂದಿನ ಪ್ರಧಾನಿ ವಾಜಪೇಯಿಯವರೇ ಶಿಲಾನ್ಯಾಸ ಸಹ ನೆರವೇರಿಸಿದರು. ಹುಬ್ಬಳ್ಳಿ -ಕಲಘಟಗಿ ನಡುವೆ ಹಳಿ ನಿರ್ಮಾಣವೂ ಮಾಡಲಾಯ್ತು. ಆಗ ಶುರುವಾಯ್ತು ಪರಿಸರವ್ಯಾದಿಗಳ ಕಿತಾಪತಿ. ಪಾಂಡುರಂಗ ಹೆಗಡೆ ಮತ್ತು ಮಿತ್ರ ಮಂಡಳಿ ಈ ರೈಲು ಯೋಜನೆ ಪರಿಸರಕ್ಕೆ ಮಾರಕ ಎಂದು ನ್ಯಾಯಾಲಯಕ್ಕೆ ದೂರು ಕೊಟ್ಟರು. ಈ ದಾವೆಯಿಂದ ಉತ್ತರ ಕರ್ನಾಟಕದವರ ಕನಸಿಗೆ ಕಲ್ಲು ಬಿತ್ತು. ಇಡೀ ಯೋಜನೆ ನೆನೆಗುದಿಗೆ ಬಿತ್ತು! ಕೇಂದ್ರ ಪರಿಸರ ಇಲಾಖೆ ರೈಲು ಯೋಜನೆಗೆ ಅನುಮತಿ ನಿರಾಕರಿಸಿ ಬಿಟ್ಟಿತು.

ಹಾಗೆ ನೋಡಿದರೆ ಹುಬ್ಬಳ್ಳಿ-ಕಾರವಾರ ರೈಲು ಮಾರ್ಗದ ವ್ಯಾಪಕ ಪ್ರಯೋಜನವನ್ನು ಮೊಟ್ಟ ಮೊದಲು ಗ್ರಹಿಸಿದ್ದು ಬ್ರಿಟಿಷರ ಆಡಳಿತ. ಸರ್ ಥಾಮಸ್ ಮನ್ರೋನ ಕಾಲದಲ್ಲಿ ಅಂಥದೊಂದು ಪರಿಕಲ್ಪನೆ ಮೂಡಿತ್ತು. ಅಂದಿನ ಬ್ರಿಟಿಷ್ ಜಿಲ್ಲಾಡಳಿತ ತಕ್ಷಣ ಈ ರೈಲು ಯೋಜನೆಯ ವರದಿ ತಯಾರಿಸಿ ತನ್ನ ಸರ್ಕಾರಕ್ಕೆ ರವಾನಿಸಿತ್ತು, ಬ್ರಿಟಿಷರ ಯುಗ ಮುಗಿದ ನಂತರ ಹುಬ್ಬಳ್ಳಿ ಮತ್ತು ಶಿರಸಿಯ ಚೇಂಬರ್ ಆಫ್ ಕಾಮರ್ಸ್ ಕೇಂದ್ರ ಸರ್ಕಾರಕ್ಕೆ ಮೇಲಿಂದ ಮೇಲೆ ಸದ್ರಿ ರೈಲು ಮಾರ್ಗದ ಅನಿವಾರ್ಯತೆ ಅರುಹುತ್ತಲೇ ಬಂದಿತ್ತು; ಈ ರೈಲು ಬಂದರೆ ಉತ್ತರ ಕರ್ನಾಟಕದ ಯಾವ್ಯಾವ ಭಾಗ ಯಾವ್ಯಾವ ರೀತಿ ಅಭಿವೃದ್ಧಿ ಕಾಣಲು ಸಾಧ್ಯವೆಂಬುದನ್ನು ಬಿಂಬಿಸುತ್ತಲಿತ್ತು.

ಉತ್ತರ ಕನ್ನಡದ ವರಪುತ್ರನೆಂಬ ಅಭಿದಾನದ ಡಾ. ದಿನಕರ ದೇಸಾಯಿ ಲೋಕಸಭೆಯಲ್ಲಿ ಕಾರವಾರ-ಹುಬ್ಬಳ್ಳಿ ರೈಲು ಮಾರ್ಗದ ಅಗತ್ಯದ ಬಗ್ಗೆ ಅಧ್ಯಯನಪೂರ್ಣವಾದ ವಾದ ಮಂಡಿಸಿದ್ದರು. ಜಗತ್ತಿನಲ್ಲೇ ಅಪರೂಪದ್ದಾದ ಕಾರವಾರದ ಸರ್ವಋತು ಬಂದರು ಮತ್ತು ಈ ರೈಲು ಜೋಡಣೆಯಿಂದ ದೇಶಕ್ಕೆ ಎಷ್ಟೆಲ್ಲ ಆದಾಯ ತರಬಹುದೆಂದು ಮನವರಿಕೆ ಮಾಡಿಕೊಟ್ಟಿದ್ದರು. ದೇಸಾಯಿಯವರ ಭಾಷಣಕ್ಕೆ ತಲೆದೂಗಿದ್ದ ಅಂದಿನ ಬಂದರು ಮಂತ್ರಿ ಪ್ರೊ. ವಿ.ಕೆ.ಆರ್.ವಿ. ರಾವ್ ಖುದ್ದು ಕಾರವಾರ ಬಂದರಿಗೇ ಬಂದು ಪರಿಶೀಲಿಸಿದ್ದರು. ಆಗ ಸಂಸದ ದೇಸಾಯಿಯವರ ತಂಡ ಹುಬ್ಬಳ್ಳಿ-ಕಾರವಾರ ರೈಲು ಮಾರ್ಗವಾದರೆ ಕರಾವಳಿಯ ಸೆರಗನ್ನು ಪಡೆದ ರಾಜ್ಯಗಳೆಲ್ಲದ್ದೂ ಆದಾಯ ಏರಿಕೆಯಾಗುತ್ತದೆಂದು ವಿವರಿಸಿತ್ತು. ಇದಕ್ಕೆ ಸಕಾರಣವಾಗಿ ಸ್ಪಂದಿಸಿದ್ದ ಮಂತ್ರಿ ರಾವ್ ರೈಲು ಮಂತ್ರಿಯೊಂದಿಗೆ ಮಾತಾಡಿ ರೈಲು ಮಾರ್ಗ ನಿರ್ಮಾಣಕ್ಕೆ ಪ್ರಯತ್ನಿಸುವೆನಾಗಿ ಹೇಳಿ ಹೋಗಿದ್ದರು. ಆದಾಗಿ 45 ವರ್ಷಗಳು ಕಳೆದಿದೆ.

ಸಂಸದ ದೇಸಾಯಿಯವರ ಪ್ರಯತ್ನದ ನಂತರವೂ ಕಾರವಾರ ಮತ್ತು ಧಾರವಾಡ ಜಿಲ್ಲೆಯ ಮುಂದಾಳುಗಳು-ಸಂಘ-ಸಂಸ್ಥೆಗಳು ಹುಬ್ಬಳ್ಳಿ-ಕಾರವಾರ ರೈಲು ಮಾರ್ಗಕ್ಕಾಗಿ ಕಟಿಪಿಟಿ ನಡೆಸುತ್ತಲೇ ಇದ್ದರು. ಯಾವಾಗ ಕೊಂಕಣ ರೈಲು ಹಳಿ ನಿರ್ಮಾಣವಾಯ್ತೋ, ಆಗ ಹುಬ್ಬಳ್ಳಿ-ಕಾರವಾರ ರೈಲು ಹೋರಾಟ ಬಿರುಸಾಯ್ತು, ಕೊಂಕಣ ರೈಲ್ವೆಯಿಂದ ಜನರಿಗಾದ ಒಳಿತು ಈ ಭಾಗದ ಜನರನ್ನು ಇನ್ನಷ್ಟು ಕ್ರಿಯಾಶೀಲವಾಗಿ ಹೋರಾಟಕ್ಕೆ ತೊಡಗಿಸಿತು. ಹಕ್ಕೊತ್ತಾಯಕ್ಕೆ ಒಂದು ಸಾಂಘಿಕ ಹೋರಾಟದ ರೂಪು-ರೇಷೆ ಬಂತು. ಸರ್ಕಾರಗಳ ಮುಂದೆ ವಾದ ಮಂಡಿಸಲು ಅಲ್ಲಲ್ಲಿ ರೈಲು ಕ್ರಿಯಾ ಸಮಿತಿಗಳು ರಚಿತವಾದವು. ಜನರ ಭಾವನೆಗಳನ್ನು ಗ್ರಹಿಸಿದ ಸರ್ಕಾರಿ ಮಂದಿ ಒಂಚೂರು ಎಚ್ಚೆತ್ತುಕೊಂಡರು. ಕಾರವಾರ-ಹುಬ್ಬಳ್ಳಿ ರೈಲು ಎಂಬ ಹೆಸರು ಬಿಟ್ಟು, ಹುಬ್ಬಳ್ಳಿ-ಅಂಕೋಲಾ ರೈಲು ಮಾರ್ಗ ಎಂದು ಪುನರ್‌ನಾಮಕರಣ ಮಾಡಿದರು. ಆಳುವವರು ಈ ರೈಲು ಮಾರ್ಗ ನಿರ್ಮಾಣ ಮಾಡುವ ಭರವಸೆಯ ಮಾತಾಡತೊಡಗಿದರು.

ಅಂದು ಕೇಂದ್ರದಲ್ಲಿ ಅಧಿಕಾರ ನಡೆಸುತ್ತಿದ್ದ ಎನ್‌ಡಿಎ ಸರ್ಕಾರ ಸದ್ರಿ ರೈಲು ಹಳಿ ನಿರ್ಮಾಣಕ್ಕೆ ಅಧಿಕೃತ ಚಾಲನೆಯನ್ನು 2004ರಲ್ಲಿ ನೀಡಿತು. ಆದರೆ ಶಿರಸಿ ಭಾಗದಲ್ಲಿ ಪರಿಸರ ಹೋರಾಟಗಾರರ ಗೆಟಪ್‌ನಲ್ಲಿ ಸಾಕಷ್ಟು ಕಾಸು-ಖಂದರು ಎರಡೂ ಬೆಳೆಸಿಕೊಂಡಿದ್ದ ಒಂದಿಷ್ಟು ಹೈಗರ ಮಾಣಿಗಳು ಮತ್ತು ಶಿರಸಿ ಅರಣ್ಯ ವಿಭಾಗದಲ್ಲಿದ್ದ ಒಬ್ಬ ಐಎಫ್‌ಎಸ್ ಕೇಡರಿನ ಸೋಗಲಾಡಿ ಅಧಿಕಾರಿಯ 'ಮನೆ ಮುರುಕುತನ'ದಿಂದ ಹುಬ್ಬಳ್ಳಿ-ಅಂಕೋಲಾ ರೈಲು ಯೋಜನೆಗೆ ಕಲ್ಲು ಬಿತ್ತು. ಮರ-ಗಿಡ ಉಳಿಸುವ ಮುಖವಾಡದವರು ನ್ಯಾಯಾಲಯಕ್ಕೆ ಹೋಗಿ ಕಾಮಗಾರಿಗೆ ತಡೆಯಾಜ್ಞೆ ತಂದು ವಿಘ್ನ ಸಂತೋಷ ಅನುಭವಿಸಿದರು. ಕಾರವಾರ-ಶಿರಸಿ-ಹುಬ್ಬಳ್ಳಿ ಕಡೆಯ ಜನ ಮಾತ್ರ ಸುಮ್ಮನುಳಿಯಲಿಲ್ಲ, ರೈಲು ಬೇಡಿಕೆಯ ಈ ಜನರ ಹೋರಾಟಕ್ಕೆ ಮತ್ತಷ್ಟು ಕಸುವು ಬಂತು. ರೈಲ್ವೆ ಕ್ರಿಯಾ ಸಮಿತಿಯವರಿಗೆ ಜನಸಾಮಾನ್ಯರಿಗೆ ಪರಿಸರವ್ಯಾಧಿಗಳ ಕುಚೋದ್ಯದಿಂದ ನಿರಾಸೆ-ನೋವು-ಸಿಟ್ಟು ಮೂಡಿಸಿತು. ಕ್ರಿಯಾ ಸಮಿತಿಯವರು ಕೇಂದ್ರ ರೈಲು ಮಂತ್ರಿಗಳ ಬಳಿಗೊಡಿಹರು. ವಸ್ತುಸ್ಥಿತಿ-ಜನಪರ ಆಶಯ ಈ ರೈಲು



ಪರಿಸರಕ್ಕೆ ಹಾನಿ ಇಲ್ಲ



ರೈಲು ಮಾರ್ಗದ ಪರ ವರದಿ ನೀಡಿದ ರಾಮಚಂದ್ರ

ಖರ್ಗೆಗೆ ಇದು ಗೊತ್ತಾ

ಸ್ವಯಂ ಘೋಷಿತ ಪರಿಸರವಾದಿಗಳು ಮ... ಒಂದಿಷ್ಟು ಅಧಿಕ ಪ್ರಸಂಗಿ ಅರಣ್ಯಾಧಿಕಾರಿಗಳು ಕೇಂ... ಪರಿಸರ ಮತ್ತು ರೈಲ್ವೆ ಸಚಿವಾಲಯಕ್ಕೆ ತಪ್ಪು-ಸುಳ್ಳು ಮಾಹಿ... ನೀಡಿ ದಾರಿ ತಪ್ಪಿಸಿದ್ದಾರೆ. ಆದರೆ ವಾಸ್ತವ ಬೇರೆಯೆ ಇದೆ. ಅಂಕೋಲಾ-ಹುಬ್ಬಳ್ಳಿ ರೈಲುಮಾರ್ಗದಿಂ... ಪರಿಸರ-ಜೀವ ವೈವಿಧ್ಯಕ್ಕೆ ಯಾವ ತೊಂದರೆಯು... ಆಗುವುದಿಲ್ಲ, ಇದು ರೈಲು ಮಂತ್ರಿ ಖರ್ಗೆ ಸಾಹೇಬರಿ... ಗೊತ್ತಿದೆಯಾ? ಪರಿಸರ ಮಾಫಿಯಾದ ಪುರೋಹಿತಶಾ... ಮಸಲತ್ತು ಗೊತ್ತಿದೆಯಾ? ಕೆಲವು ಸರಳ ಸತ್ಯ ಇಲ್ಲಿ...

* ಪರಿಸರ ಪುಂಡರು, ಪೆದ್ದು ಅಧಿಕಾರಿಗಳು ಹೇಳುವ... ಹುಬ್ಬಳ್ಳಿ-ಅಂಕೋಲಾ ರೈಲು ಮಾರ್ಗದ ಉದ್ದ 16... ಕಿ.ಮೀ. ಅಲ್ಲ, ಅದು ಬರೀ 120 ಕಿ.ಮೀ.

* ಆಗಬೇಕಿರುವ 120 ಕಿ.ಮೀ. ಹಳಿಯ... ಈಗಾಗಲೇ ಹುಬ್ಬಳ್ಳಿ-ಕಲಘಟಗಿ ನಡುವಿನ ಶೇ. 9... ಕೆಲಸ ಆಗಿದೆ. ಹೀಗಾಗಿ ಆಗಬೇಕಿರುವುದು ಕೇವಲ 9... ಕಿ.ಮೀ. ಕಾಮಗಾರಿಯಷ್ಟೇ!

* ಈ 90 ಕಿ.ಮೀ.ನಲ್ಲಿ ಸುಮಾರು 50 ಕಿ.ಮೀ... ಸಮತಟ್ಟಾದ ಅರಣ್ಯರಹಿತ ಪ್ರದೇಶವಿದೆ; 16 ಕಿ.ಮೀ... ನಷ್ಟು ಸುರಂಗದಲ್ಲೂ ಹಳಿಹಾದು ಹೋಗುತ್ತದೆ.

* ಪರಿಸರವಾದಿಗಳ ಕ್ಯಾತೆಯಂತೆ "ಸಮಸ್ಯೆ" ಇರುವುದ... ಬರೀ 10-12 ಕಿ.ಮೀ. ಮಾರ್ಗದಲ್ಲಿ ಮಾತ್ರ ಅಂತಾಯ್ತಲ್ಲವಾ?

* ದಟ್ಟ ಅರಣ್ಯದಿಂದ ಕಡಿಯಲಾಗುವ ಒಂದು ಗಿಡಕ್ಕೆ ಹತ್ತು ಗಿಡ ನೆಡುವ ಮತ್ತು ಯಾವ ಜಾತಿಯ ಗಿಡ ಕಡಿಯಲಾಗಿದೆಯೋ ಅದೇ ಜಾತಿ ಗಿಡ ಅಕ್ಕಪಕ್ಕವೆ... ನೆಡುವ ಕಟ್ಟುನಿಟ್ಟಿನ ಆದೇಶ ಅರಣ್ಯ ಇಲಾಖೆಗೆ ಕೊಡಬೇಕು...

* 10-12 ಕಿ.ಮೀ. ಪ್ರದೇಶದಲ್ಲಿ ಕಾಡುಪ್ರಾಣಿಗಳಿಗೆ ತೊಂದರೆ ಆಗುವುದು ನಿಜವೇ ಆದಲ್ಲಿ ರೈಲು ಮಾರ್ಗ ಅಲ್ಲಷ್ಟೇ ಬದಲಿಸಬಹುದು. ಕಿರವತ್ತಿಯಿಂದ ರಾಮನಗುಳಿಯವರೆಗೆ ಸ್ವಲ್ಪ ಸುತ್ತಿ ಬಳಸಿ ಮಾರ್ಗ ನಿರ್ಮಿಸಿದರೆ ಕೇವಲ ಹತ್ತೇಹತ್ತು ಕಿ.ಮೀ. ಉದ್ದವಾಗಬಹುದು. ಜಗತ್ತಿನಲ್ಲಿ ಅತೀ ಹೆಚ್ಚು ಆದಾಯ ತರುವ ಭಾರತ ರೈಲು ಇಲಾಖೆಗೆ ಈ ಭಾರ ಹೊರುವ ತಾಕತ್ತು ಇದ್ದೇ ಇದೆ.

* ಹುಸಿ ಪರಿಸರ ಕಿತಾಪತಿಗಾರರ ಬಾಯಿ ಬಂದಾಗಿಸಲು ಖರ್ಗೆ ಸಾಹೇಬರಿಗೆ ಸಾಧ್ಯವಿಲ್ಲವಾ? ಹಾಗಂತ ಉತ್ತರ ಕರ್ನಾಟಕದ ಜನ ಮಾತಾಡಿಕೊಳ್ಳುತ್ತಿದ್ದಾರೆ.

"ಅ-ಹು" ರೈಲು ಯೋಜನೆ ಹೇಗಿದೆ?

ಅಂಕೋಲಾ-ಹುಬ್ಬಳ್ಳಿ ರೈಲು ಯೋಜನೆ ಬಹುಪಯೋಗಿ ಮತ್ತು ಜನಪರ! ಈ ಯೋಜನೆ ಕೈಗೂಡಿದರೆ ಕರ್ನಾಟಕದ ಕರಾವಳಿಯನ್ನು ಉತ್ತರ ಕರ್ನಾಟಕದೊಂದಿಗೆ ಜೋಡಿಸಬಹುದು. ಆ ಮೂಲಕ ಉಳಿದ ಪ್ರದೇಶದ ಸಂಪರ್ಕ ಸುಲಭವಾಗಿ ಸಾಧಿಸಬಹುದು. ನೂರಾರು ಸರಕು ವಾಹನಗಳು ಸಾಗಿಸುವ ಸರಕನ್ನು ಒಂದು ರೈಲು ಸಾಗಿಸುವುದರಿಂದ ಪ್ರತಿನಿತ್ಯ ಕೋಟ್ಯಂತರ ರೂಪಾಯಿ ಇಂಧನ ಉಳಿತಾಯವಾಗುತ್ತದೆ. ದೂರ-ದೂರವನ್ನು ಕಡಿಮೆ ಅವಧಿಯಲ್ಲಿ ಜನ ಕ್ರಮಿಸಿ ವ್ಯಾಪಾರ-ವಹಿವಾಟು ಮಾಡಬಹುದು. ಕೊಂಕಣ ಪಟ್ಟಿಯ ರಾಜ್ಯಗಳಲ್ಲಿ ಪ್ರವಾಸೋದ್ಯಮ ಗಣನೀಯವಾಗಿ ವೃದ್ಧಿಯಾಗುತ್ತದೆ. ತನ್ಮೂಲಕ ಆ ರಾಜ್ಯಗಳ ಆದಾಯ ಹೆಚ್ಚುತ್ತದೆ. ಈ ಯೋಜನೆಯ ವಿವರ ಹೀಗಿದೆ:

* ರೈಲು ಹಳಿ ಉದ್ದ	120.22 ಕಿ.ಮೀ.
* ಯೋಜನೆಯ ಆರಂಭದ ಅಂದಾಜು	250 ಕೋಟಿ ರೂ.
* ಕಾರ್ಯಗತವಾದಾಗ ಖರ್ಚು	1190 ಕೋಟಿ ರೂಪಾಯಿ
* ಅರಣ್ಯರಹಿತ ಯೋಜನಾ ಪ್ರದೇಶ	105 ಕಿ.ಮೀ.
* ಸುರಂಗ ಮಾರ್ಗ	20.79 ಕಿ.ಮೀ.
* ಯೋಜನೆಗಾಗಿ ಕಡಿಯಬೇಕಾದ ಅರಣ್ಯ	23 ಕಿ.ಮೀ.
* ಈಗಾಗಲೇ ಹಳಿ ಹಾಕಿರುವ ಪ್ರದೇಶ	35 ಕಿ.ಮೀ.
* ಆಗಿರುವ ಭೂಸ್ವಾಧೀನ	250 ಹೆಕ್ಟೇರ್
* ಭೂಸ್ವಾಧೀನ ಪರಿಹಾರ	39 ಕೋಟಿ

ಪರಿಸರವ್ಯಾಧಿಗಳ ಪರಿತಾಪ!!

ಉತ್ತರ ಕನ್ನಡದಲ್ಲಿ ಒಂದು ಪರಿಸರ ಫ್ಯಾಷನ್ ಸಮುದಾಯವಿದೆ. ಈ ಗ್ಯಾಂಗಿನದು ಪುರೋಹಿತಶಾಹಿ ಹಿತಚಿಂತನೆಯ ಪರಿಸರವಾದ. ಶೂದ್ರಾದಿಗಳಿಗೆ ತೊಂದರೆ ಆಗುವ ಯಾವ ಯೋಜನೆಗಳ ಬಗ್ಗೆಯೂ ಈ ಸೋಕಾಲ್ಡ್ ಪರಿಸರ ಪರಾಕ್ರಮಿಗಳು ತಲೆ ಕೆಡಿಸಿಕೊಳ್ಳುವುದಿಲ್ಲ. ಇದರಲ್ಲಿ ಕಾವಿ ಜೀವಿಗಳೂ ಇದ್ದಾರೆ; ಖಾದಿ ಖದೀಮರೂ ಇದ್ದಾರೆ.

ಪರಿಸರವಾದವನ್ನೇ ಬಂಡವಾಳ ಮಾಡಿಕೊಂಡು 1990 ರ ದಶಕದಿಂದೀಚೆಗೆ ಪ್ರವರ್ಧಮಾನಕ್ಕೆ ಬಂದಿರುವ ಹೆಗಲುಚೀಲದ ಚಿಂತಕರು ಈಗ ಸಬಲಗೊಂಡಿದ್ದಾರೆ. ಅಪ್ಪಿಕೋ ಅನಂತ ಮಾಣಿ ಬಿಜೆಪಿ ಸರ್ಕಾರದಲ್ಲಿ ಪಶ್ಚಿಮ ಘಟ್ಟ ಕಾವಲು ಪಡೆ ಎಂಬ ವಿಚಿತ್ರ "ಮಂಡಳಿ"ಯ ದೊರೆಯಾಗಿ ಗೂಟದ ಕಾರಲ್ಲಿ ಓಡಾಡಿ ಟಿಎ-ಡಿಎ-ಗೌರವಧನ ಕಬಳಿಸಿದ್ದಾನೆ. ಈತನೇ ಹತ್ತಾರು ಎಕರೆ ಅರಣ್ಯ ಅತಿಕ್ರಮಿಸಿ ಭರ್ಜರಿ ಅಡಿಕೆ ತೋಟ ಮಾಡಿಕೊಂಡಿದ್ದಾನೆ. ಈತನಿಗೆ ಘಟ್ಟದ ಮೇಲಿನ ಕುಲಬಾಂಧವರ ಏರಿಯಾದಲ್ಲಿ ಬರುವ ಯೋಜನೆಗಳ ಬಗ್ಗಷ್ಟೇ ಚಿಂತೆ. ಎಂ.ಪಿ. ಅಥವಾ ಎಮ್ಮೆಲ್ಲೆ ಆಗುವ ಕನಸು ಕಾಣುತ್ತಿರುವ ಈ ಖೋಟಾ ಪರಿಸರವಾದಿಗೆ ಹಣಕೋಣ, ತದಡಿ ಥರ್ಮಲ್ ಪ್ರಾಜೆಕ್ಟ್ ಭಾಸ್ಗಡಿ, ಸೀಬರ್ಡ್ ನೌಕಾನೆಲೆ, ಹೈವೆ ಚತುಷ್ಪಥ ನಿರ್ಮಾಣದ ಅನಾಹುತಗಳೆಲ್ಲ ಕಾಣಿಸದು. ಬರೀ ಬೇಡ್ತಿ ಹೋರಾಟ, ಸ್ವ-ಜಾತಿ ಜನರ ಏರಿಯಾದಲ್ಲಿ ಬರುವ ಮಿನಿ ಜಲ ವಿದ್ಯುತ್ ಯೋಜನೆ ಇತ್ಯಾದಿಗಳಷ್ಟೇ ಕಾಡುತ್ತವೆ.

ಇನ್ನೊಬ್ಬನಿದ್ದಾನೆ ಪಾಂಡುರಂಗ ಹೆಗಡೆ. ಈತ ತನಗೆ ಓಡಾಡಲು-ವಾಸ್ತವ್ಯ ಮಾಡಲು ತೊಂದರೆ ಕೊಡುತ್ತವೆಂದು ಹಸಿ-ಹಸಿ ಮರಗಳನ್ನೇ ಕಡಿದೆಸೆಯುವವನು. ಆತನ ಅರಣ್ಯ ರಕ್ಷಣೆಯ ಸಣ್ಣ ಸ್ಯಾಂಪಲ್ ಇದು. ಈತನಿಗೆ ಹಾವೇರಿ-ಶಿರಸಿ ರೈಲು ಯೋಜನೆ ಅಥವಾ ತಾಳಗುಪ್ಪ-ಶಿರಸಿ ರೈಲು ಹಳಿ ನಿರ್ಮಾಣದಿಂದಾಗುವ ಅರಣ್ಯ ಪರಿಸರ-ಜೀವ ವೈವಿಧ್ಯ ನಾಶದ ಬಗ್ಗೆ ಕಾಳಜಿ ಇಲ್ಲ, ಅಂಕೋಲಾ-ಹುಬ್ಬಳ್ಳಿ ರೈಲು ನಿರ್ಮಾಣದಿಂದಾಗುವ ಪರಿಸರ ಹಾನಿಗಿಂತಲೂ ಹೆಚ್ಚು ಅನಾಹುತ-ಅವಾಂತರ ಈ ರೈಲು ಮಾರ್ಗಗಳ ನಿರ್ಮಾಣದಿಂದ ಆಗಲಿದೆ.

ಆದರೆ ಪಾಂಡುರಂಗ ಹೆಗಡೆ, ಅನಂತ ಹೆಗಡೆ ಆಶೀಸರ ಅಂಡ್ ಕೋ.ಗೆ ಅಂಕೋಲಾ-ಹುಬ್ಬಳ್ಳಿ ರೈಲು ಮಾರ್ಗ ಮಾತ್ರ ಆಗೋದು ಬೇಡ. ಹೈಗರ ಹಿತಾಸಕ್ತಿಯ ಹಿಕಮತ್ತಿದೆಂಬುದು ಬಹಿರಂಗ ರಹಸ್ಯ!!

ೕಜನೆ ಹಿಂದಕ್ಕಾಗಿರುವುದನ್ನು ಸಾರಾಸಾರ ವಿವರಿಸಿದರು. ಯುಪಿಎ ಸರ್ಕಾರ ಬಂದ ಬಳಿಕ ರೈಲ್ವೆ ರಾಜ್ಯ ತೆ ಮುನಿಯಪ್ಪರಿಗೆ ಹೋರಾಟಗಾರರು ದುಂಬಾಲು ರು. ಸದ್ರಿ ರೈಲು ಯೋಜನೆ ಪುನರಾರಂಭಕ್ಕೆ ತ್ತಿಸುವುದಾಗಿ ಮುನಿಯಪ್ಪ ಹೇಳಿದರು. ತಕ್ಷಣ ಅರಣ್ಯ ಖೆಯ ಎಡಿಷನಲ್ ಜನರಲ್ ಡಾ. ಪಿ.ಬಿ. ೕಪಾಧ್ಯಾಯ 2009ರಲ್ಲಿ ಉತ್ತರ ಕನ್ನಡದ ಕಾಡಿಗೆ ಕೊಟ್ಟು ಪರಿಶೀಲಿಸಿದರು. ಆ ನಂತರ ಬೆಂಗಳೂರಿನ ಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನ ವಿಜ್ಞಾನಿ ಟಿ.ವಿ. ರಾಮಚಂದ್ರ ನೇತೃತ್ವದ ಒಂದು ತಂಡ ಹುಬ್ಬಳ್ಳಿ-ಅಂಕೋಲಾ ರೈಲು ಮಾರ್ಗ ಆರಂಭಿಸಿದರೆ ಮ ಘಟ್ಟದ ಪರಿಸರ ಮತ್ತು ಜೀವ ವೈವಿಧ್ಯತೆ ಮೇಲೆ ವ ಪರಿಣಾಮಗಳ ಕುರಿತೊಂದು ವರದಿ ಕೊಡುವಂತೆ ೕಶಿಸಲಾಯ್ತು.


2011ರಲ್ಲಿ ಸರ್ಕಾರಕ್ಕೆ ರಾಮಚಂದ್ರ ಸಮಿತಿ ನೀಡಿದ ಯಲ್ಲಿ ಅಂಕೋಲಾ-ಹುಬ್ಬಳ್ಳಿ ರೈಲು ಮಾರ್ಗದಿಂದ ್ಯ-ಪರಿಸರ-ಜೀವವೈವಿಧ್ಯಕ್ಕೆ ದೊಡ್ಡ ಮಟ್ಟದ ಯಿಲ್ಲವೆಂದು ಸ್ಪಷ್ಟವಾಗಿ ಹೇಳಲಾಗಿದೆ. ಈ ರೈಲು ರ್ಗ ಅತೀ ಸೂಕ್ಷ್ಮ ಪಶ್ಚಿಮ ಘಟ್ಟದಲ್ಲಿ ಹಾದು ೕಗುತ್ತಿದ್ದರೂ ಇದರಿಂದ ಅರಣ್ಯ-ಜೀವ ವೈವಿಧ್ಯಕ್ಕೆ ದರೆ ಆಗದಂತೆ ಕಾರ್ಯಗತಗೊಳಿಸಬಹುದು. ೕಕವಾಗಿ ಆನೆ ಸಂಚರಿಸಲು ಆನೆ ಕಾರಿಡಾರ್‌ನಲ್ಲಿ ಷ್ಟಿ ಮಾಡಬಹುದು. ಸ್ವಲ್ಪ ಅರಣ್ಯ ನಾಶವಾದರೂ ಕ್ಕೆ ದುಪ್ಪಟ್ಟು ಗಿಡ-ಮರ ಬೆಳೆಸಲು ಅವಕಾಶವಿದೆ. ನಗಳು ಸಂಚರಿಸುವಾಗ ಹೊರಸೂಸುವ ಕಾರ್ಬನ್ ಆಕ್ಸೈಡ್‌ನಿಂದ ಪರಿಸರದ ಮೇಲಾಗುವ ್ಪರಿಣಾಮಕ್ಕಿಂತಲೂ ಕಡಿಮೆ ಧಕ್ಕೆ ರೈಲು ಯಿಂದಾಗುತ್ತದೆ ಎಂಬ ಅಂಶಗಳನ್ನು ರಾಮಚಂದ್ರ ತಿ ನಿಸ್ಸಂಶಯವಾಗಿ ತನ್ನ ವರದಿಯಲ್ಲಿ ಉಲ್ಲೇಖಿಸಿದೆ.

ಇದನ್ನು ಸುಪ್ರೀಂ ಕೋರ್ಟ್‌ಗೆ ಮನದಟ್ಟು ತಬೇಕಾಗಿದೆ. ರೈಲು ಮಾರ್ಗದ ಪರವಿರುವವರು ಚಂದ್ರ ತಂಡ ನೀಡಿರುವ ವರದಿಯನ್ನು ಪರಿಸರ ತ್ತು ರೈಲ್ವೆ ಇಲಾಖೆಯ ಬೃಹಸ್ಪತಿಗಳಿಗೆ ಮೊದಲು ್ ಮಾಡಿಸಬೇಕಾಗಿದೆ. ನಂತರ ಪರಿಸರ ಹಾಗೂ ು ಸಚಿವಾಲಯದ ಪಂಡಿತರು ಸರ್ವೋಚ್ಚ ಾಲಯದ ಎಂಪವರ್ಡ್ ಕಮಿಟಿಗೆ ಡಾ. ರಾಮಚಂದ್ರ ಸಲ್ಲಿಸಿ, ಅಂಕೋಲಾ-ಹುಬ್ಬಳ್ಳಿ ರೈಲು ಮಾರ್ಗದಿಂದ ರ-ಜೀವವೈವಿಧ್ಯ ಮತ್ತು ಅರಣ್ಯಕ್ಕೆ ಯಾವ ಹಾನಿಯೂ ವೆಂಬುದನ್ನು ವಿವರಿಸಬೇಕು. ಈ ಸೆಂಟ್ರಲ್ ವರ್ಡ್ ಕಮಿಟಿಗೆ ರೈಲು ಯೋಜನೆಯಿಂದ ಹಾನಿ ಲ್ಲವೆಂಬುದು ಖಾತ್ರಿಯಾದರೆ ಸುಪ್ರೀಂ ಕೋರ್ಟ್ ಬ್ಬಳ್ಳಿ-ಅಂಕೋಲಾ ರೈಲು ಮಾರ್ಗಕ್ಕೆ ಹಸಿರು ನಿಶಾನೆ ರಿಸಬಹುದು.

ಪರಿಸರವಾದಿಗಳ ಹುಸಿ ಪರಿತಾಪಕ್ಕೆ ಕಂಗೆಟ್ಟು ರೈಲು ರೂ ಸಮಿತಿಯೇನೂ ಹಿಮ್ಮೆಟ್ಟಿಲ್ಲ. ಪರಿಸರ ಕ್ರಮಿಗಳು ಸಲ್ಲಿಸಿದ ಆಕ್ಷೇಪಕ್ಕೆ ಪ್ರತಿಯಾಗಿ ಹುಬ್ಬಳ್ಳಿ-ೕಲಾ ರೈಲು ಮಾರ್ಗ ಹೋರಾಟಗಾರರು ಸರ್ವೋಚ್ಚ ಾಲಯಕ್ಕೆ ಸಾರ್ವಜನಿಕ ಹಿತಾಸಕ್ತಿ ಕಾರಣ ಕೊಟ್ಟು ೕಲು ಸಲ್ಲಿಸಿದೆ. ಹೋರಾಟಗಾರರು ಈಚೆಗೆ ಲ್ಲಾಪುರದ ನೂತನ ಶಾಸಕ ದಾಡಿ ಹೆಬ್ಬಾರ್ ಮಾಣೆಯ ದಾಳತ್ವದಲ್ಲಿ ಕೇಂದ್ರ ರೈಲ್ವೆ ಮಂತ್ರಿ ಮಲ್ಲಿಕಾರ್ಜುನ ಗೆ ಮನವಿ ನೀಡಿ ಆದಷ್ಟು ಬೇಗ ಈ ರೈಲು ಗದ ಕಾಮಗಾರಿ ಪುನರಾರಂಭ ಆಗುವಂತೆ ಮಾಡಲು ಕೊಂಡಿದೆ. ನಕಲಿ ಪರಿಸರವಾದಿಗಳು ಮತ್ತು ಜನಪರ ಳಿಯ ರೈಲು ಹೋರಾಟಗಾರ ನಡುವಿನ 'ವ್ಯಾಜ್ಯ' ಕ ಅಂತ್ಯದ ಹಂತಕ್ಕೆ ಬಂದಿದೆ!

ಆದರೆ ಅದ್ಯಾಕೋ ಉತ್ತರ ಕರ್ನಾಟಕದವರೇ ಆಗಿರುವ ತ್ರ ರೈಲು ಸಚಿವ ಮಲ್ಲಿಕಾರ್ಜುನ ಖರ್ಗೆ ಸಾಹೇಬರಿಗೆ ತ್ರ ಅಂಕೋಲಾ-ಹುಬ್ಬಳ್ಳಿ ರೈಲು ಮಾರ್ಗ ನಿರ್ಮಾಣದ ರತ್ತು ಅರ್ಥವೇ ಆಗುತ್ತಿಲ್ಲ. ರೈಲು ಖಾತೆ ಿಕೊಂಡ ಹೊಸದರಲ್ಲಿ ಖರ್ಗೆ ಸಾಹೇಬರು ಳೂರಲ್ಲಿ ರೈಲು ಯೋಜನೆಗಳ ಪ್ರಗತಿ ಪರಿಶೀಲನಾ ಕರೆದಿದ್ದರು. ಅಂದು ಸ್ಥಗಿತಗೊಂಡಿರುವ ವಿವಿಧ ು ಯೋಜನೆಗಳ ಪುನರಾರಂಭಕ್ಕೆ ಕ್ರಮಕೈಗೊಳ್ಳುವ ವಸೆ ನೀಡಿದ್ದರು. ಆದರೆ ಅಪ್ಪಿ-ತಪ್ಪಿಯೂ ಳ್ಳಿ-ಅಂಕೋಲಾ ರೈಲು ಮಾರ್ಗದ ಬಗ್ಗೆ ಮಾತಾಡಲಿಲ್ಲ. ು ದಶಕದಿಂದ ಬಾಲಗ್ರಹಕ್ಕೆ ತುತ್ತಾಗಿರುವ ಈ ರೈಲ್ವೆ ್ಣ ಯೋಜನೆ ಬಗ್ಗೆ ಖರ್ಗೆ ನಿರ್ಲಕ್ಷ್ಯ-ನಿರಾಸಕ್ತಿ ರಿಸಿರುವುದು ಉತ್ತರ ಕರ್ನಾಟಕದ ಜನರಿಗೆ ಬೇಸರ ದೆ. ಉತ್ತರ ಕರ್ನಾಟಕದವರೇ ಆಗಿರುವ ಖರ್ಗೆಗೆ ಅಪ್ಪಿಸಿರುವ ಅಂಕೋಲಾ-ಹುಬ್ಬಳ್ಳಿ ರೈಲು ಮಾರ್ಗಕ್ಕೆ ಗಾಲು ಹಾಕಿರುವ ಪರಿಸರ ಲಾಬಿಯ ಮಣಿಸುವ ತ್ತು ಇಲ್ಲವಾ? ಯಾಕೆ ಖರ್ಗೆ ಕಂಡೂ ದಂತಿದ್ದಾರೆಯೇ? ಪುರೋಹಿತಶಾಹಿಗಳ ಹುನ್ನಾರಕ್ಕೆ ುಜನರು ಬಲಿಯಾಗಬೇಕಾ?

● ಶುದ್ಧೋಧನ


ಪಾರ್ವತೀಶ್, ಹೆಚ್.ಡಿ. ಕುಮಾರಸ್ವಾಮಿ ಹಾಗೂ ಗೌರಿ ಲಂಕೇಶ್

ವಿರೋಧ ಪಕ್ಷದ ನಾಯಕನೊಂದಿಗೆ ಒಂದಷ್ಟು ಮಾತುಕತೆ...

ಮೊನ್ನೆ ಜುಲೈ ಐದರ ಸಂಜೆ ವಿರೋಧ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿಯವರೊಂದಿಗೆ 'ಲಂಕೇಶ್' ಪತ್ರಿಕಾ ಬಳಗದ ನಾವೊಂದಿಷ್ಟು ಜನ ಕೆಲ ಹೊತ್ತು ಮಾತುಕತೆ ನಡೆಸಿ ಬಂದೆವು.

ಅದು ಮುಖ್ಯಮಂತ್ರಿ ಸಿದ್ದರಾಮಯ್ಯ ಈಗ ಮಂಡಿಸಲಿರುವ ಬಜೆಟ್ ಕುರಿತಂತೆ ನಡೆದ ಒಂದು ವಿಶ್ಲೇಷಣಾತ್ಮಕ ವಿಚಾರ ವಿನಿಮಯವಾಗಿತ್ತು.

ಜೂನ್ ತಿಂಗಳ ಕೊನೆಯ ದಿನ ಕುಮಾರಸ್ವಾಮಿಯವರ ವಿಧಾನಸೌಧದ ಆಫೀಸ್‌ನಿಂದ ನಮ್ಮ ಕಚೇರಿಗೊಂದು ಫೋನ್ ಕರೆ ಬಂದಿತು.

ಬಜೆಟ್ ಕುರಿತಂತೆ ಸರ್ಕಾರಕ್ಕೆ ಕೆಲವು ರಚನಾತ್ಮಕ ಸಲಹೆ ಸೂಚನೆಗಳನ್ನು ನೀಡಬಯಸಿದ್ದ ಕುಮಾರಸ್ವಾಮಿಯವರು ಆ ಬಗ್ಗೆ ನಮ್ಮ ತಂಡದೊಂದಿಗೂ ಚರ್ಚಿಸಲು ಇಚ್ಛಿಸಿ ಭೇಟಿಗಾಗಿ ಹೇಳಿ ಕಳುಹಿಸಿದ್ದರು.

ನಿಗದಿಯಾಗಿದ್ದಂತೆ ಜುಲೈ 5 ರ ಸಂಜೆ ನಾವು ವಿಧಾನಸೌಧದ ವಿರೋಧ ಪಕ್ಷದ ನಾಯಕರ ಕಚೇರಿಗೆ ಹೋದಾಗ ಅಲ್ಲಿ ಜನಜಂಗುಳಿ. ಅಧಿಕಾರವಿರಲಿ, ಇಲ್ಲದಿರಲಿ ಕುಮಾರಸ್ವಾಮಿಯವರು ಇದ್ದಲ್ಲಿ ಜನಜಾತ್ರೆ ಇದ್ದೇ ಇರುತ್ತದೆ. ನಾವು ಭೇಟಿಯಾಗುವ ಹೊತ್ತಿಗೆ ಕರ್ನಾಟಕ ಚೇಂಬರ್ ಆಫ್ ಕಾಮರ್ಸ್, ರೈತ ಸಮುದಾಯದವರು ಹಾಗೂ ಸಣ್ಣ ಕೈಗಾರಿಕಾ ಒಕ್ಕೂಟದವರೊಂದಿಗೂ ಅವರ ಭೇಟಿ ಮುಗಿದಿತ್ತು. ಗೌರಿ ಲಂಕೇಶ್, ಶಿವಸುಂದರ್ ಹಾಗೂ ನಾನು ಕರ್ನಾಟಕದ ಹಾಲಿ ಬಿಜೆಪಿ ಬಜೆಟ್ ಸೇರಿದಂತೆ ಈ ಹಿಂದಿನ ಕಾಂಗ್ರೆಸ್ ಹಾಗೂ ಜೆಡಿಎಸ್ ಸರ್ಕಾರಗಳು ಮಂಡಿಸಿದ್ದ ಬಜೆಟ್ ಅನ್ನು ಒಳಗೊಂಡಂತೆ ಒಂದಷ್ಟು ವಿಮರ್ಶಾತ್ಮಕ ವಿವರಗಳನ್ನು ಮಂಡಿಸಿದೆವು.

ವಿಶ್ವಬ್ಯಾಂಕ್ ಹಾಗೂ ಐಎಂಎಫ್ ಆರ್ಥಿಕ ನೀತಿಗಳ ಮೂಗಿನ ನೇರಕ್ಕೇ ರೂಪಿಸಲ್ಪಡುತ್ತಿರುವ ಕರ್ನಾಟಕದ ಬಜೆಟ್ ಹೇಗೆ 'ಸ್ವತಂತ್ರ-ಸ್ವಾವಲಂಬಿ'ಯಾಗಿಲ್ಲ ಎಂಬ ಮಾತೂ ಚರ್ಚೆಗೆ ಬಂತು. 2002 ರಲ್ಲಿ ಶಾಸನಸಭೆ ಅನುಮೋದಿಸಿರುವ **Fiscal Responsibility Act-2002** ಎಂಬುದು ಹೇಗೆ ಚುನಾಯಿತ ಸರ್ಕಾರಗಳ ಕೈಕಟ್ಟಿ ಹಾಕಿವೆ ಎಂಬುದನ್ನು ನಮ್ಮ ತಂಡ ವಿವರಿಸಿತು. ನೀರಾವರಿ, ವಿದ್ಯುತ್, ಕೃಷಿ ಹಾಗೂ ಕೈಗಾರಿಕಾ ನೀತಿಗಳು ಕರ್ನಾಟಕದ ಜನಸಾಮಾನ್ಯರ ಒಳಿತನ್ನು ಹೇಗೆ ನಿರ್ಲಕ್ಷಿಸುತ್ತಾ ಬರುತ್ತಿವೆ ಎಂಬ ಬಗ್ಗೆ ಶಿವಸುಂದರ್ ಒಂದಷ್ಟು ಅಂಕಿ-ಅಂಶ ಹಾಗೂ ಟಿಪ್ಪಣಿಗಳ ಸಹಿತ ಮಾಹಿತಿ ನೀಡಿದರು.

ವಿರೋಧ ಪಕ್ಷದ ನಾಯಕರಾಗಿ ಕುಮಾರಸ್ವಾಮಿ ಹೊಣೆಗಾರಿಕೆಯಿಂದ ನಡೆದುಕೊಳ್ಳುವ ಈ ಪ್ರಯತ್ನ ಮೆಚ್ಚಬೇಕಾದ್ದೇ.

ಆ ಭೇಟಿಯಲ್ಲೇ 'ಲಂಕೇಶ್' ಕುಮಾರಸ್ವಾಮಿಯವರೊಂದಿಗೆ ನಡೆಸಿದ ಸಂದರ್ಶನ ಇಲ್ಲಿದೆ.

ಲಂಕೇಶ್: ಹೊಸ ಸರ್ಕಾರ ಹೇಗನ್ನಿಸುತ್ತಿದೆ?

ಕುಮಾರಸ್ವಾಮಿ: ಗೊಂದಲ ಕಾಣಿಸುತ್ತಿದೆ. ಆತುರಾತುರವಾಗಿ ಕೆಲವು ತೀರ್ಮಾನಗಳನ್ನು ಪ್ರಕಟಿಸೋದು, ಆಮೇಲೆ ಆ ನಿರ್ಧಾರ ಬದಲಿಸೋದು ನಡೀತಿದೆ. ಹಾಗಾಗಿ ಸರ್ಕಾರ ಯಾವುದೇ ಹೊಸ ನಿರ್ಧಾರ ಮಾಡುವಾಗ ಕೂಲಂಕಷವಾಗಿ ಯೋಚಿಸಿ, ವಿವೇಚನೆಯಿಂದ ತೀರ್ಮಾನ ಮಾಡಿ ಆ ನಂತರ ಅನುಷ್ಠಾನಕ್ಕೆ ಹೊರಡುವುದು ಸೂಕ್ತ.

ಲಂ: ಎಲೆಕ್ಷನ್‌ನಲ್ಲಿ ಏನಾಯಿತು. What Went Wrong? ನಿಮ್ಮ ನಿರೀಕ್ಷೆ ಎಷ್ಟಿತ್ತು?

ಕು.ಸ್ವಾಮಿ: ನಮ್ಮ ಕಾರ್ಯಕರ್ತರು ಚೆನ್ನಾಗಿ ಕೆಲಸ ಮಾಡಿದರು. ನಮಗೆ 80 ರ ತನಕ ಸೀಟ್ ಗೆಲ್ಲುವ ನಿರೀಕ್ಷೆ ಇತ್ತು. ಆದರೆ ಕೆಲವು ಮಾಧ್ಯಮಗಳು "ಇಲ್ಲಾ... ಜೆಡಿಎಸ್‌ಗೆ ಅಷ್ಟು ಶಕ್ತಿ ಇಲ್ಲ, ಅದು ಕೆಲವು ಜಿಲ್ಲೆಗಳಿಗಷ್ಟೇ ಸೀಮಿತವಾಗಿದೆ. ಜೆಡಿಎಸ್ 30 ಸೀಟ್ ಅಷ್ಟೆ ಗೆಲ್ಲಬಹುದು ಅಂತ ವ್ಯವಸ್ಥಿತವಾಗಿ ಪ್ರಚಾರ ಮಾಡಿದರು. ಅಲ್ಲದೆ ಕೊನೆ **moment** ನಲ್ಲಿ ಮುಸ್ಲಿಂ ಕಮ್ಯೂನಿಟಿನಲ್ಲಿ 'ಜೆಡಿಎಸ್‌ಗೆ

ಸಂದರ್ಶನ

ಓಟ್ ಹಾಕಿದರೆ **fractured mandate** ಬಂದು ಮತ್ತೆ ಜೆಡಿಎಸ್-ಬಿಜೆಪಿ ಸಮ್ಮಿಶ್ರ ಸರ್ಕಾರ ಬಂದುಬಿಡುತ್ತೆ. ಪುನಃ ಕೋಮು ಶಕ್ತಿಗಳು ತಲೆ ಎತ್ತುತ್ತವೆ' ಅಂತಲೂ ಅಪಪ್ರಚಾರ ನಡೆಸಿದರು. ಅದು ಮುಸ್ಲಿಂ ಸಮುದಾಯದವರ ಮೇಲೆ ಬಹಳ ಪರಿಣಾಮ ಬೀರಿತು.

ಲಂ: ಮುಸ್ಲಿಮರು ಈ ಬಾರಿ ಕಾಂಗ್ರೆಸ್ ಪರವಾಗಿ ತೀರ್ಮಾನ ಮಾಡಿಕೊಂಡಿದ್ದಂತೆ ನಮಗೂ ಅನಿಸಿತ್ತು!

ಕು.ಸ್ವಾಮಿ: ಇಲ್ಲಾ, ಅದು ಆ ಥರ ಪ್ರಚಾರ ಆಗ್ತಾ ನಮಗೆ ಡ್ಯಾಮೇಜ್ ಮಾಡಿತು. ಇದಲ್ಲದೆ ನಮ್ಮ ಪಕ್ಷದ ಆರ್ಥಿಕ ಸ್ಥಿತಿಯು ಕಷ್ಟಕರವಾಗಿತ್ತು, ಹಾಗಾಗಿ ಈ ಮೂರು **factor** ಗಳಿಂದ ನಮಗೆ ಹಿನ್ನಡೆಯಾಯಿತು. ಈಗ ನೀವೇ ನೋಡಿ 300 ರಿಂದ 3000 ಓಟಿನ ಅಂತರದಲ್ಲಿ ನಮ್ಮ ಪಾರ್ಟಿ 32 ಕ್ಷೇತ್ರಗಳಲ್ಲಿ ಸೋತಿದೆ. ಆರ್ಥಿಕ ಕಷ್ಟಗಳು, ಮಾಧ್ಯಮಗಳ ಪೂರ್ವಗ್ರಹ ಹಾಗೂ ಮುಸಲ್ಮಾನರ ಕುರಿತ ಅಪಪ್ರಚಾರಗಳ ನಡುವೆಯೂ ನಾವಿಷ್ಟು ಹೋರಾಡಿ ಗೆಲುವಿನ ಹತ್ತಿರ ಬರಲು ಸಾಧ್ಯವಾಯಿತು.

ಲಂ: ದೇವೇಗೌಡರು ಹೇಗಿದ್ದಾರೆ ಸಾರ್?

ಕು.ಸ್ವಾಮಿ: ಚೆನ್ನಾಗಿದ್ದಾರೆ....

ಲಂ: ರಾಷ್ಟ್ರಮಟ್ಟದಲ್ಲಿ ತೃತೀಯ ರಂಗ ಇತ್ಯಾದಿ ಮಾತುಗಳು ಕೇಳಿಬರುತ್ತಿವೆ. ಇದರ ಬಗ್ಗೆ ನಿಮ್ಮ ಜೆಡಿಎಸ್ ಪಕ್ಷದ ಯೋಚನೆ ಏನಿದೆ?

ಕು.ಸ್ವಾಮಿ: (ಕೊಂಚ ಯೋಚಿಸಿ...) ಜೆಡಿಎಸ್ ಪಕ್ಷದ ಬಗ್ಗೆ ರಾಷ್ಟ್ರ ರಾಜಕಾರಣದ ವಿಚಾರ ಬಂದಾಗ ಅಷ್ಟೊಂದು ದೊಡ್ಡ ಶಕ್ತಿ ಎನ್ನುವ ರೀತಿ ಭಾವನೆಯೇನೂ ಇಟ್ಟುಕೊಂಡಿಲ್ಲ. ಆದರೆ ಇವತ್ತು ಕಾಂಗ್ರೆಸ್ ಮತ್ತು ಬಿಜೆಪಿಗೆ ವಿರುದ್ಧವಾಗಿ ಜೆಡಿಎಸ್ ಒಂದು ಪರ್ಯಾಯ ಶಕ್ತಿಯಾಗಿದೆ ಎಂಬುದನ್ನು ಅಸೆಂಬ್ಲಿ ಚುನಾವಣೆಯಲ್ಲಿ ಸಾಬೀತು ಮಾಡಿದ್ದೇವೆ. ಕನಿಷ್ಠ ಒಂದು ಹದಿನಾಲ್ಕು-ಹದಿನೈದು ಕ್ಷೇತ್ರಗಳಲ್ಲಿ ಹೆಚ್ಚಿನ ಆದ್ಯತೆ ನೀಡಬೇಕು ಅಂದುಕೊಂಡಿದ್ದೇವೆ. ಎಲ್ಲಾ ಕ್ಷೇತ್ರಗಳಲ್ಲೂ ಅಭ್ಯರ್ಥಿಗಳನ್ನು ಹಾಕುತ್ತೇವೆ. ಮುಂದಿನ ಆಗಸ್ಟ್ ತಿಂಗಳಿಂದಲೇ ನಮ್ಮ ತಯಾರಿ ಶುರುವಾಗಲಿದೆ.

ಲಂ: ನೀವು ಒಂದು ರೀತೀಲಿ ಯುಪಿಎ (ಕಾಂಗ್ರೆಸ್ ಮೈತ್ರಿಕೂಟ)ನಲ್ಲೇ ಇದ್ದೀರಲ್ವಾ?

ಕು.ಸ್ವಾಮಿ: ನಾವು ಬಾಹ್ಯಬೆಂಬಲ ಕೊಟ್ಟಿದ್ದೀವಿ ಅಷ್ಟೆ. **But** ಮುಂದಿನ ಚುನಾವಣೇಲಿ ಯುಪಿಎ ಅಥವಾ ಎನ್‌ಡಿಎಗಳು ಸ್ವತಂತ್ರವಾಗಿ ಸರ್ಕಾರ ಮಾಡಲು ಸಾಧ್ಯವಾಗದು ಅಂತ ಕೆಲವು **pre poll survey** ಗಳೇ ಹೇಳುತ್ತಿವೆ. ಅಲ್ಲದೆ ಪ್ರಾದೇಶಿಕ ಪಕ್ಷಗಳು ಬಲಯುತವಾಗಿ ಬೆಳಿತಿರೋದನ್ನ ಸಮೀಕ್ಷೆಗಳು ದಾಖಲಿಸಿವೆ. ಬಿಹಾರ, ಆಂಧ್ರ, ತಮಿಳುನಾಡಿನ ವಿದ್ಯಾಮಾನಗಳನ್ನು ಗಮನಿಸಿ ಈ ಅಭಿಪ್ರಾಯ ಬಂದಿರಬಹುದು.

ಲಂ: ನೀವು ಕನಕಪುರದಿಂದ ಈ ಬಾರಿ ಸಂಸತ್‌ಗೆ ಸ್ಪರ್ಧಿಸುತ್ತೀರಾ?

ಕು.ಸ್ವಾಮಿ: ಇಲ್ಲ... ನಾನು ಈ ಬಗ್ಗೆ ಆಗಲೇ ಕ್ಲಿಯರ್ ಆಗಿ ಹೇಳಿದ್ದೀನಿ. ರಾಜ್ಯ ಬಿಟ್ಟು ಹೋಗತಕ್ಕಂತ ಪ್ರಶ್ನೇನೇ ಇಲ್ಲ. ಆದರೆ ಬೆಂಗಳೂರು ಗ್ರಾಮಾಂತರ ಕ್ಷೇತ್ರ ಗೆಲ್ಲಲು ಸೀರಿಯಸ್ ಪ್ರಯತ್ನ ಮಾಡ್ತೇವೆ.

ಲಂ: ಬಿಜೆಪಿಯ ಐದು ವರ್ಷಗಳ ಆಡಳಿತದ ಬಗ್ಗೆ ಏನು ಹೇಳ್ತೀರಾ?

ಕು.ಸ್ವಾಮಿ: ಅವರು ಹೇಳಿಕೊಂಡ ರೀತೀಲೇ ಸರ್ಕಾರ ನಡೆಸಿದಿದ್ದರೆ ಇವತ್ತು ಕಾಂಗ್ರೆಸ್ ಅಧಿಕಾರಕ್ಕೆ ಬರಲು ಸಾಧ್ಯವಾಗುತ್ತಿರಲಿಲ್ಲ. ಅವರು ಎರಡು ಮೂರು ಕ್ಷೇತ್ರಗಳಲ್ಲಿ ಒಳ್ಳೆಯ ಕೆಲಸ ಮಾಡಿದರು ಅಷ್ಟೆ.

ಲಂ: ಯಾವುದು...?

ಕು.ಸ್ವಾಮಿ: ಉದಾಹರಣೆಗೆ ಹೈನುಗಾರಿಕೆಗೆ ಪ್ರೋತ್ಸಾಹಧನ ನೀಡಿದ್ದು, ಅದೊಂದು ಉತ್ತಮವಾದ ಕಾರ್ಯಕ್ರಮ.

ಲಂ: ಅದು ನಿಮ್ಮ ಕಾರ್ಯಕ್ರಮಾನೋ ಅಥವಾ ಬಿಜೆಪಿಯದ್ದೋ?

ಕು.ಸ್ವಾಮಿ: ಇಲ್ಲಾ... ಹೈನುಗಾರಿಕೆಗೆ ಸಬ್ಸಿಡಿಯಾಗಿ ಎರಡು ರೂ. ನೀಡುವುದು ಅದು ಅವರೇ ಮಾಡಿದ್ದು. ಅದು ಬಿಟ್ಟರೆ ಉಳಿದದ್ದು ಹಿಂದಿನ ಸರ್ಕಾರದ ಕಾರ್ಯಕ್ರಮಗಳೇ. ಅದು ಭಾಗ್ಯಲಕ್ಷ್ಮಿ ಯೋಜನೆ ಇರಬಹುದು, ಸೈಕಲ್ ಯೋಜನೆ ಇರಬಹುದು, ಅದೆಲ್ಲಾ ನಮ್ಮ ಸರ್ಕಾರ ಇದ್ದಾಗ ರೂಪಿಸಿದ ಯೋಜನೆಗಳು. ಬಿಜೆಪಿ ಸರ್ಕಾರ ಅದನ್ನು ಮುಂದುವರೆಸಿಕೊಂಡು ಹೋಯಿತು.

–ಇದಿಷ್ಟು ಮಾತನಾಡುವ ವೇಳೆಗೆ ಕುಮಾರಸ್ವಾಮಿಯವರ ಕಚೇರಿ ಜನರಿಂದ ತುಂಬಿ ಹೋಗಿತ್ತು. ಸಿದ್ದರಾಮಯ್ಯನವರ ಬಜೆಟ್ ಮಂಡನೆಯಾದ ನಂತರ ಪುನಃ ಭೇಟಿಯಾಗೋಣ ಅಂದರು ಕುಮಾರಸ್ವಾಮಿ.

● ಪಾರ್ವತೀಶ



ಬಾಕ್ಸಾಫೀಸ್ ಬಾದ್‌ಶಾಹ

ದರ್ಶನ್ ವಹಿವಾಟು ಎಷ್ಟಿದೆ ಗೊತ್ತಾ?

ಗಾಂಧಿನಗರದ ಗಲ್ಲಾ ಪೆಟ್ಟಿಗೆಗೊಬ್ಬ ಸುಲ್ತಾನನ ಆಗಮನವಾಗಿದೆ. ಇತ್ತೀಚಗೆ ತೆರೆಕಂಡ 'ಬುಲ್‌ಬುಲ್'ನಂಥ ಸಾಧಾರಣ ಚಿತ್ರವೊಂದು ಕರ್ನಾಟಕದ ಸರಿಸುಮಾರು 60 ಚಿತ್ರಮಂದಿರಗಳಲ್ಲಿ ಸದ್ದಿಲ್ಲದೆ ಐವತ್ತು ದಿನಗಳನ್ನು ಪೂರೈಸುವ ಮೂಲಕ ದರ್ಶನ್ ಕನ್ನಡದ ಬಾಕ್ಸ್ ಆಫೀಸ್‌ನ ಏಕಮಾತ್ರ ಸುಲ್ತಾನನೆಂಬುದನ್ನು ಮತ್ತೊಮ್ಮೆ ಒತ್ತಿ ಹೇಳಿದಂತಾಯ್ತು.

ಸದ್ಯ ಕನ್ನಡದ ಮೂವರು ಸೂಪರ್‌ಸ್ಟಾರ್‌ಗಳ ಪೈಕಿ ಪುನೀತ್ ಮತ್ತು ಸುದೀಪ್ ಹೊರತುಪಡಿಸಿದರೆ ಅವರಿಬ್ಬರಿಂದಲೂ ಸಾಧ್ಯವಾಗದ ಮಾರುಕಟ್ಟೆಯ ಆಧಿಪತ್ಯವನ್ನು ದರ್ಶನ್ ನಿರಾಯಾಸವಾಗಿ ಸಾಧಿಸಿರುವುದು ನಿಜಕ್ಕೂ ಅಚ್ಚರಿ ಹುಟ್ಟಿಸುತ್ತದೆ. ಆ ಪಾಟ ನಿರೀಕ್ಷೆ ಹುಟ್ಟಿಸಿದ್ದ ಪುನೀತ್ ಕೊನೆಯ ಚಿತ್ರ 'ಅಣ್ಣಾ ಬಾಂಡ್'ಗೆ ದುನಿಯಾ ಸೂರಿಯಂಥ ಸ್ಟಾರ್ ನಿರ್ದೇಶಕನ ಕೈಚಳಕವಿದ್ದೂ ಅದರ ಟೀವಿ ರೈಟ್ಸ್ ನಾಲ್ಕು ಕೋಟಿಗೂ ಮೀರಲೇ ಇಲ್ಲ. ಇನ್ನೇನು ಬಾಕ್ಸ್ ಆಫೀಸ್ ದೋಚಿ ಹಾಕುತ್ತದೆ ಎಂಬ ಮಾತು ಕೂಡ ಸುಳ್ಳಾದಾಗ 'ಅಣ್ಣಾ ಬಾಂಡ್'ನ ಒಟ್ಟೂ ಗಳಿಕೆ 15 ಕೋಟಿಯನ್ನು ದಾಟಲೇ ಇಲ್ಲ.

ಇನ್ನು ಸುದೀಪ್‌ನ 'ಬಚ್ಚನ್' ಚಿತ್ರದ ಟಿವಿ ರೈಟ್ಸ್ ನಾಲ್ಕು ಕೋಟಿಯನ್ನೂ ಮುಟ್ಟಲಿಲ್ಲ. ಅದಕ್ಕೂ ಮುನ್ನ ತೆರೆಕಂಡಿದ್ದ ಸುದೀಪ್‌ನ 'ವರದನಾಯಕ' ತನ್ನ ಮೊದಲ ವಾರದ ಗಳಿಕೆಯಲ್ಲಿ ಆತನಕದ ಎಲ್ಲಾ ದಾಖಲೆಯನ್ನು ಸರಿಗಟ್ಟಿತ್ತಾದರೂ ಅನಂತರದ 'ಬಚ್ಚನ್' ಸುದೀಪ್‌ನ ಹಳೇ ದಾಖಲೆಯನ್ನೂ ಮುರಿದು ಹಾಕಿತ್ತು. ಈಗ ಮೊದಲ ವಾರದ ಗಳಿಕೆಯ ಸುದೀಪ್ ಚಿತ್ರಗಳಾದ 'ವರದನಾಯಕ' ಮತ್ತು 'ಬಚ್ಚನ್' ದಾಖಲೆಗಳನ್ನು ದರ್ಶನ್‌ನ 'ಬುಲ್‌ಬುಲ್' ಮುರಿ... ಮುರಿದು ಹಾಕಿದೆ.

'ಬುಲ್‌ಬುಲ್' ಆ ಪಾಟ ನಿರೀಕ್ಷೆಗಳಿದ್ದ ಚಿತ್ರವೇನಲ್ಲ. ಅಂಬರೀಷ್ ತಂದೆ ಪಾತ್ರ ಮಾಡಿದ ಮಾತ್ರಕ್ಕೇ ಚಿತ್ರ ಗೆದ್ದು ಬಿಡುತ್ತದೆ ಎಂಬುದೂ ವಾಸ್ತವವಲ್ಲ. ಬಿಡುಗಡೆಗೂ ಮೊದಲೇ 'ಬುಲ್‌ಬುಲ್'ನ ಟಿವಿ ರೈಟ್ಸ್ ನಾಲ್ಕೂ ಕಾಲು ಕೋಟಿಗೆ ಮಾರಾಟವಾಗಿದ್ದು ಆ ತನಕದ ಕನ್ನಡ ಚಿತ್ರರಂಗದ ಸಾರ್ವಕಾಲಿಕ ದಾಖಲೆಯಾಗಿತ್ತು. ಅದಕ್ಕೂ ಮುನ್ನ 'ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ' ಅತಿ ಹೆಚ್ಚು ಟಿವಿ ರೈಟ್ಸ್ ಗಿಟ್ಟಿಸುವ ಮೂಲಕ ಸ್ಥಾಪಿಸಿದ ದಾಖಲೆಯನ್ನು 'ಬುಲ್‌ಬುಲ್' ಮುರಿದಿತ್ತು. ಆದರೆ ಇನ್ನೂ ತೆರೆಕಾಣದ ಚಿತ್ರೀಕರಣವಿನ್ನೂ ಪೂರ್ತಿಗೊಳ್ಳದ ದರ್ಶನ್‌ನ ಮುಂಬರುವ ಚಿತ್ರ 'ಬೃಂದಾವನ'ದ ಟಿವಿ ರೈಟ್ಸ್ ಬರೋಬ್ಬರಿ ಐದು ಕೋಟಿಗೆ ಮಾರಾಟವಾಗುವ ಮೂಲಕ ಕನ್ನಡ ಚಿತ್ರರಂಗದಲ್ಲಿ ಯಾವೊಂದು ಚಿತ್ರವೂ ಮಾಡದ ಸಾಧನೆಯೊಂದಕ್ಕೆ ದರ್ಶನ್ ಕಾರಣರಾಗುತ್ತಿದ್ದಾರೆ!

ಬುಲ್‌ಬುಲ್..!

ನಟನೊಬ್ಬನ ಚಿತ್ರವೊಂದಕ್ಕೆ ಐದು ಕೋಟಿಯ ಟಿವಿ ರೈಟ್ಸ್ ಅಂದರೆ ಗಾಂಧಿನಗರದ ಮಟ್ಟಿಗೆ ಸಣ್ಣ ಮಾತೇನಲ್ಲ. ಅಲ್ಲಿಗೆ ಟಿವಿ ರೈಟ್ಸ್ ಲೆಕ್ಕದಲ್ಲಿ ಅತಿ ಹೆಚ್ಚು ಮೊತ್ತಕ್ಕೆ ಮಾರಾಟವಾದ ಮೊದಲ ಮೂರು ಚಿತ್ರಗಳೂ ದರ್ಶನ್‌ನದ್ದೇ ಆದಂತಾಯ್ತು.

ಇದಲ್ಲದೆ ಮೊದಲ ವಾರದ ಗಳಿಕೆ ಮತ್ತು ಚಿತ್ರವೊಂದರ ಒಟ್ಟಾರೆ ಗಳಿಕೆಯಲ್ಲೂ ಮೊದಲ ಮೂರು ಚಿತ್ರಗಳನ್ನು ಲೆಕ್ಕ ಹಾಕುವುದಾದರೆ ಆ ಸಾಲಿನಲ್ಲಿ ಕ್ರಮವಾಗಿ 'ಸಾರಥಿ', 'ಸಂಗೊಳ್ಳಿ ರಾಯಣ್ಣ' ಮತ್ತು 'ಬುಲ್‌ಬುಲ್' ನಿಲ್ಲುತ್ತವೆ. ಇವೆಲ್ಲವೂ ದರ್ಶನ್ ಚಿತ್ರಗಳೇ!

ಇತ್ತೀಚಿಗೆ ಒಂದರ ಮೇಲೊಂದರಂತೆ ತೆರೆಕಂಡ ದರ್ಶನ್‌ನ ನಾಲ್ಕೂ ಚಿತ್ರಗಳು ಗಾಂಧಿನಗರದ ಪಂಡಿತರ ಲೆಕ್ಕಾಚಾರಗಳೆಲ್ಲವನ್ನೂ ತಲೆಕೆಳಗು ಮಾಡಿಬಿಟ್ಟವು. ದರ್ಶನ್ ಜೈಲಲ್ಲಿದ್ದಾಗಲೇ ತೆರೆಕಂಡ 'ಸಾರಥಿ' ಗಲ್ಲಾ ಪೆಟ್ಟಿಗೆಯನ್ನೇ ಚಿಂದಿಯೆಬ್ಬಿಸಿತು. ಸರಿಸುಮಾರು 25 ಕೋಟಿಯನ್ನದು ಬಾಚಿ ಹಾಕಿತ್ತು. ಆ ನಂತರ ಬಂದದ್ದು ಮಹಾದೇವ್ ನಿರ್ಮಿಸಿದ, ಕೋರಿಯೋಗ್ರಾಫರ್ ಹರ್ಷ ನಿರ್ದೇಶನದ 'ಚಿಂಗಾರಿ'. ಅಂತಾ ವಿಶೇಷವೇನೂ ಇಲ್ಲದಿದ್ದರೂ ಮೊದಲ ವಾರದಲ್ಲೇ ಸರಿಸುಮಾರು ಆರೂವರೆ ಕೋಟಿ ಸಂಗ್ರಹಿಸಿದ 'ಚಿಂಗಾರಿ' ತನ್ನ ಐದನೇ ವಾರದ ಹೊತ್ತಿಗೆ 15 ಕೋಟಿಗೂ ಮೀರಿದ ಕಲೆಕ್ಷನ್ ಕಂಡಿತ್ತು. ಆದಾದ ನಂತರ 'ಸಂಗೊಳ್ಳಿ ರಾಯಣ್ಣ' ಹತ್ತಿರತ್ತಿರ 30 ಕೋಟಿ ದುಡಿದಿತ್ತು.

ಈಗ 'ಬುಲ್‌ಬುಲ್'ನ ಸರದಿ. ರಾಜ್ಯಾದ್ಯಂತ 130 ಕ್ಕೂ ಅಧಿಕ ಚಿತ್ರಮಂದಿರಗಳಲ್ಲಿ ಬಿಡುಗಡೆಗೊಂಡ 'ಬುಲ್‌ಬುಲ್'ನ ಮೊದಲ ವಾರದ ಗಳಿಕೆಯೊಂದೇ ಆರೂವರೆ ಕೋಟಿಯನ್ನು ಮೀರಿದೆ. ಸರಿಸುಮಾರು 180 ಥೇಟರುಗಳಿಗೆ ಬಿಡುಗಡೆಗೊಂಡಿದ್ದ 'ವರದನಾಯ[ಕ]'ಕ್ಕೆ ಹೋಲಿಸಿದರೆ 'ಬುಲ್‌ಬುಲ್'ನ ಗಳಿಕೆ ಎಂಥವರಿ[ಗೂ] ಅಚ್ಚರಿ ಹುಟ್ಟಿಸುವಂತದ್ದು. ಮಹತ್ವಾಕಾಂಕ್ಷೆಯ 'ಸಂಗೊ[ಳ್ಳಿ] ರಾಯಣ್ಣ' ಕೂಡ ಮೊದಲ ವಾರದಲ್ಲಿ ಇಷ್ಟೊಂದು ಕಲೆ[ಕ್ಷನ್] ಗಳಿಸಿರಲಿಲ್ಲ. ಸರಿಸುಮಾರು 60 ಚಿತ್ರಮಂದಿರಗಳಲ್ಲಿ ಐ[ವತ್ತು] ದಿನ ಪೂರೈಸುವ ಹೊತ್ತಿಗೆ 'ಬುಲ್‌ಬುಲ್'ನ ಒಟ್[ಟು] ಗಳಿಕೆಯೇ 20 ಕೋಟಿಯನ್ನು ದಾಟಿತ್ತು. ಶತದಿನೋತ್ಸವ[ದತ್ತ] ಮುನ್ನುಗ್ಗುತ್ತಿರುವ 'ಬುಲ್‌ಬುಲ್' ಇನ್ನೆರಡು ವಾರ[ದ] ಕಾಲ ಇದೇ ಪ್ರಮಾಣದಲ್ಲಿ ಓಡಿದರೂ ಸಾ[ಕು] ನಿರಾಯಾಸವಾಗಿ ಅದು 'ಸಂಗೊಳ್ಳಿ ರಾಯಣ್ಣ'ನ ಒಟ್[ಟು] ಗಳಿಕೆಯಾದ 30 ಕೋಟಿಯನ್ನೂ ಮೀರಲಿದೆ!

ಬಾಕ್ಸ್ ಆಫೀಸ್ ಬಾದ್‌ಶಾಹ

ಹಿಂದೆ ವರನಟ ರಾಜ್ ಚಿತ್ರಗಳಷ್ಟೇ ಈ ರಿ... ಒಂದರ ನಂತರ ಮತ್ತೊಂದರಂತೆ ಮೂರ್ನಾಲ್ಕು ಚಿತ್ರ... ಒಟ್ಟೊಟ್ಟಿಗೆ 25 ವಾರಗಳ ಕಾಲ ಓಡಿದ್ದರೂ ಈ ಮಟ್ಟ... ಗಳಿಕೆ ಹುಟ್ಟುತ್ತಿರಲಿಲ್ಲ. ಈಗ ಹಾಗಿಲ್ಲ. ತೆಲುಗಿ... ಚಿರಂಜೀವಿ, ಹಿಂದಿಯಲ್ಲಿ ಸಲ್ಮಾನ್ ಮತ್ತು ತಮಿ... ರಜನಿಕಾಂತ್ ಚಿತ್ರಗಳೆಲ್ಲ ಹೇಗೆ ಕೋಟಿ ಕೋಟಿ ... ಹಾಕುತ್ತವೋ ಅಂಥದೊಂದು ಬಾಕ್ಸ್ ಆಫೀಸ್ ಸಾಮ... ಮೊದಲ ಬಾರಿಗೆ ಕನ್ನಡಕ್ಕೆ ಕಾಲಿಟ್ಟಿರುವುದು ದರ್ಶ... ಮೂಲಕವೇ.

ಗಾಂಧಿನಗರದ ಇತಿಹಾಸ ಬಲ್ಲವರೇ ಹೇಳುವ... ಮ್ಯಾಟನಿ ಐಡಲ್ ರಾಜ್‌ಕುಮಾರ್ ನಂತರ 'ಬಾಕ್ಸ್ ಆಫೀ... ಬಾದಶಾಹ' ಎಂಬ ಹೆಗ್ಗಳಿಕೆಗೆ ಪಾತ್ರನಾದ ಏಕೆ... ನಟನೆಂದರೆ ಅದು ದರ್ಶನ್!

ಇದರರ್ಥ ವಿಷ್ಣುವರ್ಧನ್, ಅಂಬರೀಷ್, ರವಿಚಂದ್ರ... ಶಿವಣ್ಣ, ಪುನೀತ್ ಮತ್ತು ಸುದೀಪ್ ಇತ್ಯಾದಿ ಯಾ... ಒಬ್ಬ ಕನ್ನಡದ ಹೀರೋ ಸಾಧಿಸಲಾಗದ ಮಾರುಕ... ಆಧಿಪತ್ಯವನ್ನು ಸದ್ದಿಲ್ಲದೆ ದರ್ಶನ್ ಸಾಧಿಸಿದ್ದಾನೆ. 'ಸಂಗೊ... ರಾಯಣ್ಣ' ಹೊರತಾಗಿ 'ಸಾರಥಿ', 'ಚಿಂಗಾರಿ', 'ಬುಲ್‌ಬು... ಎಲ್ಲವೂ ಸಾಧಾರಣದ ಚಿತ್ರಗಳೇ. ಪ್ರಭಾವೀ ಹಿನ್ನೆಲೆಯಿಲ್ಲ... ದೊಡ್ಡ ದೊಡ್ಡ ಬ್ಯಾನರ್‌ಗಳು, ಹೆಸರಾಂತ ಡೈರೆಕ್ಟರ್‌ಗ... ಬಿಗ್ ಬಜೆಟ್ ಯಾವುದೂ ಇಲ್ಲದೆ, ವಿಶಿಷ್ಟಕತೆಯಾಗ... ವಿಷಯವಾಗಲಿ ಇಲ್ಲದೆ ಕೇವಲ ತನ್ನ ಹೆಸರಿ... ಬಲವೊಂದರಿಂದಲೇ ಎಂಥಾ ಮಾಮೂಲಿ ಚಿತ್ರವನ್... ಅಭೂತಪೂರ್ವ 'ಹಿಟ್' ಆಗಿ ಪರಿವರ್ತಿಸಬಲ್ಲ ದರ್ಶ... ಸದ್ಯ ಪುನೀತ್ ಮತ್ತು ಸುದೀಪ್ ಇಬ್ಬರನ... ಅನಾಯಾಸವಾಗಿ ಹಿಂದಿಕ್ಕಿದ್ದಾರೆ.

ಪುನೀತ್ ಇತ್ತೀಚಿನ ಚಿತ್ರಗಳಾದ 'ಅಣ್ಣಾ ಬಾಂಡ್... 'ಪರಮಾತ್ಮ', 'ವಂಶಿ', 'ಪೃಥ್ವಿ', 'ಜಾಕಿ' ಇತ್ಯಾದಿಗ... 'ಮಿಲನ'ದ ಮಟ್ಟಕ್ಕೆ ಹೋಲಿಸಿದರೆ ಏನೇನೂ ಅ... ಹಾಗೆ ಸುದೀಪ್‌ನ 'ಕೆಂಪೇಗೌಡ', 'ವಿಷ್ಣುವರ್ಧನ... 'ವರದನಾಯಕ' ಮತ್ತು 'ಬಚ್ಚನ್' ಚಿತ್ರಗಳ ಕಲೆಕ್ಷ... ದರ್ಶನ್‌ನ ಸಾರಥಿಗೆ ಹೋಲಿಸಿದರೆ ಹೇಳಿಕೊಳ್ಳುವಷ್ಟ... ಪುನೀತ್ ಬೆನ್ನಿಗಿರುವ ರಾಜ್‌ಕುಮಾರ್ ನೆರಳು ಮ... ಸುದೀಪ್ ಹೆಸರಿಗೆ ತೆಲುಗು, ತಮಿಳು, ಹಿಂದಿಯಲ್ಲಿರು... ಮಾರುಕಟ್ಟೆಯನ್ನು ಹೊರತುಪಡಿಸಿದರೆ ಇದ್ಯಾವುದೂ ಇಲ್... ದರ್ಶನ್ ಗಾಂಧಿನಗರದ ಮಟ್ಟಿಗೆ ಗಳಿಸಿದ ವರ್ಚ... ಎಂಥವರಲ್ಲೂ ಅಚ್ಚರಿ ಹುಟ್ಟಿಸಲೇಬೇಕು.

ಒಂದು ಮೂಲದ ಪ್ರಕಾರ ದರ್ಶನ್‌ನ ಸದ್... ಕಾಲ್‌ಶೀಟ್ ರೇಟೇ 5 ಕೋಟಿಯನ್ನು ದಾಟಿದೆ. ಪುನೀ... ಹೊಸ ನಿರ್ಮಾಪಕರಿಗೆ ಆರು ಅಥವಾ ಏಳು ಕೋ... ಕೇಳಬಹುದು. ಹಾಗೇ ಸುದೀಪ್ ಕೂಡ ಐದು ಕೋ... ನಿರೀಕ್ಷಿಸಬಹುದು. ಆದರೆ ಅವರಿಬ್ಬರನ್ನೂ ಮೀರಿ ಬಹುತೇ... ಕನ್ನಡದ ನಿರ್ಮಾಪಕರೆಲ್ಲ ದರ್ಶನ್ ಮನೆ ಬಾಗಿ... ಕಾಯುತ್ತಿದ್ದಾರೆಂದರೆ ಅದರ ಲೆಕ್ಕಾಚಾರವೇ ಬೇರೆ. ಏಕೆಂದ... ಪುನೀತ್ ಅಥವಾ ಸುದೀಪ್ ಹೆಸರಿಗಿರುವಷ್ಟೆ ಗ್ಯಾರಂ... ದರ್ಶನ್‌ಗೂ ಇದೆ. ಪುನೀತ್ ಹಾಕಿಕೊಂಡು ಮಾಡಿ... ಸಿನಿಮಾ ಬಾಕ್ಸ್ ಆಫೀಸ್‌ನಲ್ಲಿ ಸೊರಗಬಹುದು. ಸುದೀ... ಕಾಲ್‌ಶೀಟ್ ಸಿಕ್ಕರೆ ತೆಲುಗು, ತಮಿಳಿನಲ್ಲಿ ಡಬ್ಬಿಂಗ್... ರೈಟ್ಸ್‌ನಿಂದ ಅಷ್ಟಿಷ್ಟು ಕಾಸು ಕಾಣಬಹುದು. ಆದ... ಕರ್ನಾಟಕದ ಮಟ್ಟಿಗೆ ಎಂಥಾ ಸಾಧಾರಣ ಚಿತ್ರವಾದರ... ಗೆದ್ದೇ ಗೆಲ್ಲುತ್ತದೆ ಎಂಬ ಗ್ಯಾರಂಟಿಯಿರುವುದು ದರ್ಶ... ಹೆಸರಿಗೆ ಮಾತ್ರವೇ!

ಮುಗಿಬೀಳುವ ಹಂಚಿಕೆದಾರರು

ಯಾರೇ ನಿರ್ಮಾಪಕನೊಬ್ಬನಿಗೆ ದರ್ಶನ್ ಕಾಲ್‌ಶೀ... ಸಿಕ್ಕಿತೆಂದರೆ ಸಾಕು, ನಿರಾಯಾಸವಾಗಿ ಹತ್ತು ಕೋಟಿಯ... ಅಡ್ವಾನ್ಸ್ ಹುಟ್ಟುತ್ತದೆ. ಇದೇ ದರ್ಶನ್ ಮಾರುಕಟ್ಟೆ... ಮೂಲ ಸೂತ್ರ. ಐದು ಕೋಟಿ ತೆತ್ತು ದರ್ಶನ್ ಕಾಲ್‌ಶೀ... ಪಡೆದವನಿಗೆ ಶೂಟಿಂಗ್‌ಗೆ ಮೊದಲೇ ಆ ಚಿತ್ರದ ಟಿ... ರೈಟ್ಸ್ ಲೆಕ್ಕದಲ್ಲೇ ಅಡ್ವಾನ್ಸ್ ಎಂದು ಎರಡೂವರೆ ಕೋ... ಬಂದು ಬಿಡುತ್ತದೆ. ಇನ್ನು ನಿರ್ಮಾಪಕ ಮತ್ತು ಟಿವಿ... ಸಂಬಂಧ ಚೆನ್ನಾಗಿತ್ತೆಂದರೆ ಪೂರ್ತಿ ಐದು ಕೋಟಿಯನ... ಶೂಟಿಂಗ್ ವೇಳೆಯಲ್ಲೇ ಪಾವತಿಸಬಹುದು. ಸಾಲದ... ಕರ್ನಾಟಕದಾದ್ಯಂತ ಹಂಚಿಕೆಗೆಂದೇ ಡಿಸ್ಟ್ರಿಬ್ಯೂಟರ್‌ಗಳ... ಪೈಪೋಟಿಗಿಳಿಯುತ್ತಾರೆ. ಪ್ರತಿಯೊಬ್ಬ ಹಂಚಿಕೆದಾ...

ಸೂಪರ್ ಬೈಕ್ ಖಯಾಲಿ ಮತ್ತು ಹಾರ್ಲೇ ಡೇವಿಡ್‌ಸನ್ ಕಾಣಿಕೆ




ತಾನೇ ಬಂಡವಾಳ ಹಾಕಿ, ತನ್ನದೇ ಸಂಸ್ಥೆಯ ಮೂಲಕ ಚಿತ್ರವನ್ನೂ ನಿರ್ಮಿಸಿ ಅದರ ಲಾಭವನ್ನು ಮಾತ್ರ ತನ್ನ ಗೆಳೆಯರಿಗೆ ಹಂಚುವ ದರ್ಶನ್‌ನ ದೊಡ್ಡಸ್ತಿಕೆಗೆ ಸಿಕ್ಕ ಕಾಣಿಕೆಯೇನು ಗೊತ್ತೆ?

20 ಲಕ್ಷದ ಹಾರ್ಲೇ ಡೇವಿಡ್‌ಸನ್ ಸೂಪರ್ ಬೈಕ್!



ಜಯಂತ್ ಕಾಯ್ಕಿಣಿ, ಯೋಗರಾಜ್ ಭಟ್‌ಗೆ ಹೋಲಿಸಿದರೆ ಚಿತ್ರಗೀತೆಗಳ ವಿಷಯದಲ್ಲಿ ಒಂದು ಕೈ ಮೇಲಂತಿದ್ದರೆ ಅದು ಕವಿರಾಜ್. ಕವಿರಾಜ್ ಕೊಟ್ಟಷ್ಟು ಹಿಟ್ ಹಾಡುಗಳನ್ನು ಸದ್ಯದ ಮತ್ತೊಬ್ಬ ಸಾಹಿತಿ ಕೊಟ್ಟಿಲ್ಲ. ಆದರೆ ಕವಿರಾಜ್ ಬೆನ್ನಿಗೆ ಜಾತಿ ಲಾಬಿಯಾಗಲಿ, ಮೀಡಿಯಾ ಸರ್ಕಲ್ಲಾಗಲಿ ಇಲ್ಲ. ಅದ್ಭುತವೆನಿಸುವಂಥ ಸಾಹಿತ್ಯ ಕೊಟ್ಟರೂ ಪ್ರಭಾವಿ ಲಾಬಿಗಳ ಕಾರಣದಿಂದಾಗಿ ಕವಿರಾಜ್‌ಗೆ ಸಿಗಬೇಕಾದ ಮನ್ನಣೆ-ಪ್ರಶಂಸೆಗಳು ಸಿಗಲಿಲ್ಲ. ಬಹುಶಃ ಇದೇ ಕಾರಣಕ್ಕಿರಬೇಕು ದರ್ಶನ್‌ಗೆ ಕವಿರಾಜ್ ಬಗ್ಗೆ ವಿಶೇಷ ಅಕ್ಕರೆ. ಏಕೆಂದರೆ ದರ್ಶನ್ ಹೀರೋ ಆಗಿದ್ದ ಕರಿಯ ಚಿತ್ರದ 'ಸನ್ನಲಿ ಸಾವಿಲ್ಲ...' ಗೀತೆಯೇ ಕವಿರಾಜ್‌ರ ಪಾಲಿನ ಮೊದಲ ಹಾಡಾಗಿತ್ತು.

ಅಂಥದೊಂದು ಬಾಂಧವ್ಯಕ್ಕೆ ದರ್ಶನ್ ತೆತ್ತ ಬೆಲೆ ಯಾರ ನಿರೀಕ್ಷೆಗೂ ನಿಲುಕದ್ದು. ಅದು ವ್ಯಕ್ತಗೊಂಡಿದ್ದು ಬುಲ್‌ಬುಲ್ ಮೂಲಕವೇ. ಸಂಭಾಷಣೆ ಮತ್ತು ಗೀತರಚನೆ ಮಾಡಿದ ಒಂದೇ ಕಾರಣಕ್ಕೆ ಕವಿರಾಜ್‌ರನ್ನೂ ನಿರ್ಮಾಪಕರೆಂದು ದರ್ಶನ್ ಪಾಲು ಕೊಡುತ್ತಿದ್ದಾರೆ. ಈ ಥರದ ಪಾಲಿನ ಮೊತ್ತವೇ ತಲಾ ಮೂರು ಕೋಟಿಯನ್ನೂ ಮೀರುವಷ್ಟು!



ಅಲ್ಲಿಗೆ ಒಂದು ಚಿತ್ರದ ಮೂಲಕ ದರ್ಶನ್ ಚಿತ್ರರಂಗದ ನಾಲ್ವರು ತಂತ್ರಜ್ಞರ ಬದುಕನ್ನು ಕಟ್ಟಿಕೊಟ್ಟಂತಾಯ್ತು. ತಮ್ಮನ್ನು ಈ ರೀತಿ ಉದ್ಧರಿಸಿದ ದರ್ಶನ್ ಮೇಲಿನ ತಮ್ಮ ಪ್ರೀತಿಯನ್ನೂ ತೋರಿಸಬೇಕಲ್ಲವೇ? ಹಾಗಂಥ ದುಡ್ಡು ಕೊಡುವಂತಿಲ್ಲ. ಅದಕ್ಕೊಂದು ಕವಿರಾಜ್ ಮಾಡಿದ ಉಪಾಯವೆಂದರೆ ದರ್ಶನ್‌ಗೆ ಪ್ರಿಯವಾದ ಸೂಪರ್ ಬೈಕ್ ಒಂದನ್ನು ಕಾಣಿಕೆಯಾಗಿ ನೀಡುವುದು!

ದರ್ಶನ್ ಖಯಾಲಿಗಳ ಪೈಕಿ ಸೂಪರ್ ಬೈಕ್‌ಗಳ ಸಂಗ್ರಹಣೆಯೂ ಒಂದು. ಈಗಾಗಲೇ ಒಂದು ಹಯಾಬುಸಾ ಮತ್ತು ಸುಜುಕಿ ಇಂಟ್ರೂಡರ್ ಬೈಕುಗಳು ದರ್ಶನ್ ಬಳಿಯಿವೆ. ಪ್ರಪಂಚದ ಥರೇವಾರಿ ಕ್ರೂಜರ್ ಬೈಕುಗಳ ಪೈಕಿ ಅಪೂರ್ವವೆನಿಸುವ ಏಳು ಬೈಕುಗಳನ್ನು ಹೊಂದುವುದು ದರ್ಶನ್ ಕನಸಂತೆ. ಈ ಸಾಲಿಗೀಗ ಬುಲ್‌ಬುಲ್‌ನ ಐವರೂ ನಿರ್ಮಾಪಕರು ಸೇರಿಸಿ 20 ಲಕ್ಷಕ್ಕೆ ಖರೀದಿಸಿದ 1700 ಸಿ.ಸಿ. ಸಾಮರ್ಥ್ಯದ ಹಾರ್ಲೇ ಡೇವಿಡ್‌ಸನ್ ಬೈಕೂ ಸೇರಿಕೊಂಡಿದೆ. ಒಂದಾನೊಂದು ಕಾಲಕ್ಕೆ 200 ರೂಪಾಯಿ ಜೇಬಿಗಿಟ್ಟುಕೊಂಡು ಬೆಂಗಳೂರಿನ ರೈಲು ಹತ್ತುತ್ತಿದ್ದ ದರ್ಶನ್ ಒಪ್ಪತ್ತಿನ ಊಟಕ್ಕೂ ಪರದಾಡುತ್ತಿದ್ದ ದಿನಗಳಿದ್ದವು.




...ನೆಯೇ ಮೃಗಾಲಯ

...ದರ್ಶನ್ ಬಳಿ ಬೇಕಾಬಿಟ್ಟಿ ದುಡ್ಡು ಕೊಳೆಯುತ್ತಿದೆ, ಆದಕ್ಕೆಂದೇ ಕಂಡಕಂಡ ...ಪಕ್ಷಿಗಳನ್ನೆಲ್ಲ ಖರೀದಿಸಿ ಶೋಕಿ ಉಡಾಯಿಸುತ್ತಾನೆ ಎಂದು ಕುಚೇಷ್ಟೆ ...ಡುವವರೇನೂ ಕಮ್ಮಿಯಿಲ್ಲ.

...ಆದರೆ ಪ್ರಶ್ನೆಯೆಂದರೆ ಬೇಕಾಬಿಟ್ಟಿ ದುಡ್ಡಿರುವವರು ಶೋಕಿಗೆ ಬಿದ್ದವರೆಲ್ಲ ...ಜು-ಮಸ್ತಿ ಮಾಡುವುದನ್ನು ಬಿಟ್ಟು ಯಾವುದೋ ಕುದುರೆ, ಯಾವುದೋ ...ಯ ನಾಯಿ, ಇನ್ನೆಂಥದೋ ಮರಿ ಆನೆಯನ್ನು ಹುಡುಕಿ ವ್ಯರ್ಥ ...ರ್ಚು ಮಾಡುತ್ತಾರೆಯ್ಯೇ?

...ಹಸು-ಕರುಗಳಿಗೆ ಮೈತೊಳೆದು, ಹಾಲು ಮಾರುತ್ತಿದ್ದ ದರ್ಶನ್‌ರ ಪ್ರಾಣಿ ... ಇದೀಗ ವಿಲಕ್ಷಣ ರೂಪ ತಾಳಿದೆ. ಸಾರಥಿ ಚಿತ್ರಕ್ಕೆಂದು ಬಳಸಿದ್ದು ...ನ್ ಸಾಕಿದ್ದೇ ಕುದುರೆಯಂತೆ. ಮೈಸೂರಿನಿಂದ ಟಿ. ನರಸಿಪುರ ರಸ್ತೆಗೆ ಬಂದರೆ ಹತ್ತೆಕರೆಗೂ ಮೀರಿ ವಿಸ್ತಾರದ ತೂಗುದೀಪ ಫಾರಂ ಸದ್ಯ ಮಿನಿ ಮೃಗಾಲಯದಂತಿದೆ.

ಆಳೆತ್ತರದ ಎಮು ಹಕ್ಕಿ, 20 ಕ್ಕೂ ಅಧಿಕ ಬಾತುಕೋಳಿಗಳು, ನಲವತ್ತು ಕುದುರೆಗಳು, ಅಷ್ಟೇ ಸಂಖ್ಯೆಯ ಹಸುಗಳು, ಥರೇವಾರಿಯ ಬೀದಿನಾಯಿಗಳು, ಚಿತ್ರವಿಚಿತ್ರ ಪಕ್ಷಿಗಳೆಲ್ಲಕ್ಕೂ ತೂಗುದೀಪ ಫಾರಂ ಆಸರೆ ನೀಡಿದೆ. ಈ ಥರದ ಪ್ರಾಣಿ ಪಕ್ಷಿಗಳನ್ನು ಪೋಷಿಸಲು ಪ್ರತಿ ತಿಂಗಳೂ ಕನಿಷ್ಠ 2 ಲಕ್ಷ ರೂಪಾಯಿ ದರ್ಶನ್ ಕೈ ಬಿಡುತ್ತದೆ. 20 ಕ್ಕೂ ಅಧಿಕ ಕೆಲಸಗಾರರಿದ್ದಾರೆ. ಪ್ರತಿ ತಿಂಗಳೂ ಅವರಿಗೆ ಸಂಬಳ ಕೊಟ್ಟು ಇರಲು ಮನೆಯನ್ನೂ ಮಾಡಿಕೊಟ್ಟ ದರ್ಶನ್ ಇತ್ತೀಚೆಗೆ ಮೈಸೂರು ಮೃಗಾಲಯದಲ್ಲಿದ್ದ 'ಮಾದೇಶ' ಎಂಬ ಮರಿಯಾನೆಯನ್ನೂ ದತ್ತು ಪಡೆದಿದ್ದಾನೆ. ಅಂದರೆ ಪ್ರತಿನಿತ್ಯದ ಅದರ ಆಹಾರ, ಆರೈಕೆ, ಚಿಕಿತ್ಸೆ, ಔಷಧಿ ಎಲ್ಲವನ್ನೂ ದರ್ಶನ್ ನೋಡಿಕೊಳ್ಳಬೇಕು.

ಇದಲ್ಲದೆ ಇತ್ತೀಚೆಗೆ ದರ್ಶನ್‌ನ ಪ್ರಾಣಿಪ್ರೀತಿ ಸುದ್ದಿಯಾಗಿದ್ದು ದಕ್ಷಿಣ ಅಮೆರಿಕದಿಂದ ಆಮದು ಮಾಡಿಕೊಂಡ **cotton-top tamarin** ಜಾತಿಯ ವಿಶಿಷ್ಟ ಕೋತಿಯೊಂದರ ಕಾರಣಕ್ಕೆ. ಅದೊಂದು ಅಪರೂಪದ ಕೀಟಭಕ್ಷಕ ಕಿರುಗೋತಿ. ಮರಿಯಾಗಿದ್ದಾಗ ಹೆಗ್ಗಣದಂತೆ ಕಾಣುತ್ತದೆ. ಬೆಳೆದಂತೆಲ್ಲ ತಲೆಸುತ್ತ ಪೊದೆಗೂದಲು ಹೊಮ್ಮುತ್ತದೆ. ಕತ್ತಿನ ಭಾಗವೂ ಸಿಂಹದಂತೆ ರೋಮಾವೃತ್ತಗೊಂಡು ಯಕ್ಷಗಾನದ ಯಕ್ಷ ಪಾತ್ರಧಾರಿಯಂತೆ ಕಾಣುವ ದಕ್ಷಿಣ ಅಮೇರಿಕದ ಸೇಗ್ವಿನಸ್ ಪ್ರಭೇದದ ಈ ವಿಶಿಷ್ಟ ಕಪಿಯ ಬೆಲೆಯೇ ಐದು ಲಕ್ಷ ರೂಪಾಯಿ!

ಸದ್ಯ ವಿಶ್ವಾದ್ಯಂತ ಈ ಜಾತಿಯ ಕೋತಿಗಳೆಂದು ಬದುಕಿರುವುದು ಕೇವಲ ಆರು ಸಾವಿರ ಮಾತ್ರ. ಅವುಗಳ ಪೈಕಿ ಒಂದು ಈಗ ದರ್ಶನ್ ಮಗ ವಿನೀಶ್‌ನ ಸಂಗಾತಿಯಂತೆ. ದರ್ಶನ್‌ನ ಈ ಥರದ ಪ್ರಾಣಿ ಪ್ರೇಮ ಅನೇಕರಿಗೆ ದುಡ್ಡಿನ ದರ್ಪದಂತೆ ಕಾಣಬಹುದು. ಬೇಕಾಬಿಟ್ಟಿ ರೊಕ್ಕದ ಶೋಕಿತನ ಎನಿಸಲೂಬಹುದು. ಆದರೆ ಯಾವ ಶೋಕಿಲಾಲ ತಾನೇ ಈ ರೀತಿ ಪ್ರಾಣಿ-ಪಕ್ಷಿಗಳನ್ನು ಕಲೆಹಾಕಿ ಒಟ್ಟಿಗೆ ತಿನ್ನಿಸುತ್ತಾನೆ?

...ನ್ನಾಗಿ ತಲಾ ಒಂದೊಂದು ಕೋಟಿಯಂತೆ ಕೊಟ್ಟರೂ ...ಂದೇ ಐದು ಕೋಟಿಯನ್ನು ಮೀರುತ್ತದೆ.

...ಈ ರೀತಿ ಡಿಸ್ಟ್ರಿಬ್ಯೂಟರ್‌ಗಳು ದರ್ಶನ್ ಚಿತ್ರಕ್ಕಾಗಿ ...ರೆಯುವುದಕ್ಕೂ ಕಾರಣವಿದೆ. ಬಿಡುಗಡೆಗೂ ಮುನ್ನ ...ನ್‌ನ ಯಾವುದೇ ಚಿತ್ರದ ಜಾಹೀರಾತು ಪತ್ರಿಕೆಗಳಲ್ಲಿ ...ಗೊಂಡರೂ ಅದರಲ್ಲಿ ಹಂಚಿಕೆದಾರನ ಹೆಸರಿತ್ತೆಂದರೆ ...ಭಾಗದ ಥಿಯೇಟರ್‌ಗಳವರೆಲ್ಲ ಲಕ್ಷಗಳ ಲೆಕ್ಕದಲ್ಲಿ ...ಂಗಡ ಕೊಡಲು ಸಾಲುಗಟ್ಟಿ ನಿಲ್ಲುತ್ತಾರೆ. ...ಚಿಕೆದಾರನಾದವನು ಮುಂಗಡವಾಗಿ ಕೊಟ್ಟು ದುಡ್ಡು ...ದ ರಿಲೀಜಿಗೂ ಮೊದಲೇ ಬಂದು ...ತ್ತದೆಯಾದ್ದರಿಂದ ದರ್ಶನ್ ಚಿತ್ರಗಳ ಹಂಚಿಕೆಗಾಗಿ ...ಯುವ ಪೈಪೋಟಿ ಕೂಡ ಕೋಟಿ ಕೋಟಿ ಲಾಭದ ...ದೇಶದಿಂದಲೇ ನಡೆಯುತ್ತದೆ.

...ದರ್ಶನ್‌ನ ಲೇಟೆಸ್ಟ್ ಚಿತ್ರ 'ಬುಲ್‌ಬುಲ್'ನ ...ಗಡೆಯಾದ ಮೊದಲ ವಾರದ ವಾಲ್‌ಪೋಸ್ಟರಿನಲ್ಲಿ



...ಸ್ ಆಫ್ ಬಾಕ್ಸ್ ಆಫೀಸ್' ಎಂಬ ಸಬ್‌ಟೈಟಲ್ ... ಕಂಡ ಕೆಲ ಗಾಂಧಿನಗರದ ಅಬ್ಬೇಪಾರಿಗಳು ಗೇಲಿ ...ದ್ದೂ ಉಂಟು. ಆದರೆ ಗಾಂಧಿನಗರದ ಹಂಚಿಕೆದಾರರ ...ರ ಡಿಸಿಆರ್ ಅಂದರೆ ಡೈಲಿ ಕಲೆಕ್ಷನ್ ರಿಪೋರ್ಟ್ ...ತವೇ ಇದಕ್ಕೆ ಮಾನದಂಡ. ಆ ಪ್ರಕಾರವೇ ...ವುದಾದರೆ; ಸಾರಥಿ, ಚಿಂಗಾರಿ, ಸಂಗೊಳ್ಳಿ ರಾಯಣ್ಣ ...ತ್ತು ಬುಲ್‌ಬುಲ್‌ಗಳ ಕಲೆಕ್ಷನ್ ರಿಪೋರ್ಟ್ ...ಶಯವಾಗಿ ದರ್ಶನ್ ಕನ್ನಡದ ಬಾಕ್ಸ್ ಆಫೀಸ್ ...ಲೆಯೆಂಬುದನ್ನು ಸಾಬೀತು ಪಡಿಸುತ್ತದೆ.

...ಗಾಲ್ಸಿಗೆ ಎರಡು ವರ್ಷಗಳ ಹಿಂದೆ ದರ್ಶನ್ ...ಭವಿಸಿದ ರಾದ್ಧಾಂತ, ಅವಮಾನ, ಅಪನಿಂದೆಗಳಿಗೆ ...ಲಿಸಿದರೆ ಈ ಹೊತ್ತಿಗಾತ ಹೆಚ್ಚೂ ಕಮ್ಮಿ ...ನಾಶವಾಗಬೇಕಿತ್ತು. ಮೊದಲು ಹೀರೋಯಿನ್ ... ಜೊತೆ ಸಂಬಂಧದ ಆರೋಪ. ಆ ನಂತರ ...ಯನ್ನು ಅಮಾನುಷವಾಗಿ ಥಳಿಸಿದ ಪ್ರಕರಣ. ಈ ... ವಿಜಯನಗರ ಪೊಲೀಸ್ ಠಾಣೆಯಲ್ಲಿ ಪತ್ನಿಯೇ ...ಲು ಮಾಡಿದ ದೂರು. ಪೊಲೀಸರಿಂದ ಬಂಧಿತನಾಗಿ ... ಹಾರಾದ ಪ್ರಸಂಗ. ಜಾಮೀನು ಕೋರಿ ಕೋರ್ಟಿಗೆ ...ದರೆ ನ್ಯಾಯಾಧೀಶರಿಂದಲೇ ಛೀಮಾರಿ ಗಿಟ್ಟಿದ ...ಗ್ಗೆ ಇದೆಲ್ಲವೂ ದರ್ಶನ್‌ನಂಥ ನಟನೊಬ್ಬನ ಪಾಲಿಗೆ ...ಚಿತ್ರರಂಗದ ವೃತ್ತಿ ಅಗಿ ನಿರಾಶಾದಾಯಕ ...ಗಿರಬೇಕಿತ್ತು.

ಪ್ರಾಯಶ್ಚಿತ್ತ

ಆದರೆ ಇದೆಲ್ಲದರಿಂದಲೂ ದರ್ಶನ್ ಹೊರಬಂದು ಕಾಲ ಕ್ರಮೇಣ ತನ್ನನ್ನು ತಾನೇ ತಿದ್ದಿಕೊಂಡಿದ್ದಿದೆಯಲ್ಲ ಅದು ಆತನ ಇವತ್ತಿನ ಯಶಸ್ಸಿನ ಮೂಲ ಕಾರಣಗಳಲ್ಲೊಂದು. 'ದುನಿಯಾ' ವಿಜಿಯಂತೆ ತಾನು ಪತ್ನಿಯನ್ನು ಥಳಿಸಿದ್ದನ್ನು ಆತ ಸಮರ್ಥಿಸಿಕೊಳ್ಳಲಿಲ್ಲ. ಜೈಲಿಂದ ಹೊರಬಂದಿದ್ದೇ 'ಸಾರಥಿ' ಚಿತ್ರದ ಯಶಸ್ಸಿನ ಕುರಿತಂತೆ ರಾಜ್ಯಾದ್ಯಂತ ಪ್ರವಾಸಕ್ಕೆಂದು ಹೋದವನು ತನ್ನ ಯಾತ್ರೆಗೆ ಕೊಟ್ಟ ಹೆಸರು 'ವಿಜಯ ಯಾತ್ರೆ' ಎಂದಾದರೂ ಅದರ ಅಸಲೀ ಉದ್ದೇಶವಿದ್ದದ್ದು ತಾನು ಮಾಡಿದ ತಪ್ಪಿಗೆ ಸಾರ್ವಜನಿಕವಾಗಿ ಕ್ಷಮೆ ಯಾಚಿಸುವುದು!

ರಾಜ್ಯದ ಎಲ್ಲಾ ಪ್ರಮುಖ ನಗರಗಳಲ್ಲಿ 'ಸಾರಥಿ' ಯಶಸ್ಸಿನ ಕುರಿತಂತೆ ವಿಜಯ ಯಾತ್ರೆ ನಡೆಯಿತಾದರೂ ಅದರ ಸಭೆಗಳಿಗೆ ನೆರೆದ ಅಭಿಮಾನಿಗಳಿಗೆ ದರ್ಶನ್‌ನ ಬೇರೆಯದೇ ವ್ಯಕ್ತಿತ್ವದ ಪರಿಚಯವಾಗಿತ್ತು. "ನಾನು ತಪ್ಪು ಮಾಡಿದ್ದೇನೆ ನಿಜ. ಆದರೆ ನನ್ನ ತಪ್ಪುಗಳನ್ನೆಲ್ಲಾ ಮನ್ನಿಸಿದ ನಿಮ್ಮ ಪಾದಕ್ಕೆ ನಾನು ಯಾವತ್ತಿಗೂ ಚಿರಋಣಿ. ನಾನು ಪತ್ನಿಯ ಮೇಲೆ ಕ್ರೌರ್ಯ ನಡೆಸಬಾರದಿತ್ತು. ಯಾವುದೋ ಕೆಟ್ಟ ಗಳಿಗೆಯಲ್ಲಾದ ಆ ಪ್ರಮಾದಕ್ಕೆ ಈಗಾಗಲೇ ನಾನು ನನ್ನ ಪತ್ನಿಯ ಕ್ಷಮೆ ಯಾಚಿಸಿದ್ದೇನೆ. ಈಗ ನಿಮ್ಮೆಲ್ಲರಲ್ಲೂ ನನ್ನನ್ನು ಕ್ಷಮಿಸುವಂತೆ ಕೈ ಮುಗಿದು ಬೇಡಿಕೊಳ್ಳುತ್ತೇನೆ. ನನ್ನ ತಪ್ಪುಗಳನ್ನು ಕ್ಷಮಿಸಿದ ನಿಮಗೆ ಕೊನೆತನಕ ಋಣಿಯಾಗಿರುತ್ತೇನೆ..!"

ದರ್ಶನ್ ಜೈಲಿಂದ ಬಂದು ರಾಜ್ಯಾದ್ಯಂತ ಪ್ರಮುಖ ನಗರಗಳಲ್ಲಿ ಅಭಿಮಾನಿಗಳನ್ನುದ್ದೇಶಿಸಿ ಮಾಡಿದ ಕ್ಷಮಾಯಾಚನೆಯೊಂದೇ ಆತನ ಪಾಲಿಗೆ ಪುನರ್‌ಜನ್ಮವಾಗಿತ್ತು. 'ಸಾರಥಿ' ಅಭೂತಪೂರ್ವ ಯಶಸ್ಸು ಗಳಿಸಿತ್ತು. ಮಾಡಿದ ತಪ್ಪಿಗೆ ಪಟ್ಟ ಪ್ರಾಯಶ್ಚಿತ್ತ ಮತ್ತು ಆ ನಂತರ ತನ್ನನ್ನು ತಾನೇ ತಿದ್ದಿಕೊಂಡ ರೀತಿಯಿಂದಾಗಿ ದರ್ಶನ್ ಮತ್ತಷ್ಟು ಎತ್ತರಕ್ಕೆ ಬೆಳೆದಿದ್ದ. ವಿಶೇಷವಾಗಿ ಮಹಿಳೆಯರ ಮನಸ್ಸನ್ನೂ ಗೆದ್ದಿದ್ದ.

ಒಂದು ಮೂಲದ ಪ್ರಕಾರ ದರ್ಶನ್‌ನ ಲೇಟೆಸ್ಟ್ ಕಾಲ್‌ಶೀಟ್ ಮೌಲ್ಯ 6.15 ಕೋಟಿ ಮುಟ್ಟಿದೆ. ಸುರೇಶ್‌ಗೌಡ ಮತ್ತು ಶ್ರೀನಿವಾಸ್‌ಮೂರ್ತಿ ಜಂಟಿಯಾಗಿ ನಿರ್ಮಿಸುತ್ತಿರುವ 'ಬೃಂದಾವನ'ಕ್ಕೆಂದು ದರ್ಶನ್ ಆರು ಕೋಟಿ ಮೀರಿದ ಸಂಭಾವನೆ ಪಡೆಯುವ ಮೂಲಕ ಪುನೀತ್ ಮತ್ತು ಸುದೀಪ್ ಇಬ್ಬರನ್ನೂ ಹಿಂದಿಕ್ಕಿದ್ದಾರೆ. ಬೃಂದಾವನದ ನಂತರ ನಿರ್ಮಾಣವಾಗುವ 'ಅಂಬರೀಷ್' ಚಿತ್ರದ ಟಿವಿ ರೈಟ್ಸ್ ಒಂದೇ ಏಳು ಕೋಟಿಗೆ ವ್ಯಾಪಾರವಾಗುವ ನಿರೀಕ್ಷೆಯಿದೆ.

ಗೆಳೆಯರಿಗಾಗಿ ಪ್ರೊಡಕ್ಷನ್

ಇದೆಲ್ಲದರ ಹಿನ್ನೆಲೆಯಲ್ಲಿ ದರ್ಶನ್ ಮೈಸೂರಿನ ಯಾವುದೋ ಸ್ಟಾರ್ ಹೋಟೆಲೊಂದನ್ನು ಖರೀದಿಸಿದ್ದಾರೆಂದೂ, ಬೆಂಗಳೂರಿನ ಜೆ.ಪಿ.ನಗರದಲ್ಲೊಂದು ಹೊಸ ಬಂಗಲೆ ಖರೀದಿಸಿದ್ದಾರೆಂದೂ ಸುದ್ದಿ ಹಬ್ಬಿದೆ. ಇಂಥ ಸುದ್ದಿಗಳ ಸತ್ಯಾಸತ್ಯತೆ ಏನೇ ಇರಲಿ ದರ್ಶನ್ ತನ್ನ ಸಂಪಾದನೆಯ ಬಹುಪಾಲನ್ನು ತೂಗುದೀಪ ಪ್ರೊಡಕ್ಷನ್ನಿಗೆಂದು ಬಂಡವಾಳ ಹೂಡುವ ಮೂಲಕ ಕೆರೆಯ ನೀರನು ಕೆರೆಗೆ ಚೆಲ್ಲಿದಂತೆ ಕನ್ನಡ ಚಿತ್ರರಂಗದ ವ್ಯವಹಾರಕ್ಕೆ ಹಾಕುತ್ತಿದ್ದಾರೆ.

ಇದೆಲ್ಲವನ್ನೂ ಮೀರಿದ ದರ್ಶನ್‌ನ ಮಾನವೀಯತೆಯೆಂದರೆ ಯಾರ್‍ಯಾರು ತನ್ನ ಚಿತ್ರಕ್ಕಾಗಿ ಬೆವರು ಹರಿಸಿದ್ದಾರೋ ಅಂಥವರ್‍ಯಾರನ್ನೂ ಕೈಬಿಡದೇ ಪೊರೆದದ್ದು. ಸದ್ಯ ಬುಲ್‌ಬುಲ್ ಸೂಪರ್ ಹಿಟ್ಟಾಗಿದೆಯಾದರೂ ಅದರ ಲಾಭವನ್ನು ತನ್ನ ಐವರು ಸ್ನೇಹಿತರಿಗೆ ದರ್ಶನ್ ಹಂಚುತ್ತಿದ್ದಾನೆ. ಸಂಗೀತ ನಿರ್ದೇಶಕ ಹರಿಕೃಷ್ಣ, ಕ್ಯಾಮರಾಮನ್ ಕೃಷ್ಣಕುಮಾರ್, ನಿರ್ದೇಶಕ ಎಂ.ಡಿ. ಶ್ರೀಧರ್, ಗೀತ ರಚನೆಕಾರ ಕವಿರಾಜ್ ಮತ್ತು ದರ್ಶನ್ ತಮ್ಮ ದಿನಕರ್ ಸೇರಿಕೊಂಡಂತೆ ಐವರಲ್ಲೂ 'ಬುಲ್‌ಬುಲ್' ಚಿತ್ರದ ಲಾಭ ಹಂಚಿಕೆಯಾಗಲಿದೆ.



ಇದು 'ಬುಲ್‌ಬುಲ್' ಚಿತ್ರದ ಕತೆಯಾದರೆ ತೂಗುದೀಪ ಪ್ರೊಡಕ್ಷನ್ ವತಿಯಿಂದ ನಿರ್ಮಾಣವಾಗುತ್ತಿರುವ ಮುಂಬರುವ ಚಿತ್ರದ ಗಳಿಕೆಯನ್ನು ದರ್ಶನ್ ಇದೇ ರೀತಿ ತನ್ನ ಉಳಿದೈದು ಸ್ನೇಹಿತರಿಗಾಗಿ ಮೀಸಲಿಟ್ಟಿದ್ದಾರೆ. ಯೂನಿಟ್ ಮ್ಯಾನೇಜರ್ ವೀನಸ್ ಶ್ರೀನಿವಾಸ್, ಚಿತ್ರ ಸಾಹಿತಿ ಚಿಂತನ್, ತನ್ನ ಆ ಕಾಲದ ಗೆಳೆಯ ಅಣಜಿ ನಾಗರಾಜ್ ಮತ್ತು ಹಂಚಿಕೆದಾರ ಮಲ್ಲಿಕಾರ್ಜುನ್‌ಗೆಂದು ಮತ್ತೊಂದು ಸಿನಿಮಾ ನಿರ್ಮಿಸುತ್ತಿರುವ ದರ್ಶನ್‌ನ ಔದಾರ್ಯದ ಬಗ್ಗೆ ಇಡೀ ಗಾಂಧಿನಗರವೇ ತಲೆದೂಗುತ್ತಿವೆ. ಅಂದ ಹಾಗೆ ಈ ಚಿತ್ರದಲ್ಲಿ ದರ್ಶನ್ ನಟಿಸುತ್ತಿಲ್ಲ. ಬದಲಿಗೆ ದಿಗಂತ್ ಎಂಬ ಮತ್ತೊಬ್ಬ ನಟನಿಗೆ ದರ್ಶನ್ ಅವಕಾಶ ಕಲ್ಪಿಸಿದ್ದಾರೆ.

ಮಾಡಿದ ತಪ್ಪಿಗಾಗಿ ಬಹಿರಂಗವಾಗಿ ಕ್ಷಮೆಯಾಚಿಸುವ, ತನ್ನ ತಪ್ಪನ್ನು ತಿದ್ದಿಕೊಳ್ಳುತ್ತೇನೆಂದು ಪ್ರಾಮಾಣಿಕವಾಗಿ ಆತ್ಮವಿಮರ್ಶೆಗಿಳಿಯುವ, ನಾನೇ ನಂಬರ್ ಒನ್ ಎಂಬ ದುರಹಂಕಾರಕ್ಕೆ ಬೀಳದ, ನಂಬರ್ ಆಟದ ಪೈಪೋಟಿಯಲ್ಲಿ ತಾನಿಲ್ಲವೇ ಇಲ್ಲ ಎಂದು ವಿನೀತನಾಗಿ ಹೇಳುವ, ತನ್ನ ಹಿಂದಿನ ಬಹುತೇಕ ಚಿತ್ರಗಳಿಗಾಗಿ ಶ್ರಮಿಸಿದವರಿಗಾಗೇ ಹೊಸ ಹೊಸ ಚಿತ್ರ ನಿರ್ಮಿಸಿ ಲಾಭದ ಪಾಲು ಹಂಚುವ, ತನ್ನದೇ ತೂಗುದೀಪ ಪ್ರೊಡಕ್ಷನ್ ಕಂಪನಿಯಿದ್ದರೂ ಅದರ ಮೂಲಕ ನೆನಪಿರಲಿ ಪ್ರೇಮ್ ಮತ್ತು ದಿಗಂತ್‌ರಂಥ ನಟರನ್ನು ಹಾಕಿಕೊಂಡು ಚಿತ್ರ ನಿರ್ಮಿಸುವ, ತನ್ನ ಪ್ರತಿಸ್ಪರ್ಧಿಗಳಿಗೂ ತನ್ನದೇ ಬಂಡವಾಳದಲ್ಲಿ ಅವಕಾಶ ಕಲ್ಪಿಸುವ ದರ್ಶನ್ ಸದ್ಯ ಗಾಂಧಿನಗರದ ಮಟ್ಟಿಗೆ ಕೋಟಿ ಖಮಾಯಿಯ ಅದೃಷ್ಟ ಧೂತ!

ಹಾಗಿಲ್ಲದಿದ್ದರೆ ದರ್ಶನ್ ಜೊತೆ ನಂಬರ್ ಒನ್ ಪಟ್ಟಕ್ಕೆ ಪೈಪೋಟಿಗಿಳಿದಿದ್ದ ಸುದೀಪ್ ಖುದ್ದಾಗಿ 'ಬುಲ್‌ಬುಲ್ ಯಶಸ್ಸಿನ ನಂತರ ನನ್ನ ಗೆಳೆಯ ದರ್ಶನ್ನೇ ಕನ್ನಡದ ನಂಬರ್ ಒನ್...!' ಎಂದು ಹೇಳಿಕೆ ನೀಡುತ್ತಿರಲಿಲ್ಲ.

● ರಾ.ಸೋಮನಾಥ್

ಬೃಂದಾವನ 40 ಕೋಟಿ ಗಳಿಸಬಹುದಾದರೆ ಅಂಬರೀಶ 50 ಕೋಟಿ ದುಡಿಯದಿರುತ್ತಾ?

ಈಗ ಕಾಲ್‌ಶೀಟ್‌ಗಾಗಿ ಕ್ಯೂ ನಿಂತ ನಿರ್ಮಾಪಕರೆಲ್ಲರಿಗೂ ದರ್ಶನ್ ಓಕೆ ಎಂದುಬಿಟ್ಟರೆ 2015 ರ ತನಕ ಬೇರೊಬ್ಬರಿಗೆ ಕಾಲ್‌ಶೀಟ್ ಸಿಗದಷ್ಟು ಬೇಡಿಕೆ ದರ್ಶನ್‌ಗಿದೆ. ಮುಂಬರುವ 'ಬೃಂದಾವನ' ಆನಂತರದ 'ವಿರಾಟ್' ನಂತರ ತನ್ನದೇ ತೂಗದೀಪ ಪ್ರೊಡಕ್ಷನ್ಸ್ ಮೂಲಕ ದರ್ಶನ್ ನಿರ್ಮಿಸುತ್ತಿರುವ ಮಹತ್ವಾಕಾಂಕ್ಷೆಯ ಚಿತ್ರ 'ಅಂಬರೀಶ' ಟೀವಿ ರೈಟ್ಸ್ ಒಂದರಿಂದಲೇ ಕನಿಷ್ಠ ಏಳು ಕೋಟಿ ಹುಟ್ಟುತ್ತದೆ. ಕನಿಷ್ಠ 150 ಚಿತ್ರಮಂದಿರಗಳಲ್ಲಿ ಬಿಡುಗಡೆಗೊಂಡರೂ ಮೊದಲ ವಾರದ ಗಳಿಕೆಯೊಂದೇ 10 ಕೋಟಿ ಮುಟ್ಟಬಹುದು. ಮುಂಬರುವ 'ಬೃಂದಾವನ' ಒಂದೇ 40 ಕೋಟಿ ಗಳಿಸುತ್ತದೆಯೆಂಬ ನಿರೀಕ್ಷೆಯಿರುವಾಗ ಇನ್ನು ಅಂಬರೀಶ 50 ಕೋಟಿ ಗಳಿಸದಿರುತ್ತಾ?

ಈ ಥರದ ಲೆಕ್ಕಾಚಾರ ಸದ್ಯ ಗಾಂಧಿನಗರದಲ್ಲಿ ಕೇಳಿಬರುತ್ತಿರುವುದು ಅನೇಕರಿಗೆ ಉತ್ಪ್ರೇಕ್ಷೆಯೆನಿಸಬಹುದು. ಆದರೆ ಇದೇ ಟ್ರೆಂಡ್ ಮುಂದುವರಿದರೆ?

ಇದೆಲ್ಲ ಲೆಕ್ಕಾಚಾರವೇ ಇರಬೇಕು ದರ್ಶನ್ ಹೊರಗಿನವರ್‍ಯಾರಿಗೂ ಕಾಲ್‌ಶೀಟ್ ಕೊಡದೇ ತನ್ನದೇ ಸ್ವಂತ ನಿರ್ಮಾಣದ ಚಿತ್ರ ನಿರ್ಮಿಸುತ್ತಿರುವುದು. ತನ್ನ ಹೆಸರಲ್ಲಿ ಬೇರೆ ಯಾರೋ ದುಡ್ಡು ಬಾಚುತ್ತಾರೆಂದರೆ ಅದನ್ನು [illegible] ಮಾಡಿಕೊಂಡರಾಯ್ತು ಎಂಬ ಪಾಲಿಸಿಯನ್ನೇ ದರ್ಶನ್ ಅಳವಡಿಸಿಕೊಂಡಿರಬಹುದೆ?

ಮಲೈ ಮಹದೇಶ್ವರ ಬೆಟ್ಟ: ಹಣ ಕದ್ದ ಜಯವಿಭವ ಸ್ವಾಮಿ


ವಾರ್ಷಿಕ 40 ಕೋಟಿ ಆದಾಯ ನೀಡುವ ಮಲೆ ಮಹದೇಶ್ವರ ಬೆಟ್ಟದ ದೇವಸ್ಥಾನದಲ್ಲಿ ಅಭಿವೃದ್ಧಿ ಕಾಮಗಾರಿ ಹೆಸರಲ್ಲಿ 45 ಕೋಟಿಗೂ ಹೆಚ್ಚು ಹಣ ದುರುಪಯೋಗವಾಗಿದೆ.

ಈ ಹಣ ದುರುಪಯೋಗದ ಮೂಲ ಪುರುಷ ದೇವಾಲಯದ ವಿಶೇಷಾಧಿಕಾರಿಯಾಗಿದ್ದ ಜಯವಿಭವಸ್ವಾಮಿ ಎಂಬ ಮಹಾನ್ ಕಳ್ಳ. ಬಿಜೆಪಿ ಸರ್ಕಾರದ ಅವಧಿಯಲ್ಲಿ ಅಂದಿನ ಸಿ.ಎಂ. ಯಡಿಯೂರಪ್ಪ ಹಾಗೂ ವಸತಿ ಸಚಿವ ವಿ.ಸೋಮಣ್ಣನ ಕೃಪಾ ಕಟಾಕ್ಷದೊಂದಿಗೆ ವಿಶೇಷಾಧಿಕಾರಿ ಹುದ್ದೆ ಸೃಷ್ಟಿಸಿಕೊಂಡು ಬಂದ ಈತ ಒಂದೊಂದಾಗಿಯೇ ಕಾಮಗಾರಿಗಳನ್ನು ಕೈಗೆತ್ತಿಕೊಂಡು ದೇವಾಲಯದ ಹಾಗೂ ಭಕ್ತರ ಹಣವನ್ನು ನುಂಗಿ ಹಾಕಿದ್ದಾನೆ.

ಈತನಿಗೆ ಬೆಂಗಾವಲಾಗಿ ನಿಂತಿದ್ದ ಬಿಜೆಪಿ ಸರ್ಕಾರ ಪತನವಾಗಿ ಇದೀಗ ರಾಜ್ಯದಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬರುತ್ತಿದ್ದಂತೆ ಈತನ ಹಗರಣಗಳು ಗರಿ ಬಿಚ್ಚಿಕೊಳ್ಳುತ್ತಿದೆ. ಅಷ್ಟೆ ಅಲ್ಲದೇ, ಈತನ ಹಣ ಕಬಳಿಕೆ ವಿಚಾರ ಸಿ.ಎಂ.ಸಿದ್ದರಾಮಯ್ಯ ಅವರ ಗಮನಕ್ಕೂ ಬಂದ ಕಾರಣ ಸರ್ಕಾರದ ಕಂದಾಯ ಇಲಾಖೆಯ ಕಾರ್ಯದರ್ಶಿ ಅವರ ಹಂತದಲ್ಲಿ ಹಗರಣದ ತನಿಖೆ ಆರಂಭವಾಗಿದೆ. ಇಷ್ಟರಲ್ಲಿಯೇ ಜಯವಿಭವಸ್ವಾಮಿ ಕಂಬಿ ಎಣಿಸುವ ಎಲ್ಲ ಲಕ್ಷಣಗಳೂ ಗೋಚರಿಸುತ್ತಿವೆ. ಈ ನಡುವೆ ಹಿಂದೆ ಚಾಮರಾಜನಗರ ಜಿಲ್ಲಾಧಿಕಾರಿಯಾಗಿದ್ದ ಕರಪ್ಟ್ ಗಿರಾಕಿ ಅಮರ್ ನಾರಾಯಣ್ ಕೂಡ ಹಗರಣದಲ್ಲಿ ಶಾಮೀಲಾಗಿರುವ ಗುಮಾನಿ ಮೂಡಿದೆ.

ಹಿಂದೆಲ್ಲ ಮಹದೇಶ್ವರ ಬೆಟ್ಟದ ದೇವಾಲಯಕ್ಕೆ ಧರ್ಮದರ್ಶಿ ಮಂಡಳಿಯನ್ನು ನೇಮಕ ಮಾಡಲಾಗುತ್ತಿತ್ತು. ಆದರೆ, 2009-10ನೇ ಸಾಲಿನಿಂದೀಚೆಗೆ ಸರ್ಕಾರ ದೇವಾಲಯಕ್ಕೆ ಧರ್ಮದರ್ಶಿ ಮಂಡಳಿ ನೇಮಕ ಮಾಡದ ಕಾರಣ ದೇವಾಲಯದ ಅಭಿವೃದ್ಧಿ ಕಾಮಗಾರಿಗಳು ನೆನೆಗುದ್ದಿಗೆ ಬಿದ್ದಿದ್ದವು. ಆಗ ಅಂಗವಿಕಲರ ಕಲ್ಯಾಣ ಇಲಾಖೆಯ ನಿರ್ದೇಶಕನಾಗಿದ್ದ ಜಯವಿಭವಸ್ವಾಮಿ ಈ ಅವಕಾಶ ಬಳಸಿಕೊಂಡು ಬಿಜೆಪಿ ಸರ್ಕಾರದ ಅವಧಿಯಲ್ಲಿ ಮೊದಲಿಗೆ ಆಡಳಿತಾಧಿಕಾರಿ ಎಂಬ ಹೊಸ ಹುದ್ದೆಯನ್ನು ಸೃಷ್ಟಿಸಿಕೊಂಡು ಇಲ್ಲಿಗೆ ಬಂದ. ಅದಕ್ಕೂ ಮುನ್ನ ಒಮ್ಮೆ ದೇವಾಲಯದ ಆಡಳಿತದಲ್ಲಿ ವರ್ಷಗಳ ಕಾಲ ಸರ್ವಾಧಿಕಾರ ತೋರಿಸಿ ದೇಗುಲದ ಸಿಬ್ಬಂದಿಗಳಾದಿಯಾಗಿ ಭಕ್ತರಿಂದ ಛೀಮಾರಿ ಹಾಕಿಸಿಕೊಂಡು ಹೊರದೂಡಲ್ಪಟ್ಟಿದ್ದ. ಅಂತಹ ಜಯವಿಭವಸ್ವಾಮಿ ಮತ್ತೆ ದೇವಾಲಯಕ್ಕೆ ವಿಶೇಷಾಧಿಕಾರಿ ಎಂಬ ಹುದ್ದೆಯ ಹೆಸರಿನಲ್ಲಿ ಬಂದು ಜಾಂಡ ಹೂಡಿದನಲ್ಲದೇ, ಅಭಿವೃದ್ಧಿ ಕಾಮಗಾರಿ ಹೆಸರಿನಲ್ಲಿ 40 ಕೋಟಿಗೂ ಹೆಚ್ಚು ಹಣ ದುರುಪಯೋಗ ಮಾಡಿದ್ದಾನೆ.






ಜಯವಿಭವಸ್ವಾಮಿ



ಎಂ.ಸಾವಿತ್ರಿ



ಅಮರ್‌ನಾರಾಯಣ್



ಸತೀಶ್‌ಬಾಬು

ಧಾರ್ಮಿಕ ದತ್ತಿ ಹಾಗೂ ಮುಜರಾಯಿ ಇಲಾಖೆಯ ಕಮಿಷನರ್ ನಂದಕುಮಾರ್ ಹಾಗೂ ಅಂದಿನ ಚಾಮರಾಜನಗರದ ಡಿಸಿ ಅಮರ್ ನಾರಾಯಣ್ ಅವರುಗಳಿಗೆ ಒಂದಷ್ಟು ಕಮಿಷನ್ ನೀಡಿ ದೂರದ ತುಮಕೂರು ಮತ್ತು ಚಿತ್ರದುರ್ಗದ ನಿರ್ಮಿತಿ ಕೇಂದ್ರಕ್ಕೆ ಕಾಮಗಾರಿಗಳ ಟೆಂಡರ್ ನೀಡುತ್ತಾ ಎಲ್ಲಾ ಹಣ ದುರುಪಯೋಗ ಮಾಡಲಾಗಿದೆ.

ಕಾಮಗಾರಿಗಳ ಹಗರಣ ನೋಡುತ್ತಾ ಹೋದರೆ, ಅದೊಂದು ಭೂ ಚಕ್ರದಂತೆ ಅಲ್ಲಲ್ಲಿಯೇ ಗಿರಕಿ ಹೊಡೆಯುತ್ತಿದೆ. ದೇವಾಲಯದ ಎರಡನೇ ಚಿಕ್ಕ ಕಲ್ಯಾಣಿ ಹೂಳೆತ್ತಿ ಅದರ ಸುತ್ತಲೂ ಚೈನ್ ಲಿಂಕ್ ಕಾಮಗಾರಿ ಮಾಡಲು 31 ಲಕ್ಷಕ್ಕೂ ಅಧಿಕ ಹಣ ಖರ್ಚು ಮಾಡಿರುವುದಾಗಿ ಲೆಕ್ಕ ತೋರಿಸಿದ್ದಾನೆ. ರಸ್ತೆ ಬದಿ ವ್ಯಾಪಾರಿಗಳ ಶೆಡ್ ನಿರ್ಮಾಣಕ್ಕೆ 89 ಲಕ್ಷ ಖರ್ಚು ಮಾಡಿದ್ದಾನೆ. ಆದರೆ ಹೂ, ಹಣ್ಣು ವ್ಯಾಪಾರಿಗಳು ಕೂರಲು ಸಾಧ್ಯವಾಗದ 3 ಅಡಿ ಚೌಕಕಾರದ ಅಂಗಡಿಗಳನ್ನು ನಿರ್ಮಾಣ ಮಾಡಿದ್ದು ಅದು ಪ್ರಯೋಜನಕ್ಕೆ ಬಾರದೆ ನಿಂತಿದೆ.

ಉಳಿದಂತೆ ದೇಗುಲದ ಚಿಕ್ಕ ಕೆರೆ ಮುಂದಿನ ಹಾಲಿ ಚರಂಡಿಯಲ್ಲಿ ಪೈಪ್ ಲೈನ್ ಕಾಮಗಾರಿ ನಡೆಸಲು ಎರಡು ಹಂತದಲ್ಲಿ ಒಟ್ಟು 55 ಲಕ್ಷ ಹಣ ಗುಳುಂ ಮಾಡಲಾಗಿದೆ. ಈ ಕಾಮಗಾರಿಗೆ 20 ಲಕ್ಷ ರೂ. ಮೇಲೆ ಖರ್ಚಾಗುವಂತಿಲ್ಲ. ಅಂತೆಯೇ ದೇವಾಲಯದ ರಾಜ ಗೋಪುರದ ಮುಂದಿನ ಜೋಡಿ ರಸ್ತೆಯಲ್ಲಿ ರಸ್ತೆ ವಿಭಜಕ ನಿರ್ಮಾಣದ ಹೆಸರಿನಲ್ಲಿ 35 ಲಕ್ಷ ಕಬಳಿಸಲಾಗಿದೆ. ಇದೆಲ್ಲದಕ್ಕಿಂತ ಹೆಚ್ಚಾಗಿ ದೇವಾಲಯಕ್ಕೆ ಸೋಲಾರ್ ಪ್ಲಾಂಟ್ ಅಳವಡಿಕೆಗೆ 281 ಲಕ್ಷ ಖರ್ಚಾಗಿರುವುದಾಗಿ ಲೆಕ್ಕ ತೋರಿಸಲಾಗಿದೆ. ಎರಡನೇ ಕೊಳಕ್ಕೆ ಗ್ರಾನೈಟ್ ಕಂಬ ಮತ್ತು ಬೆಂಚುಗಳ ನಿರ್ಮಾಣಕ್ಕೆ 36 ಲಕ್ಷ, ಕಲ್ಯಾಣಿಯ ಸುತ್ತ ಹಸಿರೀಕರಣ ಕಾಮಗಾರಿಗೆ 21 ಲಕ್ಷ ಖರ್ಚು ತೋರಿಸಲಾಗಿದೆ. ಎಂಟು ಲಕ್ಷದಲ್ಲಿ ಮುಗಿಸಬಹುದಾದ ಗಿರಿದರ್ಶಿನಿ ವಸತಿ ಗೃಹದ ನಾಲ್ಕು ಕೊಠಡಿಗಳ ನವೀಕರಣಕ್ಕೆ 25 ಲಕ್ಷ ಖರ್ಚು ತೋರಿಸಲಾಗಿದೆ.

ಹೊಸದಾಗಿ ನಿರ್ಮಿಸಿರುವ 76 ಕೊಠಡಿಗಳ ವಸತಿ ಗೃಹದಲ್ಲಿ ಲ್ಯಾಂಡ್ ಸ್ಕೇಪಿಂಗ್, ಉದ್ಯಾನವನ ಹೆಸರಿನಲ್ಲಿ 16 ಲಕ್ಷಗಳನ್ನು ಗುಳುಂ ಮಾಡಲಾಗಿದೆ. ಈ ಕಾಮಗಾರಿಗೆ ಕೇವಲ 4 ಲಕ್ಷ ರೂ.ಗಳು ಮಾತ್ರ ಸಾಕಾಗುತ್ತಿತ್ತು ಎಂಬುದು ಮೇಲ್ನೋಟಕ್ಕೆ ಕಾಣುವಂತಿದೆ. ಅಂತೆಯೇ ಕಲ್ಯಾಣಿ-1 ರಲ್ಲಿ ಪುನಶ್ಚೇತನ ಕಾಮಗಾರಿ ಹೆಸರಿನಲ್ಲಿ 20 ಲಕ್ಷದಲ್ಲಿ ಪೂರ್ಣಗೊಳಿಸಬಹುದಾದ ಕಾಮಗಾರಿಯನ್ನು 59 ಲಕ್ಷ ರೂಗಳ ಅಂದಾಜು ಪಟ್ಟಿ ತೋರಿಸಿ ಹಣ ದುರುಪಯೋಗ ಮಾಡಲಾಗಿದೆ. ಈಚೀಗೆ ಸುರಿದ ಮಳೆಗೆ ಈ ಕಾಮಗಾರಿಯ ತಡೆಗೋಡೆ ಕುಸಿದಿದ್ದು ಕಾಮಗಾರಿಯೇ ಕಳಪೆಯೆಂಬುದನ್ನು ಎತ್ತಿ ತೋರಿದೆ.

ಒಟ್ಟಾರೆ ಹೇಳುವುದಾದರೆ ದೇವಾಲಯದ ಹಣವನ್ನು ತನ್ನಿಷ್ಟ ಬಂದಹಾಗೆ ಕಾಮಗಾರಿ ಹೆಸರಿನಲ್ಲಿ ಓವರ್ ಎಸ್ಟಿಮೆಂಟ್ ಮಾಡಿ ಹಂತ ಹಂತವಾಗಿ ಹಣವನ್ನು ಕಬಳಿಸಿರುವ ಜಯವಿಭವ ಸ್ವಾಮಿ ತನ್ನ ಈ ಎಲ್ಲ ಹಗರಣ ಬಯಲಿಗೆ ಬಾರದಿರಲಿ ಎಂದು ಚಾಮರಾಜನಗರದಲ್ಲಿನ ನಿರ್ಮಿತಿ ಕೇಂದ್ರಕ್ಕೆ ಕಾಮಗಾರಿಗಳನ್ನು ನೀಡುವ ಬದಲಿಗೆ, ದೂರದ ತುಮಕೂರು ಹಾಗು ಚಿತ್ರದುರ್ಗದ ನಿರ್ಮಿತಿ ಕೇಂದ್ರಕ್ಕೆ ಕಾಮಗಾರಿಗಳನ್ನು ನೀಡುತ್ತಾ ಬಂದಿದ್ದ. ಹಾಗೆ ನೋಡುವುದಾದರೆ, ಮಹದೇಶ್ವರ ಬೆಟ್ಟದಲ್ಲಿಯೇ ಪಿಡಬ್ಲ್ಯೂಡಿ ವಿಭಾಗೀಯ ಕಚೇರಿಯಿದ್ದು, ಇಲ್ಲಿರುವ ಓರ್ವ ಎಇಇ, ನಾಲ್ಕಾರು ಜೆಇಗಳಿಗೆ ಕೆಲಸವಿಲ್ಲದೆ ಕೂತಿರುತ್ತಾರೆ. ಇಡೀ ದೇವಾಲಯದ ಅಧೀನ ಅಧಿಕಾರಿಗಳನ್ನು ಬೆದರಿಸಿಕೊಂಡು ಅಂಥ ದರ್ಬಾರು ಮಾಡಿದ ಜಯವಿಭವಸ್ವಾಮಿಯನ್ನು ಸರ್ಕಾರ ಸೂಕ್ತ ರೀತಿಯಲ್ಲಿ ತನಿಖೆ ಮಾಡಿದ್ದೇ ಆದಲ್ಲಿ ಈತನ ಸ್ತ್ರೀಲೋಲತನಗಳು ಬಯಲಾಗಲಿವೆಯಲ್ಲದೇ, ಇಲ್ಲಿಯವರೆಗೆ ನುಂಗಿರುವ ಭಕ್ತರ ಹಣವನ್ನು ಜೈಲಿನಲ್ಲಿಯೇ ಕುಳಿತು ವಾಪಸ್ ಕಟ್ಟಬೇಕಾಗುತ್ತದೆ.

ರಿಲೀವ್ ಆದ ಸ್ವಾಮಿ

ದೇವಾಲಯದ ಅಭಿವೃದ್ಧಿ ಹೆಸರಲ್ಲಿ ಮಾಡಿರುವ ಕೋಟಿಗಟ್ಟಲೆ ಹಣ ದುರುಪಯೋಗದ ಸುಳಿಯಲ್ಲಿರುವ ಜಯವಿಭವಸ್ವಾಮಿಯನ್ನು ಜುಲೈ 5 ರಂದು ಸರ್ಕಾರ ದೇವಾಲಯದ ವಿಶೇಷಾಧಿಕಾರಿ ಹುದ್ದೆಯಿಂದ ಕೆಳಗಿಳಿಸಿ ಸದರಿ ಹುದ್ದೆಯನ್ನು ಚಾಮರಾಜನಗರ ಜಿಲ್ಲಾಧಿಕಾರಿ ಎಂ.ವಿ.ಸಾವಿತ್ರಿ ಹೆಗಲಿಗೇರಿಸಿದೆ. ಇದನ್ನೆಲ್ಲ ಸೂಕ್ಷ್ಮವಾಗಿ ಗಮನಿಸಿದರೆ, ಜಯವಿಭವಸ್ವಾಮಿ ಮಾಡಿರುವ ಕಾಮಗಾರಿ
ಅವ್ಯವಹಾರದ ತನಿಖೆ ಚುರುಕುಗೊಂಡಿದೆ ಎಂದಾಯಿತು
ಉಳಿದಂತೆ ದೇವಾಯಯದ ಇಓ ಹೆಚ್ಚುವರಿ ಹುದ್ದೆಯಿಂ
ಸಹಾಯಕ ಕಾರ್ಯನಿರ್ವಾಹಕ ಅಧಿಕಾರಿ ರಾಮಯ
ಅವರನ್ನು ದೂರವಿರಿಸಿ ಸದ್ಯಕ್ಕೆ ಕೊಳ್ಳೇಗಾಲ ಎಸಿ ಸತೀಶ
ಬಾಬು ಅವರಿಗೆ ಆ ಕೆಲಸ ವಹಿಸಲಾಗಿದೆ. ಈ ಎಲ
ಬದಲಾವಣೆಯಿಂದ ಮಹದೇಶ್ವರ ದೇಗುಲದ ಖಜಾ
ಸೂರಿಕೆಗೆ ಬ್ರೇಕ್ ಹಾಕಿದಂತಾಗಿದೆ. ಕೇವಲ ಇಷ್ಟ
ಪ್ರಕರಣದ ಆರೋಪಿ ಜಯವಿಭವಸ್ವಾಮಿಯನ
ಬಿಟ್ಟುಬಿಡದೆ ಆತನ ವಿರುದ್ಧದ ತನಿಖೆ ಕಾಯ್ದಿರಿ
ಕರ್ತವ್ಯದಿಂದ ಅಮಾನತುಗೊಳಿಸಬೇಕಾಗಿದೆ. ಆಗ ಮಾ
ಮಾಡಿರುವ ತಪ್ಪಿಗೆ ತಕ್ಕ ಶಿಕ್ಷೆ ನೀಡಿದಂತಾಗುತ್ತದೆ.

● ವರದಿಗಾ



ಶಾಸಕನಿಗೆ ಸ್ಕೆಚ್

ಮಹದೇಶ್ವರ ಬೆಟ್ಟದ ದೇವಾಲಯದಲ್ಲಿ ಬಂದು ಕು
ಬಳಿಕ ಜಯವಿಭವಸ್ವಾಮಿ ತನ್ನ ರಾಜಕೀಯ ಗುರು
ಸೋಮಣ್ಣನ ಕಿವಿ ಕಚ್ಚಲು ಶುರು ಮಾಡಿದ್ದ. ದೇವಾಲಯ
ವ್ಯಾಪ್ತಿಗೆ ಬರುವ ಹನೂರು ವಿಧಾನಸಭಾ ಕ್ಷೇತ್ರದ ಶಾ
ಸ್ಥಾನಕ್ಕೆ 2013ನೇ ಚುನಾವಣೆಯಲ್ಲಿ ಸೋಮಣ್ಣ ಸ್ಪರ್ಧಿ
ಗೆದ್ದರೆ ದೇವಾಲಯದ ಕೋಟಿಗಟ್ಟಲೆ ಹಣ
ವ್ಯವಹಾರದೊಂದಿಗೆ ತಮಿಳುನಾಡಿನ ಗಡಿ ಭಾಗವಾ
ಹನೂರು ಪ್ರದೇಶದಲ್ಲಿ ಗಣಿಗಾರಿಕೆಯನ
ಆರಂಭಿಸಬಹುದೆಂದು ಮಾಸ್ಟರ್ ಪ್ಲಾನ್ ನೀಡಿದ್ದ. ಇದ
ಮನಸ್ಸಿನಲ್ಲಿ ಹಚ್ಚಿಕೊಂಡ ವಿ.ಸೋಮಣ್ಣ ತನ್ನ ವ
ಖಾತೆಯೊಂದಿಗೆ ಹಿಂದುಳಿದ ಜಿಲ್ಲೆ ಚಾಮರಾಜನಗರ
ಉಸ್ತುವಾರಿ ಸಚಿವ ಹುದ್ದೆಯನ್ನು ಗಿಟ್ಟಿಸಿಕೊಂ
ತಿಂಗಳಿಗೆರಡು ಬಾರಿ ಬೆಟ್ಟಕ್ಕೆ ಯಾತ್ರ ಮಾಡಿದರು. ಅಲ್ಲದ
ದೇವಾಲಯದ ಅಭಿವೃದ್ಧಿಗೆ ಪ್ರಾಧಿಕಾರ ಘೋಷ
ಸೇರಿದಂತೆ ಹನೂರು ಪಟ್ಟಣವನ್ನು ತಾಲೂ
ಕೇಂದ್ರವನ್ನಾಗಿಸಿ ಕ್ಯಾಬಿನೆಟ್ ಸಭೆಯ ಅನುಮೋದನೆಯ
ಕೊಡಿಸಿದ್ದರು. ಇಷ್ಟೆಲ್ಲ ಸರ್ಕಸ್ಸಿನ ನಡುವೆ ಬಿಜೆ
ಪಕ್ಷದಲ್ಲಿದ್ದುಕೊಂಡೇ ಅತ್ತ ಯಡಿಯೂರಪ್ಪನ ಕೆಜೆ
ಪಕ್ಷದಿಂದ ಟಿಕೆಟ್ ಅಥವಾ ಕಾಂಗ್ರೆಸ್ ಪಕ್ಷದಿಂದ ಹಾ
ಹನೂರು ಶಾಸಕ ಆರ್. ನರೇಂದ್ರ ಅವರಿಗೆ ಟಿಕೆ
ತಪ್ಪಿಸಿ, ಎಂ.ಎಲ್.ಎ. ಟಿಕೆಟ್ ಗಿಟ್ಟಿಸಿಕೊಳ್ಳಲು ಹರಸಾ
ಪಟ್ಟಿದ್ದು ಇದೀಗ ಇತಿಹಾಸ. ಕೊನೆಗೆ ಎಲ್ಲಾ ಪ್ಲಾ
ಉಲ್ಟಾ ಪಲ್ಟಾವಾದ ಬಳಿಕ ವಿ.ಸೋಮಣ್ಣ ಬೆಂಗಳೂರಿನ
ಬಿಜೆಪಿಯಿಂದ ನಿಂತು ಸೋತರು. ಹನೂರು ಕ್ಷೇತ್ರದ
ಮತ್ತೆ ಕಾಂಗ್ರೆಸ್ ಶಾಸಕ ಆರ್. ನರೇಂದ್ರ ಸ್ಪರ್ಧಿಸಿ ಗೆ
ಬಂದರು. ತನ್ನ ಬುಡಕ್ಕೆ ಸ್ಕೆಚ್ ಹಾಕಿದ್ದ ಜಯವಿಭವಸ್ವಾ
ಹಗರಣಗಳನ್ನು ಶಾಸಕ ನರೇಂದ್ರ ಈಗ ಮುಖ್ಯಮಂ
ಸಿದ್ದರಾಮಯ್ಯ ಅವರ ಕೈಗೆ ಕೊಟ್ಟಿದ್ದಾರೆ.

ಮಟ್ಕಾ ಜೂಜಾಟದ ನಿಯಂತ್ರಣವಾಗಲಿ



ಗುಟ್ಕಾ ನಿಷೇಧದ ಬಗ್ಗೆ ಹಳ್ಳಿಗಳಲ್ಲಿ ಒಳ್ಳೆಯ ಅಭಿಪ್ರಾಯ ವ್ಯಕ್ತವಾಗಿದೆ. ಎಪ್ಪತ್ತರಷ್ಟು ಗ್ರಾಮೀಣ ಭಾಗದ ಯುವಕರಲ್ಲಿ ಗುಟ್ಕಾ ಚಟವಿತ್ತು. ಾಗಿ ನೂರಾರು ಯುವಕರು ಗುಟ್ಕಾಕ್ಕೆ ಹಣ ವ್ಯಯಮಾಡುವ ಜತೆ ೋಗ್ಯವನ್ನು ಹಣಕ್ಕಿಡುತ್ತಿದ್ದರು. ಗುಟ್ಕಾ ನಿಷೇಧ ಮುಖ್ಯವಾಗಿ ಹಳ್ಳಿಗಾಡಿನ ದಲ್ಲಿ ಹೆಚ್ಚು ಉಪಯುಕ್ತವಾಗಿದೆ. ಅಂತೆಯೇ ಗ್ರಾಮೀಣ ಭಾಗವನ್ನು ುತ್ತಿರುವ ಹಲವು ಸಮಸ್ಯೆಗಳಲ್ಲಿ ಮಟ್ಕಾ ಜೂಜಾಟವೂ ಪ್ರಮುಖವಾದುದು. ನ್ನು ಓಸಿ (ಓಪನ್, ಕ್ಲೋಜ್) ಎಂದೂ ಕರೆಯುತ್ತಾರೆ. ಇದೊಂದು ಾನುಬಾಹಿರ ಕಳ್ಳಾಟ. ಆದರೆ ಇದು ತನ್ನ ಬೇರುಗಳನ್ನು ಕರ್ನಾಟಕದಾದ್ಯಂತ ಹಳ್ಳಿಗಳಲ್ಲಿ ವಿಸ್ತರಿಸಿಕೊಂಡಿದೆ. ಕೆಲವೆಡೆ ವ್ಯವಸ್ಥೆಯೂ ಈ ಆಟದೊಂದಿಗೆ ಂದಾಣಿಕೆ ಮಾಡಿಕೊಂಡಿದೆ. ಈ ಹೊಂದಾಣಿಕೆ ಸಾಧ್ಯವಿಲ್ಲದಿದ್ದರೆ ಇಂದು ಟಕದಲ್ಲಿ ಈ ಆಟ ಇಷ್ಟು ದೊಡ್ಡ ಜಾಲವನ್ನು ವಿಸ್ತರಿಸಿಕೊಳ್ಳಲು ವಿರಲಿಲ್ಲ.

ಸಾಮಾನ್ಯವಾಗಿ ಪತ್ರಿಕೆಗಳ ಪ್ರಾದೇಶಿಕ ಸುದ್ದಿಗಳಲ್ಲಿ ಮಟ್ಕಾ ಬುಕ್ಕಿಗಳ ಧನ, ಮಟ್ಕಾ ಏಜಂಟರ ಗಡಿಪಾರು, ಅವ್ಯಾಹತವಾಗಿ ನಡೆಯುತ್ತಿರುವ ಟ್ಕಾ ಜೂಜಾಟ ಮುಂತಾದ ವರದಿಗಳು ಇದ್ದೇ ಇರುತ್ತವೆ. ಈ ವರದಿಗಳ ತರತೆಯೇ ಈ ಆಟದ ಇರುವನ್ನು ಮತ್ತೆ ಮತ್ತೆ ನೆನಪಿಸುತ್ತದೆ. ನಾನು ಬಾಲ್ಯದಿಂದಲೂ ಈ ವಿಷಯವನ್ನು ಪತ್ರಿಕೆಗಳಲ್ಲಿ ಓದುತ್ತಾ ಬಂದಿದ್ದೇನೆ. ಸಂಪೂರ್ಣ ನಿಯಂತ್ರಣವಾದ ವರದಿಯನ್ನು ಮಾತ್ರ ನೋಡಲಾಗಿಲ್ಲ.

ಈಗ ಮಳೆಯಾಗಿದೆ. ರೈತರು ಬಿತ್ತನೆ ಕೆಲಸದಲ್ಲಿ ನಿರತರಾಗಿದ್ದಾರೆ. ಬಿತ್ತನೆಗಾಗಿ ಮಂತ ವರ್ತಕರಲ್ಲಿ, ಬ್ಯಾಂಕಿನಲ್ಲಿ ಸಾಲ ಪಡೆಯುತ್ತಾರೆ. ಕೆಲವು ಮಟ್ಕಾ ಾರ ರೈತರು ಈ ಮೊತ್ತದ ಅರ್ಧದಷ್ಟು ಹಣವನ್ನು ಓಸಿ ನಂಬರಿಗೆ ತ್ತಾರೆ. ಅಂತೆಯೇ ಬೆಳೆಯನ್ನು ಮಾರುಕಟ್ಟೆಗೆ ಬಿಟ್ಟಾಗಲೂ ಮಾರಿದ ದಲ್ಲಿ ಮಟ್ಕಾ ಆಡುವುದಿದೆ. ಒಟ್ಟಾರೆ ಕೃಷಿ ಆದಾಯದ ಒಂದಷ್ಟು ಈ ಆಟದ ಪಾಲಾಗುವುದಂತೂ ನಿರಂತರವಾಗಿ ನಡೆದೇ ಇದೆ.

ಈ ಆಟ ಇಂದು ನಿನ್ನೆಯದಲ್ಲ, ಕನಿಷ್ಟ ಐವತ್ತು ವರ್ಷಗಳ ಇತಿಹಾಸವಿದೆ. ವಲೆಲ್ಲಾ ಒಂದು ಪೈಸೆ ಕಟ್ಟಿ ಏಳು ಪೈಸೆ ಪಡೆಯುತ್ತಿದ್ದ ಕಥೆಗಳನ್ನು ಹಳ್ಳಿಗರಿಂದ ಸಂಗ್ರಹಿಸಿದ್ದೇನೆ. ಇಂದು ಗ್ರಾಮೀಣ ಭಾಗದಲ್ಲಿ ಮಟ್ಕಾ ಕುರಿತಾದ ದೊಡ್ಡ ಜಾನಪದವೇ ಹುಟ್ಟಿದೆ. ನಂಬರುಗಳನ್ನು ಹಿಡಿಯುವ ನೂರಾರು ಕಥೆಗಳು, ನೂರಾರು ನಂಬಿಕೆ ಆಚರಣೆಗಳು ಚಾಲ್ತಿಯಲ್ಲಿವೆ. ಮಟ್ಕಾ ನಂಬರ್ ಹೇಳುವ ಸ್ವಾಮೀಜಿಗಳಿದ್ದಾರೆ. ನಂಬರ್ ಕುರುಹು ಕೊಡುವ ದೇವರುಗಳಿವೆ, ದೇವಸ್ಥಾನಗಳಿವೆ. ರಾತ್ರಿಯ ಕನಸನ್ನು ನಂಬರಾಗಿ ಬದಲಾಯಿಸುವ ಕನಸುಗಾರರು, ಕನಸು ತಜ್ಞರೂ ಇದ್ದಾರೆ. ಡಾ.ರಾಜಕುಮಾರ್ ಅವರ ಸಿನೆಮಾಗಳಲ್ಲಿ ಈ ಜೂಜಾಟ ಸಾಮಾಜಿಕ ಸಮಸ್ಯೆಯಾಗಿ ಚಿತ್ರಣವಾದದ್ದೂ ಇದೆ. ಪ್ರತಿ ನಗರ ಹಳ್ಳಿಗಳಲ್ಲಿ ಮಟ್ಕಾ ನಂಬರ್ ಬರೆಯುವ ಸಾವಿರಾರು ಅನಧಿಕೃತ ಏಜಂಟರು, ಈ ಏಜಂಟರಿಂದ ಹಣ ಸಂಗ್ರಹಿಸುವ ಮಧ್ಯವರ್ತಿಗಳು ಪ್ರತಿದಿನ ಲಕ್ಷಾಂತರ ರೂ.ಗಳನ್ನು ಸಂಗ್ರಹಿಸುವ ಕೆಲಸದಲ್ಲಿ ನಿರತರಾಗಿರುತ್ತಾರೆ.

ಜನ ನೂರು ಅಂಕಿಗಳಲ್ಲಿ ಒಂದು ಅಂಕಿಗೆ ಹಣ ಕಟ್ಟುತ್ತಾರೆ. ಮಟ್ಕಾದ ಅಗೋಚರ ಕಂಪನಿ ಈ ನೂರು ನಂಬರಿನಲ್ಲಿ ಒಂದು ನಂಬರನ್ನು ಆಯ್ಕೆಮಾಡುತ್ತದೆ. ಆಗ 99 ಅಂಕಿಗೆ ಕಟ್ಟಿದ ಹಣ ಕಂಪನಿಯ ಪಾಲಾಗಿ ಒಂದು ಅಂಕಿಗೆ ಕಟ್ಟಿದ ಹಣ ಒಂದು ರೂ.ಗೆ ಎಂಬತ್ತು ರೂಗಳಂತೆ ಭಟವಾಡೆಯಾಗುತ್ತದೆ. ಇದರಲ್ಲಿ ಭಾಗವಹಿಸುವ ಆಟಗಾರ ಒಂದು ರೂಪಾಯಿಂದ ಆರಂಭಿಸಬಹುದು. ಈ ಆಟ ಬಾಂಬೆ ಮೂಲದ್ದು, ಕತ್ರಿಲಾಲ ಎಂಬ ವ್ಯಕ್ತಿ ಈ ನಂಬರನ್ನು ಹೊಡೆಯುತ್ತಾನೆ ಎನ್ನುವ ಕಥೆಗಳಿದ್ದವು. ಹಾಗಾಗಿ ಈ ಆಟಕ್ಕೆ ಬಾಂಬೆ ಆಟವೆಂತಲೂ ಹೆಸರಿದೆ. ಈಗ ಈ ಸ್ಥಳ ಹಾಗೂ ವ್ಯಕ್ತಿಯಲ್ಲಿ ಬದಲಾವಣೆಗಳು ಸಂಭವಿಸಿರಬಹುದು.

ಇದು ಪರಸ್ಪರ ಕಳ್ಳ ನಂಬಿಕೆಯ ಮೇಲೆ ನಡೆಯುವ ಆಟ. ಮೊದಲಾದರೆ ಚೀಟಿಯಲ್ಲಿ ಬರೆಯುತ್ತಿದ್ದರು. ಆದರೆ ಇಂದು ಮೊಬೈಲಿಗೆ ಒಂದು ಮೆಸೇಜ್ ಕಳಿಸಿ ನಂಬರ್ ಬರೆಸಿಕೊಳ್ಳುವಷ್ಟು ಈ ಆಟ ಆಧುನಿಕವಾಗಿದೆ. ಮೊಬೈಲ್ ಮಟ್ಕಾದ ಬುಕ್ಕಿ ಮತ್ತು ಆಟಗಾರರ ಕೊಂಡಿಯಾಗಿ ಬಳಕೆಯಾಗುತ್ತಿದೆ. ಈ ಆಟಕ್ಕೆ ಹಣ ಕಟ್ಟಿ ಹೊಲ ಮನೆ ಕಳೆದುಕೊಂಡವರ ನೂರಾರು ದುರಂತ ಕಥೆಗಳು ಜನಪದ ಕಥೆಗಳಂತೆ ಜನರಲ್ಲಿ ಪ್ರಚಲಿತದಲ್ಲಿವೆ. ಓಸಿ ಆಟದ ಮೋಸದ ಬಗ್ಗೆ ಜನಪದ ಗೀತೆಗಳು ಹುಟ್ಟಿಕೊಂಡಿವೆ. ಈ ಆಟದಲ್ಲಿ ಗ್ರಾಮೀಣ ಹೆಣ್ಣುಮಕ್ಕಳೂ ಹಿಂದೆ ಬಿದ್ದಿಲ್ಲ. ಇದು ಗ್ರಾಮೀಣ ಭಾಗದ ದುಡಿಮೆಯ ದೊಡ್ಡ ಮೊತ್ತವನ್ನು ಹಗಲು ದರೋಡೆ ಮಾಡುವ ಒಂದು ಮಾಯಕಾರ ಆಟದಂತೆ ಕಾಣುತ್ತದೆ.

ಕೆಲವು ಕಡೆ ನಿಷ್ಠಾವಂತ ಪೋಲಿಸ್ ಅಧಿಕಾರಿಗಳು, ಜಿಲ್ಲಾಧಿಕಾರಿಗಳು ಇರುವಲ್ಲಿ ತಾತ್ಕಾಲಿಕವಾಗಿ ಈ ಆಟದ ನಿಲುಗಡೆಯಾಗುವುದೂ ಇದೆ. ಆದರೆ ಮತ್ತೆ ಗುಟ್ಟಾಗಿ ಆಟ ಚಿಗುರೊಡೆಯುತ್ತದೆ. ವ್ಯವಸ್ಥೆ ರಾಜಿಯಾದ ಕಡೆಗಳಲ್ಲಿ ಇದು ಕಾನೂನುಬದ್ಧ ಆಟದಂತೆಯೇ ನಡೆಯುತ್ತದೆ. ಈ ಜೂಜಾಟವನ್ನು ಕರ್ನಾಟಕದಿಂದ ಕಿತ್ತೊಗೆಯುವಂತಹ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳುವುದು ಅವಶ್ಯವಾಗಿದೆ. ಇದರ ಹಿಂದೆ ಒಂದು ವ್ಯವಸ್ಥಿತ ಜಾಲವಿದ್ದಂತಿದೆ. ಇದು ಕೋಟ್ಯಾಂತರ ರೂಪಾಯಿಗಳ ವ್ಯವಹಾರ ಕುದುರಿಸುತ್ತದೆ. ಇದರಲ್ಲಿ ಪಾಲು ಪಡೆವ ಸರಕಾರಿ ಅಧಿಕಾರಿಗಳೂ, ರಾಜಕಾರಣಿಗಳೂ ಇದ್ದಂತಿದೆ. ಈ ಬಗ್ಗೆ ಈಗಿನ ಸರಕಾರ ಗಂಭೀರವಾಗಿ ಪರಿಗಣಿಸಬೇಕಾಗಿದೆ.

ಗುಟ್ಕಾ ನಿಷೇಧ ಮಾಡಿದ ಸರಕಾರ ಮಟ್ಕಾ ನಿಯಂತ್ರಣ ಮಾಡುವಲ್ಲಿಯೂ ಚಿಂತಿಸಬೇಕಿದೆ. ಸಾಧ್ಯವಾದರೆ ಇದರ ಬೇರುಗಳನ್ನು ಶೋಧಿಸಲು ಸಿಬಿಐಗೆ ವಹಿಸುವ ಅಗತ್ಯವಿದೆ. ಬಹುಶಃ ಈ ನೆಲೆಯಲ್ಲಿ ಸರಕಾರ ಗಮನಹರಿಸಿದ್ದೇ ಆದರೆ, ಇದು ಗ್ರಾಮೀಣ ಭಾಗದ ಜನತೆಗೆ ದೊಡ್ಡ ಉಪಕಾರ ಮಾಡಿದಂತಾಗುತ್ತದೆ. ಹೀಗಾಗಿ ಮಾನ್ಯ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಅವರು ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಬೇಕಾಗಿ ವಿನಂತಿ.

● ಅರುಣ್ ಜೋಳದಕೂಡ್ಲಿಗಿ

1 ▶ 3

ಜಾತಿ ವ್ಯವಸ್ಥೆಗೆ ಸಾವು...

ಆಕೆ ನೋವನ್ನು ಅನುಭವಿಸುತ್ತಿದ್ದದ್ದು ಅವನಿಗೆ ಗೊತ್ತಿತ್ತು, ಆಕೆಯ ಬಿಡುವಿಗೆಂದು ಕೇರಂ ಬೋರ್ಡ್, ಚೆಸ್ ಬೋರ್ಡ್ ಮತ್ತು ಒಂದು ಕಂಪ್ಯೂಟರ್ ಅನ್ನೂ ತಂದಿಟ್ಟಿದ್ದ. ಆಕೆ ಗಂಟೆಗಟ್ಟಲೆ ಕಾಲ ಫೋನ್‌ನಲ್ಲಿ ತನ್ನ ತಾಯಿಯೊಂದಿಗೆ ಮಾತನಾಡುತ್ತಿದ್ದಳು. ದಿವ್ಯಳ ತಾಯಿ ಕೂಡ ಒಮ್ಮೆ ಇಳವರಸನ್ ಮನೆಗೆ ಬಂದು ಮಗಳಿಗೆ ಎರಡು ಸೀರೆಗಳನ್ನು ಕೊಟ್ಟು ಹೋಗಿದ್ದಳು. ಅಂದರೆ ಇಳವರಸನ್ ಮತ್ತು ದಿವ್ಯಳ ಕುಟುಂಬಗಳು ಸಹಜ ಜೀವನಕ್ಕೆ ಹಿಂದಿರುಗಲು ಪ್ರಯತ್ನಿಸುತ್ತಿದ್ದರು.

ಆದರೆ ದುಷ್ಟ ರಾಜಕಾರಣಿಗಳು ಸುಮ್ಮನಿರಲಿಲ್ಲ, ದಿವ್ಯಳ ತಾಯಿಯ ಮೇಲೆ ಒತ್ತಡ ಹಾಕುತ್ತಲೇ ಇದ್ದರು. ಕೊನೆಗೂ ಅವರ ಒತ್ತಡಕ್ಕೆ ಮಣಿದ ತಾಯಿ ದಿವ್ಯಳಿಗೆ ಫೋನ್ ಮಾಡಿ ತನ್ನ ಆರೋಗ್ಯ ಸರಿ ಇಲ್ಲವೆಂದು, ತಾನು ಆಸ್ಪತ್ರೆ ಸೇರಿದ್ದೇನೆಂದು ಹೇಳಿ ದಿವ್ಯಳನ್ನು ತಾನಿದಲ್ಲಿಗೆ ಕರೆಸಿಕೊಂಡಳು. ತಾಯಿಯ ಬಗೆಗಿನ ಕಾಳಜಿಯಿಂದಾಗಿ ಅವತ್ತು ತರಾತುರಿಯಲ್ಲಿ ಇಳವರಸನ್‌ನ ಮನೆಯಿಂದ ಹೋದ ದಿವ್ಯ ಮತ್ತೆ ಆತನ ಮನೆಗೆ ಹಿಂದಿರುಗಲಿಲ್ಲ. ಯಾಕೆಂದರೆ ವಣ್ಣಿಯಾರ್ ಸಮುದಾಯದ ನಾಯಕರು ಆಕೆಗೆ ಮತ್ತು ಆಕೆಯ ತಾಯಿಗೆ ಜೀವ ಬೆದರಿಕೆ ಹಾಕಿದ್ದರು.

ಈ ಮಧ್ಯೆ ದಲಿತರ ವಿರುದ್ಧ ವಣ್ಣಿಯಾರ್ ಸಮುದಾಯವನ್ನು ಎತ್ತಿಕಟ್ಟಿದ್ದಕ್ಕೆ ಪಿಎಂಕೆ ಮುಖಂಡ ರಾಮದಾಸ್, ಆತನ ಪುತ್ರ ಮಾಜಿ ಕೇಂದ್ರ ಮಂತ್ರಿ ಅನ್ಬುಮನಿ ರಾಮದಾಸ್‌ನನ್ನು ಮತ್ತು ಪಿಎಂಕೆ ಪಕ್ಷದ 500ಕ್ಕೂ ಹೆಚ್ಚು ಜನರನ್ನು ಪೊಲೀಸರು ಬಂಧಿಸಿದರು. ಈ ಬಂಧನಗಳ ವಿರುದ್ಧ ಧರ್ಮಪುರಿ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಪ್ರತಿಭಟನೆಗಳು ನಡೆದು ಇಬ್ಬರು ಸಾವಿಗೀಡಾದರಲ್ಲದೆ ಸಹಸ್ರಾರು ಸಾರ್ವಜನಿಕ ವಾಹನಗಳಿಗೆ ಬೆಂಕಿಬಿತ್ತು. ಹೀಗೆ ಒಂದು ಪ್ರೇಮ ಪ್ರಕರಣ ಜಾತಿ ದ್ವೇಷವಾಗಿ ಹತ್ತಿ ಉರಿಯುತ್ತಿತ್ತು.

ಇಷ್ಟೆಲ್ಲ ರಾದ್ಧಾಂತಕ್ಕೆ ಕಾರಣವಾಗಿದ್ದ ಈ ಪ್ರಕರಣ ತಮಿಳುನಾಡಿನ ಹೈಕೋರ್ಟ್ ಮೆಟ್ಟಿಲನ್ನು ಏರಿತು. ಅಷ್ಟು ಹೊತ್ತಿಗೆ ದಿವ್ಯ ನಿತ್ರಾಣಗೊಂಡಿದ್ದಳು. ಪಿಎಂಕೆ ಸದಸ್ಯರಿಂದ ಸುತ್ತವರೆದಿದ್ದ ದಿವ್ಯಳನ್ನು ನ್ಯಾಯಾಧೀಶರು "ನೀನು ಯಾರೊಂದಿಗೆ ಇರಲು ಇಚ್ಛಿಸುತ್ತೀಯ?" ಎಂದು ಕೇಳಿದಾಗ ದಿವ್ಯ ಕಣ್ಣೀರಿಡುತ್ತಾ "ನನ್ನ ತಾಯಿ ಈಗ ಏಕಾಂಗಿ. ಆಕೆಯ ಆರೋಗ್ಯವೂ ಸರಿ ಇಲ್ಲ, ನಾನು ನನ್ನ ತಾಯಿಯೊಂದಿಗೇ ಇರುತ್ತೇನೆ" ಎಂದಳು. ಕೋರ್ಟಿನಲ್ಲೇ ಇದ್ದ ಇಳವರಸನ್ ತನ್ನೊಂದಿಗೆ ಬಾ ಎಂದು ಆಕೆಯನ್ನು ಅದೆಷ್ಟೇ ಬೇಡಿಕೊಂಡರೂ ಆಕೆ ಬಾಯಿ ಬಿಡಲಿಲ್ಲ.

ಆಕೆಯ ನಿರ್ಧಾರವನ್ನು ಕೇಳಿ ಇಳವರಸನ್ ತತ್ತರಿಸಿಹೋದ. "ದಿವ್ಯ ಮತ್ತು ಆಕೆಯ ತಾಯಿ ಕೆಟ್ಟವರಲ್ಲ, ಬದಲಾಗಿ ಅವರ ಮೇಲೆ ಜಾತಿ ರಾಜಕಾರಣಿಗಳ ಒತ್ತಡ ಇರುವುದರಿಂದ ಆಕೆ ಹೀಗೆ ಹೇಳುತ್ತಿದ್ದಾಳೆ" ಎಂದು ಇಳವರಸನ್ ಪತ್ರಕರ್ತರ ಮುಂದೆ ಹೇಳಿದ. ಆಕೆಯನ್ನು ಹಿಂದೆ ಪಡೆಯುವ ಆಶಯವನ್ನೂ ವ್ಯಕ್ತಪಡಿಸಿದ್ದ.


ಆದರೆ ತನ್ನ ಪ್ರೀತಿಗಿಂತಲೂ ಜಾತಿಯ ದ್ವೇಷ ಬಲಿಷ್ಟವಾದದ್ದು ಎಂಬುದು ಅವತ್ತು ಇಳವರಸನ್‌ಗೆ ಅರ್ಥವಾಗಿತ್ತು ಎನಿಸುತ್ತದೆ. ಯಾಕೆಂದರೆ ಕೋರ್ಟಿನಲ್ಲಿ ದಿವ್ಯ ತನ್ನ ನಿರ್ಧಾರವನ್ನು ವ್ಯಕ್ತಪಡಿಸಿದ ಮಾರನೆ ದಿನವೇ ಇಳವರಸ್‌ನ ಶವ ಧರ್ಮಪುರಿಯ ರೈಲ್ವೇ ಹಳಿ ಹತ್ತಿರ ಬಿದ್ದಿತ್ತು. ಅದು ಆತ್ಮಹತ್ಯೆಯೋ, ಕೊಲೆಯೋ ಎಂಬುದು ನ್ಯಾಯಾಲಯದ ವಿಚಾರಣೆಯಲ್ಲಿ ತೀರ್ಮಾನವಾಗಲಿದೆ...

ಅಮಾಯಕ ದಲಿತ ಯುವಕ ಇಳವರಸನ್ ವಣ್ಣಿಯಾರ್ ಜಾತಿಯ ದಿವ್ಯ ಎಂಬ ಅಸಹಾಯಕ ಹುಡುಗಿಯನ್ನು ಪ್ರೀತಿಸಿ ಮದುವೆಯಾಗಿದ್ದಕ್ಕೆ ಈಗ ತನ್ನ ಪ್ರಾಣವನ್ನೇ ಕಳೆದುಕೊಂಡಿದ್ದಾನೆ...

ಅಪಾರ 'ಜೀವನಾನುಭವಿ'ಗಳಾದ ನಮ್ಮ ರಿಕ್ಷಾ ಚಾಲಕರು ತಮ್ಮ ವಾಹನಗಳ ಹಿಂದೆ 'ಪ್ರೀತಿಗೆ ಎಂದೂ ಸಾವಿಲ್ಲ' ಎಂದು ಬರೆದುಕೊಂಡಿರುವುದನ್ನು ಕಂಡಿದ್ದೇವೆ.

ಆದರೆ ನಮ್ಮ ದೇಶದಲ್ಲಿ ಅತಿ ದೊಡ್ಡ ಸಾಮಾಜಿಕ ಸಮಸ್ಯೆಯಾದ ಜಾತಿ ಪದ್ಧತಿಗೆ ಸಾವು ಬರುವುದೆಂದು? ●

"ಎಲ್ಲಿ ಹೋದರೂ ಹೆಂಗಸರಿಗೆ ಸಿಕ್ಕಷ್ಟು ಮರ್ಯಾದೆ ಗಂಡಸರಿಗೆ ಸಿಗಲ್ವಲ್ಲಾ ಯಾಕೆ?"



ಾಂಗ್ರೆಸ್ ಅಧಿಕಾರಕ್ಕೆ ಬಂದ ತಕ್ಷಣ ಡ್ಯಾಂಗಳು ತುಂಬುತ್ತಿವೆ..!

- ಕೆಂಚಪ್ಪ, ರಾಮನಗರ

ಅಷ್ಟೊಂದು ಖುಷಿ ಪಡಬೇಡಿ, ಇದೆಲ್ಲಾ ಜಯಲಲಿತಾ ...

ಮಳೆಗಾಲ ಶುರುವಾದ್ರೂನೂ ಕನ್ನಡ ಚಿತ್ರರಂಗ ಬರಗಾಲಕ್ಕೆ ಸಿಕ್ಕಂತೆ ಕಾಣುತ್ತಿದೆ ಯಾಕೆ?

- ಸವಿತಾ, ಹೊಸದುರ್ಗ

... ಯಾವಾಗಲೂ ಹಸಿದ ಜಮೀನಿನ ಬೆಳೆ ... ಕೊಯ್ಲು ಮಾಡುವ ಪರಾವಲಂಬಿ ಕೃಷಿಕರು.

... ಯಾಕೆ ಡಿಕೆಶಿ ಪರ ಬ್ಯಾಟಿಂಗ್ ಮಾಡಿದ್ದಾರೆ?

- ... ಚಿಕ್ಕಬಳ್ಳಾಪುರ

... ರಾಜಕೀಯ.

... ಬಿದ್ರೂ ಆ ಚಿನ್ನ ಹಾಕ್ಕೊಂಡಿರೋರು ತಾಯಿ ಹಾಲು ಕನಿಷ್ಠ, ಗೋ ತಾಯಿ ಹಾಲು ಶ್ರೇಷ್ಠ ಅಂತಾರಲ್ಲ ದಿಟಾನಾ..?

- ರಾಘವ, ಚಾಮರಾಜನಗರ

ನಂಬಿದರೆ ಗಂಜಲಾನೂ ಉತ್ಕೃಷ್ಟ ಅಂತ ಹೇಳಿ ಕುಡಿಸುತ್ತಾರೆ. ಹುಷಾರ್...!

ನಂದಿ ಬ್ರಾಂಡ್ ಸಿದ್ದರಾಮಯ್ಯನವರನ್ನು ತಿವಿಯುತ್ತಿದೆಯಲ್ಲ ಯಾಕೆ?

- ನಾಗ

ಅದು ಸರ್ಕಾರವನ್ನು ಪಳಗಿಸೋ ಸರ್ಕಸ್ ಕಣಪ್ಪಾ.

ಬ್ರಹ್ಮ ಹಣೆಬರಹದ ಜೊತೆ ಪ್ರೇಮಿಯ ಹೆಸರನ್ನೂ ಬರೆದಿರ್ತಾನಂತೆ.

- ಸಂಜೀವ, ಬೆಂಗಳೂರು

ತಪ್ಪಿಸಿಕೊಳ್ಳಲು ಆಗದಿದ್ದಾಗ ಆ ರೀತಿ ನಂಬುವವರುಂಟು.

ದೇವೇಗೌಡರಂತೆಯೇ ಹೆಚ್‌ಡಿಕೆ ಜಾತಿ ರಾಜಕೀಯ ಮಾಡ್ತಾರಲ್ಲ?

- ಸುಂದರ್, ಹಾಸನ

ಜೊತೆಗೆ ಜಾತ್ಯತೀತ ಜನತಾದಳ ಅಂತಾನೂ ಹೇಳಿಕೊಳ್ತಾರೆ..!

ದೇವೇಗೌಡರ ತರಾನೇ ಪರಮೇಶ್ವರ್ ಸರ್ಕಾರಕ್ಕೆ ಪತ್ರ ಬರೀತಿದ್ದಾರಲ!

- ಸತೀಶ್, ತುಮಕೂರು



ಅದನ್ನು ಪತ್ರಿಕೆಗಳು 'ಟೆಲಿಗ್ರಾಂ' ತರ ಭಾವಿಸಿ ಪ್ರಿಂಟಿಸುತ್ತಿರುವುದು ಇನ್ನೂ ಮಜವಾಗಿದೆ.

ಎಲ್ಲಿ ಹೋದರೂ ಹೆಂಗಸರಿಗೆ ಸಿಕ್ಕಷ್ಟು ಮರ್ಯಾದೆ ಗಂಡಸರಿಗೆ ಸಿಗಲ್ವಲ್ಲಾ ಯಾಕೆ?

- ಜಿ. ವಿಶ್ವನಾಥ್, ...

ಅಸೂಯೆ ಯಾಕೆ..? ಮಾನ, ಗೌರವ, ಪುರಸ್ಕಾರ... ಮುಂತಾದ ಆಯ್ಕೆಗಳೂ ಇವೆ... ಟ್ರೈ ಮಾಡು.

ಕ್ಯಾಲೆಂಡರ್, ವಾಚು ಕಂಡು ಹಿಡಿದಿದ್ದು ಯಾರು ಗುರು?

- ಸಿದ್ದೇಶ್, ಚಿತ್ರದುರ್ಗ

ಬದುಕಿನ ಸೊಬಗು, ಕ್ಷಣಿಕತೆ ಎರಡನ್ನೂ ಬಲ್ಲಾತ.

ನಾನು ಭಾರತ ಬಿಟ್ಟು ಹೋಗುತ್ತೇನೆ... ಬಿಟ್ಟು ಬಿಡಿ.

- ದೇಶಪ್ರೇಮಿ, ಹಾವೇರಿ

ಹೊರ ಜಗತ್ತು ಇದರಷ್ಟೇ ಘೋರವಾಗಿದೆ, ತಿಳಿದುಕೋ.

ನನ್ನ ಪ್ರಕಾರ ದರ್ಶನ್ ಒಬ್ಬ ಅದ್ಭುತ ನಟ, ನೀವೇನಂತೀರಿ?

- ರಂಜಿತಾ, ಹೊಸಪೇಟೆ

ನಟನೆ ಬರುವಂತಿದಿದ್ದರೆ.

ಕನ್ನಡ ಸಾಹಿತ್ಯ ಲೋಕ ಯಾಕೊ ತಣ್ಣಗಿದೆಯಲ್ಲ?

- ಚೇತನ, ಮೈಸೂರು

ಹಾಗೇನಿಲ್ಲ, ಸಾಮೂಹಿಕವಾಗಿ 'ಸಿದ್ದರಾಮಯ್ಯ ಸ್ತುತಿ ಗೀತೆ' ರಚಿಸುವ ಕಾರ್ಯದಲ್ಲಿದ್ದಾರೆ.


ಪ್ರಶ್ನೆಗಳನ್ನು ... 9980133142 ... kannamuchale@gmail.com ...

ನುಡಿಗನ್ನಡಿ

ಸಾಹಿತಿ-ಕಲಾವಿದ-ಚಿಂತಕರ ಸಂದರ್ಶನ

● ಸಂದರ್ಶಕ: ಅರವಿಂದ ಚೊಕ್ಕಾಡಿ

ಪುಟ್ಟ ದೇಹ. ಅಳಲಿನ ವೇಗ. ಲೈಂಗಿಕ ಕಾರ್ಯಕರ್ತೆಯರನ್ನು ಅಧ್ಯಯನ ಮಾಡುತ್ತಲೋ, ಸ್ವಾತಂತ್ರ್ಯ ಹೋರಾಟದಲ್ಲಿ ಕೆಳವರ್ಗದ ಜನರು ಯಾರಿದ್ದರು ಎಂದು ಜೈಲುಗಳಿಗೆ ಹೋಗಿ ಹಳೆಯ ದಾಖಲೆಗಳನ್ನು ಹುಡುಕಾಡುತ್ತಲೋ, ಮಾಸ್ತಿ ಕಲ್ಲುಗಳನ್ನು ಸಂಶೋಧನೆ ಮಾಡುತ್ತಲೋ ಸದಾ ಓಡಾಡುತ್ತಿರುವ ಅವರಿಗೆ ಕೆಲಸವನ್ನು ಬದಲಾಯಿಸುವುದೇ ವಿಶ್ರಾಂತಿ.



ಸಂಶೋಧನೆಯೇ ಇಷ್ಟ: ಬಿ.ಎಂ. ರೋಹಿಣಿ

ಹೆಸರು ಕೇಳಿದರೆ. ಮಾಡರ್ನ್ ಕವಯತ್ರಿ ಇರಬೇಕು, ಅಂತಾರಾಷ್ಟ್ರೀಯ ಸಾಹಿತಿಗಳೊಂದಿಗೆ ಒಡನಾಟವಿರುವವರಾಗಿರಬೇಕು, ಎಲ್ಲಿಯೋ ಪ್ರೊಫೆಸರ್ ಆಗಿರಬಹುದು ಎಂದು ಕಾಲೇಜು ದಿನಗಳಲ್ಲಿ ನಮಗೆಲ್ಲ ಅನಿಸುವಂತೆ ಮಾಡಿದ ಬಿ.ಎಂ. ರೋಹಿಣಿಯವರಿಗೀಗ ವಯಸ್ಸು ತುಂಬಾ ಕಡಿಮೆ, ಅಂದರೆ ಎಪ್ಪತ್ತು. ಅವರ ಜನ್ಮ ದಿನಾಂಕ 6 ಏಪ್ರಿಲ್ 1944. ಪ್ರಾಥಮಿಕ ಶಾಲೆಯ ನಿವೃತ್ತ ಅಧ್ಯಾಪಕಿ. ಪುಟ್ಟ ದೇಹ. ಅಳಲಿನ ವೇಗ. ಲೈಂಗಿಕ ಕಾರ್ಯಕರ್ತೆಯರನ್ನು ಅಧ್ಯಯನ ಮಾಡುತ್ತಲೋ, ಸ್ವಾತಂತ್ರ್ಯ ಹೋರಾಟದಲ್ಲಿ ಕೆಳವರ್ಗದ ಜನರು ಯಾರಿದ್ದರು ಎಂದು ಜೈಲುಗಳಿಗೆ ಹೋಗಿ ಹಳೆಯ ದಾಖಲೆಗಳನ್ನು ಹುಡುಕಾಡುತ್ತಲೋ, ಮಾಸ್ತಿ ಕಲ್ಲುಗಳನ್ನು ಸಂಶೋಧನೆ ಮಾಡುತ್ತಲೋ ಸದಾ ಓಡಾಡುತ್ತಿರುವ ಅವರಿಗೆ ಕೆಲಸವನ್ನು ಬದಲಾಯಿಸುವುದೇ ವಿಶ್ರಾಂತಿ. ಇಂತಹ ಬಿ.ಎಂ. ರೋಹಿಣಿ ಅವರನ್ನು ಮಾತನಾಡಿಸಿದಾಗ....

* ಮೇಡಂ, ನೀವು ಬರೆದಿರುವ ಸಾಹಿತ್ಯ ಕೃತಿಗಳ ಬಗ್ಗೆ ಹೇಳಿ...

-ನಾನು ಕಥೆಗಳನ್ನು ಬರೆಯುವ ಮೂಲಕವೇ ಬರವಣಿಗೆ ಪ್ರಾರಂಭಿಸಿದ್ದು. 'ಕರ್ತವ್ಯ' ಎನ್ನುವುದು ನನ್ನ ಕಥಾ ಸಂಕಲನ. ಆದರೆ ಆಮೇಲೆ ನನಗೆ ವಿಮರ್ಶಾ ಸಾಹಿತ್ಯವೇ ಸೂಕ್ತ ಎನಿಸಿತು. 'ಸ್ತ್ರೀ ಸಂವೇದನೆ', 'ಸ್ತ್ರೀ ಶಿಕ್ಷಣ-ಸಂಸ್ಕೃತಿ', 'ಸ್ತ್ರೀ -ಭಿನ್ನ ಮುಖಗಳು', 'ಸಾಮಾಜಿಕ ತಲ್ಲಣಗಳು', ಸಬಿಹಾ ಅವರೊಂದಿಗೆ ನಡೆಸಿದ 'ಅವಿವಾಹಿತೆಯರ ಸಾಂಸ್ಕೃತಿಕ ಅಧ್ಯಯನ', ಶಶಿಲೇಖಾ ಅವರೊಂದಿಗೆ ನಡೆಸಿದ 'ದಕ್ಷಿಣ ಕನ್ನಡದಲ್ಲಿ ಮಾಸ್ತಿಕಲ್ಲು-ವೀರಗಲ್ಲು' ಇವು ವೈಚಾರಿಕ ಮತ್ತು ಸಂಶೋಧನಾತ್ಮಕ ಕೃತಿಗಳು. 'ಅಧ್ಯಾಪಿಕೆಯ ಅಧ್ವಾನಗಳು' ನನ್ನದೇ ಶೈಕ್ಷಣಿಕ ಅನುಭವಗಳ ಕಥನ. 'ಮಹಾಪುರುಷರ ಜೀವನ ಕಥನಗಳು', 'ಲಲಿತಾ ರೈ ಜೀವನ ಚರಿತ್ರೆ', 'ಕಲಾವಿದ ಗೋಪಾಲಕೃಷ್ಣಯ್ಯ ಜೀವನ ಚರಿತ್ರೆ' ನನ್ನ ಇತರೆ ಕೃತಿಗಳು.

* ನೀವು ಕಥೆ, ಕವಿತೆ, ಜೀವನ ಚರಿತ್ರೆ, ವಿಮರ್ಶೆ, ಸಂಶೋಧನೆ ಎಲ್ಲವನ್ನೂ ಬರೆದಿದ್ದೀರಿ. ಶೈಕ್ಷಣಿಕ ಬರಹಗಳನ್ನು ಬರೆದಿದ್ದೀರಿ. ಇವೆಲ್ಲವುಗಳಲ್ಲಿ ನಿಮ್ಮನ್ನು ನೀವು ಎಲ್ಲಿ ಗುರುತಿಸಿಕೊಳ್ಳಲು ಇಷ್ಟಪಡುತ್ತೀರಿ?

- ಸಂಶೋಧನೆಯಲ್ಲಿ.

* ಅದೇಕೆ ಹಾಗೆ?

- ನಾನು ಯಾವಾಗಲೂ ತೊಡಗಿಕೊಳ್ಳುವುದನ್ನು ಇಷ್ಟಪಡುತ್ತೇನೆ. ಉಳಿದೆಲ್ಲವುಗಳಲ್ಲಿ ಬೌದ್ಧಿಕ ತೊಡಗಿಕೊಳ್ಳುವಿಕೆ ಇದ್ದರೆ ಸಂಶೋಧನೆಯಲ್ಲಿ ಮಾತ್ರ ದೈಹಿಕ ತೊಡಗಿಕೊಳ್ಳುವಿಕೆಯೂ ಇರುತ್ತದೆ. ಸಂಶೋಧನೆ ಮಾಡುತ್ತಾ ಹೋದಾಗ ಸಿಗುವ ಅದ್ಭುತವಾದ ಅನುಭವಗಳು ನನಗೆ ಆಸಕ್ತಿದಾಯಕ.

* ಅಂತಹ ಕೆಲವು ಅನುಭವಗಳನ್ನು ಹೇಳುತ್ತೀರಾ?

- ಓ, ಖಂಡಿತಾ. ಅವಿವಾಹಿತೆಯರ ಕುರಿತ ಅಧ್ಯಯನದ ಅನುಭವಗಳನ್ನು ಮೊದಲು ಹೇಳುತ್ತೇನೆ. ಇದನ್ನೇ ಯಾಕೆ ಮೊದಲು ತೆಗೆದುಕೊಳ್ಳುತ್ತೇನೆಂದು ನೀವು ಕೇಳಿದರೆ, ನಾನೂ ಅವಿವಾಹಿತೆಯೇ ಆಗಿರುವುದರಿಂದ ಈ ವಿಚಾರಕ್ಕೆ ನಾನು ಬೇಗನೆ ಸ್ಪಂದಿಸುತ್ತೇನೆ ಎನ್ನುವುದೇ ಉತ್ತರ. ಸಾಮಾನ್ಯವಾಗಿ ನಾವು ಅಂದುಕೊಂಡದ್ದು ಬಂಟ ಸಮುದಾಯದಲ್ಲಿ ಮತ್ತು ಕ್ರಿಶ್ಚಿಯನ್ನರಲ್ಲಿ ಅವಿವಾಹಿತೆಯರು ಜಾಸ್ತಿ ಎಂದು. ಆದರೆ ಅಧ್ಯಯನ ಮಾಡಿದಾಗ ಬ್ರಾಹ್ಮಣರಿಂದ ದಲಿತರವರೆಗೆ ಎಲ್ಲ ಕಡೆ ಅವಿವಾಹಿತೆಯರು ತುಂಬಾ ಇದ್ದಾರೆ. ಸ್ವಲ್ಪ ವಿರಳ ಎಂದರೆ ಮುಸ್ಲಿಮರಲ್ಲಿ, ಮುಸ್ಲಿಮರಲ್ಲಿ ಅಂಗವಿಕಲರನ್ನು ಬಿಟ್ಟರೆ ಉಳಿದಂತೆ ವಿವಾಹಿತೆಯರೇ.

ಅವಿವಾಹಿತೆಯರ ಮನಃಸ್ಥಿತಿ ವಿವಾಹಿತೆಯರಿಗಿಂತ ಭಿನ್ನ. ಅದರಲ್ಲಿಯೂ ಗ್ರಾಮೀಣ ಅವಿವಾಹಿತೆಯರಿಗೂ ನಗರ ಪ್ರದೇಶದ ಅವಿವಾಹಿತೆಯರಿಗೂ ಭಿನ್ನತೆ ಇದೆ. ಗ್ರಾಮೀಣ ಅವಿವಾಹಿತೆಯರು ಮದುವೆ ಆಗಲಿಲ್ಲ ಎನ್ನುವ ಬಗ್ಗೆ ಹೆಚ್ಚು ಚಿಂತೆ ಮಾಡುವುದಿಲ್ಲ. ಬದಲು ಅವರು ಆರ್ಥಿಕ ಅಗತ್ಯಕ್ಕಾಗಿ ಅಣ್ಣ, ತಮ್ಮ..... ಹೀಗೆ ಯಾರನ್ನೋ ಅವಲಂಬಿಸಬೇಕಾಗಿದ್ದು ಕಷ್ಟಗಳನ್ನು ಅನುಭವಿಸುತ್ತಾರೆ. ನಗರ ಪ್ರದೇಶದವರದ್ದು ಇದಕ್ಕೆ ತದ್ವಿರುದ್ಧ. ಆರ್ಥಿಕವಾಗಿ ಸಬಲರಿದ್ದಾಗಲೂ ಕೂಡ ಅವರಿಗೆ ಭಾವನಾತ್ಮಕ ಅಭದ್ರತೆ. ಕೆಲವರು ಬುದ್ಧಿ ಸರಿ ಇದ್ದರೂ ಇಲ್ಲದವರಂತೆ ವರ್ತಿಸುವುದು, ಯಾರನ್ನೂ ನಂಬದೆ ಇರುವುದು ಎಲ್ಲ ಇರುತ್ತದೆ. ಕೆಲವರ ಬಳಿ ಕೋಟಿಗಟ್ಟಲೆ ಹಣ ಇದೆ. ಯಾರಿಗೂ ಕೊಡುವುದಿಲ್ಲ, ಹಾಗೇ ಬ್ಯಾಂಕ್‌ನಲ್ಲಿಟ್ಟು ಸತ್ತವರೂ ಇದ್ದಾರೆ. ಇವರು ಮನುಷ್ಯರನ್ನು ನಂಬುವುದಿಲ್ಲ!

* ಹಾಗಿದ್ದರೆ ನೀವು ನಮ್ಮನ್ನೆಲ್ಲ ನಂಬುವ ಹಾಗಿಲ್ಲ ಎಂದಾಯಿತು?

- ಆದರೆ ನನ್ನ ಹತ್ತಿರ ಕೋಟಿಯಲ್ಲ; ಲಕ್ಷವೂ ಇಲ್ಲವಲ್ಲ, ಆದ್ದರಿಂದ ನಿಮ್ಮನ್ನು ನಂಬಲು ಅಡ್ಡಿಯಿಲ್ಲ. ಅವಿವಾಹಿತೆಯರಾಗಲು ಕಾರಣ ಏನು ಎಂದು ಹುಡುಕಿದರೆ ಅತಿಹೆಚ್ಚು ಕಾರಣ ಇರುವುದು ಜಾತಕಗಳಲ್ಲಿ, ಎರಡನೆಯದು ಅತಿಹೆಚ್ಚು ಕಾರಣ ಪ್ರೇಮ ಪ್ರಕರಣಗಳು. ಮೂರನೆಯದು ವರದಕ್ಷಿಣೆ, ನಾಲ್ಕನೆಯದು ಸರಿಯಾದ ಗಂಡ ಸಿಗದಿರುವುದು.

> ಮಕ್ಕಳು ಆಟವಾಡುವುದನ್ನು ತಂದೆ-ತಾಯಿಗೆ ಸಹಿಸಿಕೊಳ್ಳಲು ಆಗದಿದ್ದರೆ ನಿಜವಾದ ಕಲಿಕೆ ನಡೆಯಲು ಹೇಗೆ ಸಾಧ್ಯ.

* ನೀವು ಲೈಂಗಿಕ ಕಾರ್ಯಕತೆಯರ ಕುರಿತಾಗಿಯೂ ಅಧ್ಯಯನವನ್ನು ಮಾಡಿದವರು. 'ಸೆಕ್ಸ್'ನ ಅಂಶ ಅವಿವಾಹಿತೆಯರಿಗೂ ಲೈಂಗಿಕ ಕಾರ್ಯಕರ್ತೆಯರಿಗೂ ಹೇಗೆ ಭಿನ್ನ ರೂಪವನ್ನು ಹೊಂದಿರುತ್ತದೆ?

- ಅವಿವಾಹಿತೆಯರಿಗೆ ಸೆಕ್ಸ್ ಎನ್ನುವುದು ಒಂದು ಸಂಬಂಧ. ಅದಕ್ಕೆ ಒಂದು ಘನತೆ ಎಲ್ಲ ಇದೆ. ಲೈಂಗಿಕ ಕಾರ್ಯಕರ್ತೆಯರಿಗೆ ಅದೊಂದು ವ್ಯಾಪಾರ. ಬಹಳ ಸಲೀಸು. ಆದರೆ ಇದು ಸಲೀಸಾಗುವುದರ ಹಿಂದೆ ಇರುವ ವಿಷಾದ, ನೋವು, ಕ್ರೌರ್ಯ ನಮ್ಮನ್ನು ಹಿಂಡಿ ಹಾಕಿ ಬಿಡುತ್ತದೆ. ಒಬ್ಬ ಲೈಂಗಿಕ ಕಾರ್ಯಕರ್ತೆಯನ್ನು ಲಾಡ್ಜ್‌ಗೆ ಕರೆದೊಯ್ದವನು ಬೆಳಗ್ಗೆ ಏಳುವಾಗ ಆಕೆಯ ಹಣ, ಆಭರಣ, ಜೊತೆಗೆ ಬಟ್ಟೆಯನ್ನೂ ಕದ್ದೊಯ್ದಿದ್ದಾನೆ. ಆಮೇಲೆ ಆಕೆ ಬೆಡ್‌ಶೀಟ್‌ನ್ನು ಮೈಗೆ ಸುತ್ತಿಕೊಂಡು ರೂಂಬಾಯ್ ಅನ್ನು ಕರೆದು ಹೇಗೋ ಒಂದು ಸೀರೆ ತರಿಸಿಕೊಳ್ಳಬೇಕಾಯಿತು. ಪೊಲೀಸರ ಕೈಗೆ ಸಿಕ್ಕಿದರೆ ಇವರ ಪರ್ಸಿನಲ್ಲಿದ್ದ ಹಣವನ್ನು ಕಿತ್ತುಕೊಳ್ಳುತ್ತಾರೆ. ದಂಡವನ್ನು ಕಟ್ಟಬೇಕಾದರೆ ಮತ್ತೆ ಅವರು ದುಡಿಯಬೇಕು. ಇವರು ಯಾರೂ ಕೂಡ ಬಸ್ಸಿನಲ್ಲಿ ಹೋಗುವುದಿಲ್ಲ, ಆಟೋದಲ್ಲೇ ಇವರ ಪ್ರಯಾಣ. ಒಬ್ಬ ಆಟೋದವನೇ ನನ್ನನ್ನು ಅನೇಕ ಲೈಂಗಿಕ ಕಾರ್ಯಕರ್ತೆಯರ ಬಳಿಗೆ ಕರೆದೊಯ್ದದ್ದು. 'ಬನ್ನಿ ಟೀಚರ್' ಎನ್ನು ಕರೆದುಕೊಂಡು ಹೋಗುತ್ತಿದ್ದ ಅವನು ಎಚ್.ಐ.ವಿ. ಬಂದು ತೀರಿಕೊಂಡ ಮೇಲೆ ನನ್ನ ಅಧ್ಯಯನಕ್ಕೆ ಹಿನ್ನಡೆಯಾಯಿತು.

* ಅದೇಕೆ ಹಿನ್ನಡೆಯಾಯಿತು?

- ಯಾರಾದರೂ ಪರಿಚಿತರಿಲ್ಲದೆ ಅವರನ್ನು ಮಾತನಾಡಿಸಲು ಸಾಧ್ಯ ಉಂಟಾ. ಮಾತನಾಡಿಸಿದರೆ ನಮ್ಮ ಮೇಲೆ ಉರಿದುಬೀಳುತ್ತಾರೆ. ನೀವು ಹೈಟೆಕ್ ವೇಶ್ಯೆಯರ ಬಳಿ ಹೋಗುವುದಿಲ್ಲ, ನಮ್ಮ ಹತ್ತಿರ ಬರುತ್ತೀರಿ. ನಮ್ಮ ಬಗ್ಗೆ ಪುಸ್ತಕ ಬರೆದು ನೀವು ಹಣ ಮಾಡುತ್ತೀರಿ ಎಂದು ಬೈಯುತ್ತಾರೆ. ಯಾರ ಬಳಿ ಹೋದರೂ 'ನೀನ್ಯಾಕೆ ಬಂದೆ?' ಎಂಬ ಶೈಲಿಯವರೇ. ಇವರಲ್ಲಿ 50-60 ವರ್ಷ ವಯಸ್ಸಾದವರೂ ದುಡಿಯುತ್ತಿದ್ದಾರೆ. ಆಶ್ಚರ್ಯ ಏನು ಗೊತ್ತಾ, 50-60 ವಯಸ್ಸಾದವರ ಹೆಚ್ಚಿನ ಗಿರಾಕಿಗಳೆಲ್ಲರೂ ಹದಿಹರೆಯದ ಹುಡುಗರು! ಕಡಿಮೆ ರೇಟೂ ಅದಕ್ಕೆ ಕಾರಣ ಇರಬಹುದು. ಮಿನಿಮಮ್ ಅಂದರೆ ಒಂದು ಸಾವಿರ ರೂಪಾಯಿ. ನಾವು ಬೇಡವೆಂದುಕೊಂಡರೂ ಅದೇ ನಮ್ಮನ್ನು ಸೆಳೆಯುತ್ತದೆ ಎನ್ನುವವರು ಇಲ್ಲಿದ್ದಾರೆ. ಡ್ರಗ್ ಎಡಿಕ್ಟ್ ಆದವರು, ಕುಡುಕರು ಇದ್ದಾರೆ. ನೆಹರೂ ಮೈದಾನದಲ್ಲೇ ಬಿದ್ದು ಸತ್ತವಳೂ ಇದ್ದಾಳೆ. ಈ ವೃತ್ತಿಯನ್ನು ತಾನು ಮಾಡಬೇಕು ಎಂದು ಬಂದವರು ಯಾರೂ ಇಲ್ಲ. ಈ ವ್ಯವಸ್ಥೆಗೆ ತೀರಾ ವಿರುದ್ಧ ದಿಕ್ಕಿನಲ್ಲಿರುವುದು ಸತಿ ಪದ್ಧತಿ.

* 'ಸತಿ' ಅಧ್ಯಯನದಲ್ಲಿ ನೀವು ಕಂಡುಕೊಂಡದ್ದನ್ನು ಸ್ವಲ್ಪ ಹೇಳಿ.

- ನಾವು ಮಂಗಳೂರಿನಲ್ಲಿ ಮಾಸ್ತಿಕಲ್ಲು ಸಿಗಲಿಕ್ಕಿಲ್ಲ; ಸಿಕ್ಕಿದರೆ ನಾಲ್ಕೋ ಐದೋ ಸಿಗಬಹುದೆಂದು ಹೊರಟವರು. ಆದರೆ 125 ಕ್ಕಿಂತ ಜಾಸ್ತಿ ಸಿಕ್ಕಿತು. ಇಲ್ಲಿನ ಸ್ವಾರಸ್ಯ ಹೇಗಿದೆ ನೋಡಿ: ಒಂದೆಡೆ ಹಾಡಿದೈವ ಎಂದು ಇದೆ. ಅದು ಮಾಸ್ತಿಕಲ್ಲು. ಒಬ್ಬ ಸತಿಯ ಕಲ್ಲನ್ನು ನೋಡಲು ಹೆಂಗಸರನ್ನು ಬಿಡುವುದಿಲ್ಲ ಎಂಬ ನಿಯಮ! ಪುರೋಹಿತರಿಗೆ ಹಸಿರು ನೋಟು ಕೊಟ್ಟೆವು. "ಬೇಗ ನೋಡಿಕೊಂಡು ಬನ್ನಿ, ಆದರೆ ಫೋಟೋ ತೆಗೆಯಬಾರದು" ಎಂದರು. ಕಾಸರಗೋಡಿನ ಕಡೆಯಂತೂ ಹೆಂಗಸರನ್ನು ಬಿಡುವುದೇ ಇಲ್ಲ. ಮಾಸ್ತಿಕಲ್ಲಿನ ಪಕ್ಕ ವೀರಗಲ್ಲು ಇದೆ. ವೀರಗಲ್ಲಿಗೆ ಪೂಜೆ ಇಲ್ಲ. ಮಾಸ್ತಿಕಲ್ಲಿಗೆ ಪೂಜೆ ಇದೆ. ಪೂಜೆ ಮಾಡುವವರು ಗಂಡಸರು. ಹೆಂಗಸರು ಅಲ್ಲಿಗೆ ಹೋಗಬಾರದು! ಈ ವ್ಯವಸ್ಥೆಯ ಹಿಂದಿನ ತರ್ಕ ಅರ್ಥ ಆಗುವುದೇ ಇಲ್ಲ. ಕಟಪಾಡಿಯಲ್ಲಿ ಮಾಸ್ತಿ ಕಾಮಾಕ್ಷಿ ದೇವಸ್ಥಾನ ಇಲ್ಲ. ಅಲ್ಲಿಗೆ ಹೋಗುವಾಗಲೇ "ಇದು ಮಾಸ್ತಿ ಅಲ್ಲ, ಇಲ್ಲಿರುವುದು ಕೈಯ ಸಂಕೇತ" ಎಂದೂ, ಇದು ಗೋವಾದಿಂದ ಬಂದದ್ದು ಎಂದೂ ಹೇಳುತ್ತಾರೆ. ಬೆಟ್ಟ ಇಳಿಯುವ ದಾರಿಯಲ್ಲಿ ಬಹಳ 'ಸತಿ' ಕಲ್ಲುಗಳು ಸಿಗುತ್ತವೆ. ಹಾಗೆ ನೋಡಿದರೆ ತುಳುನಾಡಿನಲ್ಲಿ 'ಸತಿ'ಗಿಂತ 'ವೀರಸ್ತ್ರೀ'ಯರು ಜಾಸ್ತಿ ಇದ್ದಿರಬಹುದೆಂದು ನನಗಿಸುತ್ತದೆ.

* ಅಂದರೆ.....

- ಅಂದರೆ ಸರಳ. ತುಳುನಾಡಿನ ಜನರು ಜಾಣರು, ಎಲ್ಲಿಯೂ ಸಿಕ್ಕಿಬೀಳದವರು, ಹೋರಾಟ ಮಾಡದವರು ಎಂಬೆಲ್ಲ ಭಾವನೆ ಇದೆ. ಆದರೆ ವಾಸ್ತವ ಹಾಗಿಲ್ಲ. ನಾನು ಮತ್ತು ಗುಲಾಬಿ ಬಿಳಿಮಲೆ ಹೋರಾಟಗಾರ್ತಿಯರ ಬಗ್ಗೆ ಅಧ್ಯಯನ ಮಾಡಲು ಹೊರಟೆವು. ಎಂತೆಂತಹ ಹೋರಾಟಗಾರ್ತಿಯರಿದ್ದರು ಅರವಿಂದ್. ಚಳವಳಿಗೆ ತೊಡಗಿಕೊಂಡು ಪೊಲೀಸರ ಕೈಯಿಂದ ಲಾಠಿ ಎಳೆದು ಅವರಿಗೇ ಬಾರಿಸಿದವರಿದ್ದಾರೆ. 60 ವರ್ಷಗಳ ಹಿಂದೆ ಪರಿಶಿಷ್ಟ ಜಾತಿಯ ಮಹಿಳೆಯರು ಮೀನುಗಾರರ ಸಂಘ ಮಾಡಿದ್ದಾರೆ. ಕಾರ್ಮಿಕ ಚಳವಳಿಯನ್ನು ಯಶಸ್ವಿ ಗೊಳಿಸಿದ ಶಕ್ತಿ ಮಹಿಳೆಯರದ್ದು. ಆದರೆ ನಾಯಕತ್ವ ಪುರುಷರದ್ದು. ಈಗ ಹೇಳಿ ತುಳುನಾಡಿನಲ್ಲಿ 'ಸತಿ'ಗಿಂತ 'ವೀರಸ್ತ್ರೀ'ಯರು ಜಾಸ್ತಿ ಇದ್ದಿರಬೇಕಲ್ಲವೆ. ನನ್ನ ಬಳಿ ಮತ್ತೆ ದ್ವಂದ್ವ ಇದೆ. ಒಂದೆಡೆ ಸ್ತ್ರೀಯರು ನಿರ್ಲಕ್ಷಿಸಲ್ಪಟ್ಟಿದ್ದಾರೆ. ಇನ್ನೊಂದೆಡೆ, ನಾವು ಗುತ್ತಿನ ಮನೆಗಳ ಸಂಶೋಧನೆಗೆ ಹೊರಟಾಗ ಹೆಣ್ಣು ಮಕ್ಕಳು ಹುಟ್ಟಲಿಲ್ಲವೆಂದು ಹರಕೆ ಹೊತ್ತುಕೊಂಡು ದೈವ ನೇಮ ಮಾಡಿದ ಘಟನೆಯೂ ಸಿಕ್ಕಿದೆ. ಇವೆರಡರಲ್ಲಿ ಯಾವುದು ನಿಜವಾದ ಧೋರಣೆ ಎನ್ನುವುದೇ ದ್ವಂದ್ವ.

* ಹಾಂ, ಇದು ತುಂಬ ಇಂಪಾರ್ಟೆಂಟ್. ಬಾಬು ಶಿವ ಪೂಜಾರಿಯವರ ಇದರ ಬಗ್ಗೆ ಹೇಳುತ್ತಿರುತ್ತಾರೆ. ಗುತ್ತಿನ ಮನೆ ಎಂದು ಊರೆಲ್ಲ ಅಡ್ಡಾಡುತ್ತೀರಪ್ಪ, ಏನಿದು ಕಥೆ? ಬಿಲ್ಲವರೆಲ್ಲ ಒಗ್ಗಟ್ಟಾಗಬೇಕೆಂದು ಭಾರೀ ಕಿತಾಪತಿಯೆಲ್ಲ ಮಾಡುತ್ತಿದ್ದೀರಂತೆ?

ಹೌದು ಮತ್ತೆ ಇಲ್ಲದಿದ್ದರೆ ನಿಮ್ಮನ್ನೆಲ್ಲ ಕಂಟ

ಮಾಡುವುದು ಹೇಗೆ. ಇದು ಬಿಲ್ಲವರ ಕಳೆದ ಇತಿಹಾ

ಹೊರತೆಗೆಯುವ ಆಲೋಚನೆ. ಬಾಬು ಶಿವ ಪೂ

ಮಾರ್ಗದರ್ಶಕರು. ನಾನು, ರಮಾನಾಥ ಕೋಟೆ

ಮುದ್ದು ಮೂಡುಬೆಳ್ಳೆ 'ಗುತ್ತಿ'ನ ಮನೆಯ ಬಗ್ಗೆ ಅ

ನಡೆಸುತ್ತೇವೆ. ಈ ಮನೆಗಳಲ್ಲಿ ಹಳೆ ಕಾಲದ ತ

ಇದೆ. ಯುದ್ಧ ಮಾಡಿದ ಮಹಿಳೆಯರಿದ್ದಾರೆ. ಶ

ಕೈಗೆ ಚಿನ್ನ ಸಿಗಬಾರದೆಂದು ಬಾವಿಗೆ ಹಾಕಿದವ

ಬ್ರಿಟಿಷ್ ದಾಳಿಯಾದಾಗ ಬಂಡಾಯಗಾರರಿಗೆ ಅ

ಕೊಟ್ಟವರಿದ್ದಾರೆ. ಕೆರೆಯ ನೀರನ್ನು ಮುಟ್ಟಬಾರದು ಎ

ಕೆರೆಯನ್ನೇ ಬ್ಲಾಕ್ ಮಾಡಿದವರಿದ್ದಾರೆ. ಎಕರೆ

ಭೂಮಿಯನ್ನು ದಾನ ಕೊಟ್ಟು ಭೂಮಿಂ

ಕಳೆದುಕೊಂಡವರಿದ್ದಾರೆ. ಆದರೆ ವಿಚಿತ್ರ ರೀ

ಮುಂಗೋಪಿಗಳು ಮತ್ತು ಪೆದ್ದರು ಅಥವಾ

ಭಾಷೆಯಲ್ಲಿ ಹೇಳುವುದಾದರೆ ಮುಗ್ಧರು.

* 'ಗುತ್ತಿನ' ಸುತ್ತಾಟದೊಂದಿಗೆ ನೀವು ಜೈಲುಗ

ಸುತ್ತಾಡುತ್ತಿದ್ದಿರಲ್ಲ. ರೋಹಿಣಿ ಅಜ್ಜಿ ಜೈ

ಹೋಗಿದ್ದಾರಂತೆ ಎಂದು ನನ್ನ ಮಗಳು ಹೇಳಿದ್ದು

ಹೌಹಾರಿಬಿಟ್ಟಿದ್ದೆ. ಇದು ಯಾವ ಸಂಶೋಧನೆ?

- ಇದು 'ಗುತ್ತಿನ' ಮುಂದಿನ ಭಾಗ. ನನಗೆ

ಕುತೂಹಲವಿತ್ತು. ಸ್ವಾತಂತ್ರ್ಯ ಹೋರಾ

ಮೇಲುಜಾತಿಯವರ ಹೆಸರುಗಳೇ ಚಾಲ್ತಿಯಲ್ಲಿವೆ. ಹ

ಕೆಳಜಾತಿಯವರು ಯಾರೂ ಇದ್ದಿರಲಾರರೆ ಎಂದು

ಕುತೂಹಲ. ಅದನ್ನು ಪತ್ತೆ ಮಾಡಲು ಜೈಲಿಗೆ ಹೋ

ಕೆಲವು ಹೆಸರುಗಳು ಜೈಲಿನ ಕಡತದಲ್ಲಿ ಸಿಕ್ಕಿದವು.

ತುಕ್ರ, ದೂಮಾ ಎಂಬೆಲ್ಲ ಹೆಸರುಗಳು ಸಿಕ್ಕಿದವು.

ಅವು ಕೆಳಜಾತಿಯವರೆಂದು ಗೊತ್ತಾಯಿತೇ ಹ

ಯಾವ ಜಾತಿಯವರೆಂದು ಗೊತ್ತಾಗಲಿಲ್ಲ. ಇನ

ಸಂಗತಿ ಎಂದರೆ 'ಡಿಫೆನ್ಸ್ ಆಫ್ ಇಂಡಿಯಾ

ಇವರಿಗೆ ಅನ್ವಯವಾಗಿದೆ. ಇನ್ನೊಂದು ಸಂಗತಿ

ಕೆಲವು ಭಿಕ್ಷುಕರನ್ನು ಜೈಲಿಗೆ ಹಾಕಿದ್ದಾರೆ! ಬಹುಶಃ

ವೇಶಪಲ್ಲಟ ಮಾಡಿದವರಿರಬಹುದು. ಅಲ್ಲೊಂದು

'ರಾಮಸ್ವರೂಪ್' ಎಂದು ಇಂಗ್ಲಿಷ್‌ನಲ್ಲಿದೆ! ಆರು

ಮಂಗಳೂರು ಜೈಲಿನಲ್ಲಿದ್ದರು. ನಂತರ ಆಲಿಪುರ

ಕಳಿಸಿದ್ದಾರೆ. 1888 ರಲ್ಲಿ ಕಾಯ್ದೆ ಆಗುವ ತನಕ ಬ

ಮೇಲಿನ ಅಪರಾಧ ಅನೈತಿಕತೆ ಮತ್ತು ಕೊಲೆ

ಹೆಚ್ಚು ದಾಖಲಾಗಿದೆ. ಈ ಅಧ್ಯಯನ ಕುತೂಹ

ಹೆಚ್ಚಿಸಿದರೂ ಹೆಚ್ಚುಹೆಚ್ಚು ನಿಗೂಢವಾಗುತ್ತಾ ಹೋ

* ನೀವು ಮಾತನಾಡುತ್ತಾ ಸ್ತ್ರೀ ಶೋಷಣೆಯ ಸ್ಥಿ

ಹೇಳಿದಿರಿ. ಕಲಿತವರ ದೌರ್ಬಲ್ಯವನ್ನೂ ಹೇ

ಹಾಗಾದರೆ ಆಧುನಿಕ ಶಿಕ್ಷಣದಿಂದ ಉಪಯೋ

ಅನ್ನುತ್ತೀರಾ? 38 ವರ್ಷಗಳ ಕಾಲ ಅಧ್ಯಾಪಕಿ

ಶಿಕ್ಷಣದ ಬಗ್ಗೆ ಸಾಕಷ್ಟು ಅಧ್ಯಯನವನ್ನು ನಡೆಸಿದ

ಏನು ಹೇಳುತ್ತೀರಿ?

- ಕಲಿಯದ ಹಳ್ಳಿಯ ಮಹಿಳೆಯರು

ಗಟ್ಟಿಯಾಗಿರುತ್ತಾರೆ ಎಂದರೆ ಕಲಿತವರೆ

ದುರ್ಬಲರಾಗಿರುತ್ತಾರೆ ಎಂದು ಅರ್ಥ

ಶಿಕ್ಷಣವೆಂಬುದನ್ನು ಉದ್ಯೋಗವನ್ನು ತಲುಪಲು

ಸೇತುವೆ ಎಂಬ ಧೋರಣೆಗೆ ಸೀಮಿತರಾದವರಲ್ಲಿ


ಜಾಸ್ತಿ ಇರುತ್ತದೆ. ಶಿಕ್ಷಣವನ್ನು ವ್ಯಕ್ತಿತ್ವದ ಶಕ್ತಿ

ತೆಗೆದುಕೊಂಡವರು ನಿಜವಾಗಿಯೂ ಸಮರ್ಥರಾ

* ಅಂತಹ ಅಡ್ಡಿಗಳು ಹಿಂದೆ ನಿಮಗೆ ಇದ

ಅದರ ಪರಿಸ್ಥಿತಿ ದೇವರಿಗೇ ಪ್ರೀತಿ. ಎಸ್‌ಎಲ್

ಅಮೆರಿಕಾದ ಬೆನ್ ಬೆರ್ನಾಂಕಿಯು ನಮ್ಮ ಪುಟ್ಟ ಚೈತ್ರಳ ಮದುವೆ ನಿಲ್ಲಿಸಿದ್ದು



ಚೈತ್ರಳಿಗೆ ತನ್ನ ಹೆಸರು ಎಂದೂ ಒಂದು ಸಮಸ್ಯೆ ...ರಲಿಲ್ಲ. ಅವಳ ಓರಗೆಯವರಲ್ಲಿ ಅದು ಒಂದು ...ರ್ನ್' ಹೆಸರಾಗಿಯೇ ಇತ್ತು. ಆದರೆ ಮದುವೆಯ ... ಬಂದೇ ಬಂತು. ಅದು ಹೊತ್ತು ತಂದ ಹಲವು ...ಗಳಲ್ಲಿ ಹೆಸರಿನದ್ದೂ ಒಂದು. ಹುಡುಗ, ಹುಡುಗಿ ...ೂ ಮನೆಗಳಲ್ಲಿ ಇಷ್ಟವಾದ ನಂತರ ಹೆಸರಿನ ಬಲ ...ದಿಕೆಯಾಗುತ್ತಿಲ್ಲ ಎಂದು ಚೈತ್ರಳ ಅಮ್ಮನಿಗೆ, ಆಕೆ ...ವ ದೇವಸ್ಥಾನದ ಪೂಜಾರಿ ಹೇಳಿದ. ಮನೆಯವರಿಗೆ ...ನೂ ಅಂತಹ ದೊಡ್ಡ ಸಮಸ್ಯೆಯಲ್ಲ. ಇದು ಬಹಳ ...ಮೂಲಿನ ಸಂಗತಿಯಾಗಿದ್ದು, ಅದಕ್ಕೆ ಸುಲಭದ ...ಯವೂ ಚಾಲ್ತಿಯಲ್ಲಿತ್ತು. ಹೆಸರಿನ ಹಿಂದೆ 'ಪುಟ್ಟ' ...ದರೆ ಆಯ್ತು. ಹೀಗಾಗಿ 'ಒಪ್ಪುಮಾತಿ'ನ ದಿನ ...ಟ್ಟಚೈತ್ರ' ಅಂತ ಕರೆಯುವುದು ಎಂತಲೂ ...ರ್ಣನವಾಯಿತು.

...ಮದುವೆಯ ಸಂಭ್ರಮ, ಒಪ್ಪುಮಾತಿನ ದಿನ ತನ್ನ ...ಗ ಸುರೇಶ ಆಕೆಗೆ ಒಂದು ಹೊಸ ಮೊಬೈಲ್ ...ಸಿದ ಖುಷಿ ಇವುಗಳ ಮಧ್ಯೆ ತನ್ನ ಹೆಸರು



...ವಾಗಿದ್ದು ಚೈತ್ರಳಿಗೆ ಅಷ್ಟೇನೂ ತೊಂದರೆ ಅನ್ನಿಸಿರಲಿಲ್ಲ. ...ವೆ ಮಾತು ನಡೆದದ್ದಕ್ಕೂ, ಮದುವೆ ದಿನ ...ಯಾದದ್ದಕ್ಕೂ 10 ತಿಂಗಳ ಅಂತರವಿದ್ದರೂ, ಸುರೇಶ ... ಚೈತ್ರಳ ಮೊಬೈಲ್ ಫೋನ್‌ಗಳಿಗೆ 'ಅನ್‌ಲಿಮಿಟೆಡ್ ...ಆಫರ್' ಇದ್ದದ್ದು ಅಂತರವನ್ನು ಕಡಿಮೆ ಮಾಡಿತ್ತು. ... ಬೆನ್ ಬೆರ್ನಾಂಕಿ ಸುಮ್ಮನೇ ಇರದೇ ಇವರ ...ನ ಮಧುರ ಸಂಬಂಧಕ್ಕೆ ಅಡ್ಡ ಬಂದಿದ್ದು ವಿಚಿತ್ರ ... ಸತ್ಯ ಸಂಗತಿಯಾಗಿದೆ.

... ವೃತ್ತಾಂತವು ನಿಮಗೆ ಸಂಪೂರ್ಣವಾಗಿ ...ವಾಗಬೇಕೆಂದರೆ ಎರಡು ಮಾಹಿತಿಗಳು ನಿಮಗೆ ...ಗುವುದು ಅಗತ್ಯವಾಗಿದೆ. ಒಪ್ಪುಮಾತಿನ ದಿನ ...ಗನಿಗೆ ವರದಕ್ಷಿಣೆ ಎಷ್ಟು ಕೊಡಬೇಕು ಎನ್ನುವ ...ರ ಚರ್ಚೆಗೆ ಬಂತು. ಎಲ್ಲಾ ಜಾತಿಗಳಲ್ಲೂ ಈಗ ...ಗಿ ಸಿಗುವುದೇ ಕಷ್ಟವಾಗಿದೆ. ಹೀಗಿರುವಾಗ ತುಂಬಾ ...ಕ್ಷಿಣೆಯನ್ನು ಡಿಮ್ಯಾಂಡ್ ಮಾಡುವ ಪರಿಸ್ಥಿತಿಯಲ್ಲಿ ...ಗಿನ ಮನೆಯವರು ಇಲ್ಲ. ಆದರೂ ಉಪಾಯವಾಗಿ ... ವಸೂಲಿ ಮಾಡಿಕೊಡುವ ಮಧ್ಯಸ್ಥಿಕೆದಾರರು ...ದ್ದರಿಂದ ಕೆಲವು ಒಳ ದಾರಿಗಳು ಇದ್ದೇ ಇವೆ.

...ಳೆದ ಸೆಪ್ಟೆಂಬರ್‌ನಲ್ಲಿ ನಡೆದ ಆ ಮಾತುಕತೆ ದಿನ ...ಸ್ಥಿಕೆದಾರರು ಮಾತು ಶುರು ಮಾಡಿದಾಗ ಹೇಳಿದ ... ಮಾತು: 'ನಮಗೆ ವರದಕ್ಷಿಣೆ ಬೇಡ. ಮದುವೆ ... ಹುಡುಗಿ ಮನೆಯವರದ್ದು. ಬೀಗರ ಊಟ ...ಗರ ಕಡೆಯವರದ್ದು. ಹುಡುಗಿಗೆ 4 ಲಕ್ಷ ರೂ. ... ಬಂಗಾರ ಹಾಕಿ ಸಾಕು'. ಮಾತುಕತೆ ಅಲ್ಲಿಗೆ ಮುಗಿದೇ ...ತ್ತು. ಚೈತ್ರಳ ಅಪ್ಪ ಇದನ್ನು ಒಪ್ಪಲು ಕಾರಣವಿತ್ತು. ...ಪ್ ಖರ್ಚು ಹೇಗೂ ಮಾಡಲೇಬೇಕು; ಅದಕ್ಕೆ 2 ... ಮಾಡಿಕೊಂಡರೆ ಆಯಿತು. ತನ್ನ ಮದುವೆ ...ಯದಲ್ಲಿ ಮಾಡ ಹಾಕಿದ್ದ ಬಂಗಾರಕ್ಕೆ, ಇವತ್ತು 4 ...ಗ. ಬೆಲೆ. ಹೆಂಡತಿ ಮೈಮೇಲೆ ಒಡವೆ ಇರದಿದ್ದರೆ ...? ಮಗಳ ಮದುವೆ ಮುಗಿದರೆ ಸಾಕು ಅಂತ ... ಅನ್ನಿಸಿತ್ತು. ಬಂಗಾರದ ಬೆಲೆ ಯಾವ ಪ್ರಮಾಣಕ್ಕೆ ಏರುತ್ತಿತ್ತೆಂದರೆ, ಮದುವೆಯ ಹೊತ್ತಿಗೆ ಅದರಲ್ಲಿ ಕಾಲು ಭಾಗ ಉಳಿಸಿಕೊಂಡರೂ ಉಳಿದ ಒಡವೆಗಳು 4 ಲಕ್ಷ ತೂಗುತ್ತವೆ ಎಂಬುದು ಅವರ ಲೆಕ್ಕಾಚಾರ.

ಚೈತ್ರಳ ಅಪ್ಪನ ಲೆಕ್ಕಾಚಾರ ಒಂದಾದರೆ ಬೆನ್ ಬೆರ್ನಾಂಕಿಯು ಲೆಕ್ಕಾಚಾರವೇ ಬೇರೆ ಆಗಿತ್ತು. ಅಕ್ಟೋಬರ್‌ನಿಂದ ಬಂಗಾರದ ಬೆಲೆ ಕುಸಿಯಲಾರಂಭಿಸಿತು. ಮಾರ್ಚ್ ಬರುವ ಹೊತ್ತಿಗೆ ಅದು ಏರುವ ಬದಲು ಇಳಿಕೆಯ ಕಡೆಗೇ ಇದೆ ಎಂಬುದು ಖಾತ್ರಿಯಾಗಿತ್ತು. ಇನ್ನೂ 4 ತಿಂಗಳು ಇರುವ ಮದುವೆಗೆ ಈಗಲೇ ಆಹ್ವಾನ ಪತ್ರಿಕೆ ಪ್ರಿಂಟ್ ಹಾಕಿಸಿಬಿಟ್ಟರು.

ಪುಟ್ಟ ಚೈತ್ರ ವೆಡ್ಸ್ ಸುರೇಶ್...

ಏಪ್ರಿಲ್‌ನಲ್ಲಿ ಬಂಗಾರ ಶೇ.17ರಷ್ಟು ಇಳಿಯಿತು. ಅಂದರೆ 2013ರಲ್ಲಿ ಒಟ್ಟು 23%. ಒಪ್ಪುಮಾತು ಆಗಿದ್ದ ಸಂದರ್ಭಕ್ಕೆ ಹೋಲಿಸಿದರೆ ಈಗ 1 ಲಕ್ಷ ರೂ.ಗಳಿಗೂ ಹೆಚ್ಚು ಹಣ ಹೊಂದಿಸಲೇಬೇಕು. ಯಾತಕ್ಕೋ ಎಂಬಂತೆ ಫೋನ್ ಮಾಡಿದ್ದ ಸುರೇಶನ ಅಪ್ಪ 'ಬಂಗಾರದ್ದು ಸ್ವಲ್ಪ ನೋಡಿಕೊಳ್ಳಿ' ಅಂತಲೂ ಸೇರಿಸಿದ್ದರು. ಅಲ್ಲಿಗೆ ಇವರ ಎದೆ ಭಾರವಾಗಲು ಆರಂಭಿಸಿತು.

ಈ ಮಧ್ಯೆ ಜೂನ್‌ನಲ್ಲಿ ಬೆರ್ನಾಂಕಿ ಒಂದು ಪತ್ರಿಕಾಗೋಷ್ಠಿ ಮಾಡಿದ. ಜೂನ್ 19ರಂದು ಫೆಡರಲ್ ಓಪನ್ ಮಾರ್ಕೆಟ್ ಕಮಿಟಿ(FOMC)ಯ ಸಭೆಯ ನಂತರ ನಡೆದ ಆ ಪತ್ರಿಕಾಗೋಷ್ಠಿಯ ನಂತರ ನಾಟಕೀಯವಾಗಿ ಡಾಲರ್‌ನ ಬೆಲೆ ಏರುತ್ತಾ ಹೋಯಿತು, ಬಂಗಾರದ ಬೆಲೆ ಮತ್ತಷ್ಟು ಇಳಿಯಿತು. ಎಷ್ಟರ ಮಟ್ಟಿಗೆ ಎಂದರೆ 1980ರ ಜನವರಿಯಲ್ಲಿ ಒಮ್ಮೆ ಈ ಪ್ರಮಾಣದ ಇಳಿಕೆ ಕಂಡಿದ್ದು ಬಿಟ್ಟರೆ ಈಗಲೇ ಚಿನ್ನದ ಬೆಲೆಯ ಇಳಿಕೆಯ ದರ ಇಷ್ಟು ಹೆಚ್ಚಾಗಿದ್ದು ಎಂದು ವಿಶ್ಲೇಷಕರು ಟಿವಿಗಳಲ್ಲಿ ವಿವರಿಸಿದರು. ಪುಟ್ಟಚೈತ್ರಳ ಮದುವೆಯ ಸಂಗತಿ ಮಾತ್ರ ಯಾವ ಟಿವಿಯಲ್ಲೂ ಚರ್ಚೆಯಾಗಲಿಲ್ಲ, ಬದಲಿಗೆ ಡಾಲರ್‌ನ ಎದುರು ರೂಪಾಯಿ ಕುಸಿತದ ಬಗ್ಗೆ ಗ್ರಾಫ್, ಗ್ರಾಫಿಕ್ಸ್ ಮೂಲಕ ತೋರಿಸಿ ಪತ್ರಿಕೆಗಳಲ್ಲೂ, ಟಿವಿಗಳಲ್ಲೂ ಚರ್ಚೆಯಾಯಿತು.

ಆಗಿದ್ದಾಗಲಿ ಎಂದು ಚೈತ್ರಳ ಅಪ್ಪ ಕಳೆದ ಸೆಪ್ಟೆಂಬರ್‌ನಲ್ಲಿ ಇದ್ದ ರೇಟಿಗೆ ತಕ್ಕಂತೆ ಅಷ್ಟೇ ತಾನು ಚಿನ್ನ ಹಾಕುವುದು ಎಂದು ಸ್ಪಷ್ಟವಾಗಿ ಹೇಳಿದರು. ಮಧ್ಯಸ್ಥಿಕೆದಾರರು ತಾನು ಇಷ್ಟು ತೊಲ ಬಂಗಾರ ಎಂದು ಹೇಳದೇ, ಇಷ್ಟು ಲಕ್ಷ ಎಂದು ಹೇಳಿದ್ದುದರ ಬಗ್ಗೆ ಹೆಮ್ಮೆ ಪಟ್ಟುಕೊಂಡರಾದರೂ, 4 ಲಕ್ಷ ರೂ. ಚಿನ್ನ ಸಿದ್ಧ ಮಾಡಿಕೊಳ್ಳದೇ ಪತ್ರಿಕೆ ಹಂಚುವುದು ಬೇಡ ಎಂದು ಸುರೇಶನ ಅಪ್ಪ ಸ್ಪಷ್ಟವಾಗಿ ಹೇಳಿದ್ದು ಕೇಳಿದಾಗ ಅವರಿಗೆ ಪೇಚಾಟಕ್ಕಿಟ್ಟುಕೊಂಡಿತು. ಸುರೇಶನಿಂದ ಅನ್‌ಲಿಮಿಟೆಡ್ ಕಾಲ್ಸ್ ಯಾಕೋ ಲಿಮಿಟೆಡ್ ಆದದ್ದು ನೋಡಿ ಚೈತ್ರಳಿಗೂ ಗಾಬರಿಯಾಯಿತು. ಕಡೆಗೆ ಮದುವೆ ಮುರಿದು ಬಿದ್ದಿದೆ ಎಂಬಲ್ಲಿಗೆ ಈ ವೃತ್ತಾಂತವನ್ನು ಮುಗಿಸಲೇಬೇಕಿದೆ.

ಆದರೆ ಬೆನ್ ಬೆರ್ನಾಂಕಿಯು ಸಂಗತಿ ನಿಮಗೆ ಹೇಳಬೇಕು. ಈತ ಅಮೆರಿಕದ ಫೆಡರಲ್ ರಿಸರ್ವ್ ಬ್ಯಾಂಕ್‌ನ ಅಧ್ಯಕ್ಷ. ಡಾಲರ್‌ನ ಬೆಲೆಯನ್ನು ಹೇಗಿಟ್ಟುಕೊಳ್ಳಬೇಕು, ಪ್ರಪಂಚದ ಆರ್ಥಿಕತೆಯ ಮೇಲೆ ಅಮೆರಿಕದ ಪ್ರಭಾವವನ್ನು ಉಳಿಸಿಕೊಳ್ಳಲು ಏನನ್ನು ಮಾಡಬೇಕು ಎನ್ನುವುದರಲ್ಲಿ ಒಂದು ಪ್ರಮುಖ ಸ್ಥಾನ ಹೊಂದಿರುವ ವ್ಯಕ್ತಿ. ಆದರೆ 2008ರ ಅಮೆರಿಕದ ಆರ್ಥಿಕ ಕುಸಿತದ ನಂತರ ಡಾಲರ್‌ನ ಮೌಲ್ಯ ಹೊಯ್ದಾಟದಲ್ಲಿತ್ತು. ಈ ಕುಸಿತದ ಸಂದರ್ಭದಲ್ಲಿ ಟೀಕೆಗೊಳಗಾದ ಆಯಕಟ್ಟಿನ ವ್ಯಕ್ತಿಗಳಲ್ಲಿ ಈತನೂ ಒಬ್ಬ.



ಯಾವಾಗ ಅಮೆರಿಕದ ಆರ್ಥಿಕ ಕುಸಿತದ ಕಾರಣಕ್ಕೆ ಡಾಲರ್ ಬೆಲೆ ಕುಸಿಯುತ್ತಾ ಹೋಯಿತೋ, ಆಗ ಬಂಗಾರದ ಬೆಲೆ ಹೆಚ್ಚುತ್ತಾ ಹೋಯಿತು. ಜನರು ಷೇರು ಮಾರುಕಟ್ಟೆಯಲ್ಲಿ ಹೂಡುವುದನ್ನೂ ಕಡಿಮೆ ಮಾಡಿ ಚಿನ್ನದ ಮೇಲೆ ಹೂಡಿದರು. ಚೀನಾದ ಆರ್ಥಿಕತೆಯ ಬೆಳವಣಿಗೆ ಹೆಚ್ಚಾದಂತೆಲ್ಲಾ, ಅಮೆರಿಕದ ಡಾಲರ್ ವಿಶ್ವ ಆರ್ಥಿಕತೆಯ ಮೇಲೆ ಸಾಧಿಸಿದ್ದ ಏಕಸ್ವಾಮ್ಯವು ಕುಂದಲಾರಂಭಿಸಿತು.

ಹಾಗಾಗಿ ಈಗ ಅಮೆರಿಕ ತನ್ನಲ್ಲಿದ್ದ ಚಿನ್ನದ ರಿಸರ್ವ್ ಅನ್ನು ಮಾರುಕಟ್ಟೆಗೆ 'ಬಿಟ್ಟು ನೋಡುವ' ತಂತ್ರವನ್ನು ಅನುಸರಿಸಲು ಹೊರಟಿದೆ. ಚಿನ್ನ ಟನ್‌ಗಟ್ಟಲೆ ಒಂದೊಂದು ದೊಡ್ಡ ಬ್ಯಾಂಕ್‌ನಿಂದ ಮಾರುಕಟ್ಟೆಗೆ ಇಳಿಯಲಾರಂಭಿಸಿದಂತೆ ಚಿನ್ನದ ಬೆಲೆ ಕುಸಿಯಲಾರಂಭಿಸಿತು. ಇಲ್ಲಿ ದೊಡ್ಡ ಬ್ಯಾಂಕ್ ಎಂದರೆ ಕೇವಲ ಅಮೆರಿಕದ ಸೆಂಟ್ರಲ್ ಬ್ಯಾಂಕ್ 'ಫೆಡರಲ್ ಬ್ಯಾಂಕ್' ಮಾತ್ರವೇ ಅಲ್ಲ, ಜಗತ್ತಿನ ಹಲವು ಸಣ್ಣ ಪುಟ್ಟ ದೇಶಗಳಲ್ಲಿರುವ ಅಮೆರಿಕದ ನೇರ ನಿಯಂತ್ರಣ ಮತ್ತು ಅವಲಂಬನೆಯಲ್ಲಿರುವ ಬ್ಯಾಂಕಿಂಗ್ ಉದ್ದಿಮೆಯಲ್ಲಿರುವ ಹಲವಾರು ಬ್ಯಾಂಕ್‌ಗಳು.

ಈ ಟನ್‌ಗಟ್ಟಲೆ ಚಿನ್ನ ಮಾರುಕಟ್ಟೆಯಲ್ಲಿ ಮಾಡುವ ಪರಿಣಾಮವು, ಚಿನ್ನಕ್ಕೆದುರಾಗಿ ಡಾಲರ್‌ನ ಬೆಲೆಯನ್ನು ಹೆಚ್ಚಿಸುತ್ತದೆ. ಇದರಿಂದ ಜಾಗತಿಕ ಮಾರುಕಟ್ಟೆಯಲ್ಲೂ ಡಾಲರ್‌ನ ಬೆಲೆ ಹೆಚ್ಚಾಗುತ್ತದೆ. ಹಾಗೆ ಆದಂತೆ ಅಮೆರಿಕದಿಂದ ಆಗುವ ರಫ್ತಿಗೆ ಹೆಚ್ಚೆಚ್ಚು ಹಣ ಸಿಗುತ್ತಾ ಹೋಗುತ್ತದೆ. ಆಮದು ಆಧಾರಿತ ಆರ್ಥಿಕತೆ ಹೊಂದಿರುವ ದೇಶಗಳು (ಭಾರತ ಹೆಚ್ಚೆಚ್ಚು ಆಮದು ಆಧಾರಿತವಾಗುತ್ತಿದೆ) ಅದೇ ವಸ್ತುಗಳಿಗೆ ಹೆಚ್ಚೆಚ್ಚು ರೂಪಾಯಿಗಳನ್ನು ತೆತ್ತು ಡಾಲರ್‌ಗಳನ್ನು ಕೊಳ್ಳಬೇಕಾಗುತ್ತದೆ.


ಅಂದರೆ ಅಮೆರಿಕದ ಆರ್ಥಿಕತೆಯ ಪುನಶ್ಚೇತನಕ್ಕೆ ನಾವೆಲ್ಲರೂ ತೆರುತ್ತಿರುವ ಬೆಲೆ ಇದು. ಕೆಲವರಿಗೆ ಹಣದುಬ್ಬರ ಹೆಚ್ಚಾಗುತ್ತಲೆ ಇರಬೇಕು. ಆಗ ಅವರಿಗೆ ಲಾಭ. ಹಣದುಬ್ಬರ ಹೆಚ್ಚಾದಂತೆ ಬಂಗಾರದ ಬೆಲೆಯೂ ಹೆಚ್ಚಾಗುತ್ತದೆ. ಬಂಗಾರದ ಮಾರುಕಟ್ಟೆಗೆ ಇದು ಬೇಕು. ಇನ್ನೊಂದು ಅಂಶವೆಂದರೆ, ಡಾಲರ್‌ನ ಬೆಲೆ ಅಮೆರಿಕದ ಆರ್ಥಿಕತೆ ಬಯಸಿದ ಹಾಗೆ ಏರುತ್ತಲೇ ಹೋಗಲಿಲ್ಲ, ಏಕೆಂದರೆ ಅಂತರರಾಷ್ಟ್ರೀಯವಾಗಿ ವಿನಿಮಯದ ಸ್ಟ್ಯಾಂಡರ್ಡ್ ಆಗಿ ಬಳಕೆಯಲ್ಲಿರುವ ಡಾಲರ್‌ನ ಸ್ಥಾನಕ್ಕಿಂತ ಬಂಗಾರವೇ ಹೆಚ್ಚು ಮೌಲ್ಯವನ್ನು ಪಡೆದುಕೊಳ್ಳುತ್ತಿತ್ತು. ಈ ಬಂಗಾರವನ್ನು ಇಳಿಸಿದರೆ ಮಾತ್ರ ಡಾಲರ್ ಏರಲು ಸಾಧ್ಯವಿದೆ ಅಂದಾಕ್ಷಣ, ಅಮೆರಿಕದ ಫೆಡರಲ್ ಬ್ಯಾಂಕ್ ತನ್ನಲ್ಲಿದ್ದ ಚಿನ್ನವನ್ನು ಹೊರಕ್ಕೆ ಬಿಡಲಾರಂಭಿಸಿತು. ಅದರ ಜೊತೆಗೆ ಇತರ ಅವಲಂಬಿತ ಬ್ಯಾಂಕ್‌ಗಳೂ ಸಹಾ. ಆರ್ಥಿಕ ಕುಸಿತವನ್ನು ಬೇಡಿಕೆ ಮತ್ತು ಸರಬರಾಜಿನ ಸರಳ ನಿಯಮದ ಪ್ರಕಾರವಾಗಲೀ, ಜನಸಾಮಾನ್ಯರ ಬದುಕಿನ ಮಟ್ಟವನ್ನು ಏರಿಸುವ ಸಮಾಜವಾದಿ ಆರ್ಥಿಕ ನಿರ್ಮಾಣದ ಮುಖಾಂತರವಾಗಲೀ ತಡೆಯುವ ಯತ್ನವನ್ನು ಮಾಡದೇ, ಮಾರುಕಟ್ಟೆ ತಂತ್ರಗಳ ಮೂಲಕ ಬಗೆಹರಿಸಿಕೊಳ್ಳುವ ಕಾರ್ಪೋರೇಟ್ ತಂತ್ರ ಇದಾಗಿದೆ.

ಇದರ ಜೊತೆಗೆ ಇನ್ನೂ ನಾಲ್ಕಾರು ಕಾರಣಗಳಿಂದ ಚಿನ್ನದ ಬೆಲೆ ಇಳಿಯುತ್ತಿದೆ. ಅಮೆರಿಕದ ಮಾರುಕಟ್ಟೆಯಲ್ಲಿ ಸರ್ಕಾರಿ ಬಾಂಡ್‌ಗಳ ವಹಿವಾಟಿನದ್ದೂ ಒಂದು ಪಾತ್ರ ಇದರಲ್ಲಿದೆ. ಹೂಡಿಕೆಯ ಹಣಕ್ಕೆ ಬಡ್ಡಿಯ ದರ ಹೆಚ್ಚು ಸಿಗುವುದಾದರೆ ಜನರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡುತ್ತಾರೆ. ಇಲ್ಲದಿದ್ದರೆ ಬಂಗಾರ ಕೊಳ್ಳುತ್ತಾರೆ. ಉದಾಹರಣೆಗೆ ಭಾರತದಲ್ಲಿ ಮಾರಾಟವಾಗುವ ಚಿನ್ನದ ಶೇ.55ರಿಂದ 60ರಷ್ಟು ಭಾಗವು ಒಡವೆಗಳಿಗೆ ಬಳಕೆಯಾದರೆ ಉಳಿದದ್ದು ಹೂಡಿಕೆ ಉದ್ದೇಶಕ್ಕೆ ಬಳಕೆಯಾಗುತ್ತಿದೆ. ಹಿಂದಿನ ಆರು ವರ್ಷಗಳಲ್ಲಿ ಚಿನ್ನದ ಮೇಲಿನ ಬಂಡವಾಳ ಹೂಡಿಕೆಯು ಶೇ.15ರಷ್ಟು ಲಾಭ ತಂದುಕೊಟ್ಟಿದೆಯೆಂದು ಹೇಳಲಾಗುತ್ತಿದೆ. ಆದರೆ ಈಗ ಬಡ್ಡಿಯ ದರವು ಮಾರುಕಟ್ಟೆಯಲ್ಲಿ ಹೆಚ್ಚು ಸಿಗುವ ರೀತಿ ಅಮೆರಿಕ ತೀರ್ಮಾನಿಸಿದ್ದರಿಂದ ಬಂಗಾರದ ಮೇಲಿನ ಹೂಡಿಕೆಯು ದಿಢೀರನೆ ಕುಸಿದಿದೆ.

2008ರಿಂದ ಚಿನ್ನದ ಬೆಲೆಯು ಮೂರು ಪಟ್ಟು ಹೆಚ್ಚಾಯಿತು. ಏಕೆಂದರೆ ಆಗಿನ (ಲೇಮನ್ ಬ್ರದರ್ಸ್ ಬ್ಯಾಂಕ್‌ನ ಕುಸಿತದಿಂದ ಆರಂಭವಾದ) ಅಮೆರಿಕದ ಆರ್ಥಿಕ ಕುಸಿತವನ್ನು ತಡೆಯಲು ಹಣದ ಪ್ರವಾಹವನ್ನು ಹರಿಸಲಾಯಿತು. ಕರೆನ್ಸಿಯ ಈ ಚಂಚಲತೆಗೆ ಎದುರಾಗಿ ಚಿನ್ನ ದೃಢವಾದ ಸರಕಿನಂತೆ ಕಂಡಿದ್ದರಿಂದ ಈ ಹೆಚ್ಚಳ ಸಂಭವಿಸಿತ್ತು. ಸೆಪ್ಟೆಂಬರ್ 2011ರಲ್ಲಿ ಅದು ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಔನ್ಸ್‌ಗೆ 1930 ಡಾಲರ್‌ಗಳಷ್ಟಿದ್ದರೆ, 20 ದಿನಗಳ ಕೆಳಗೆ 1600 ಡಾಲರ್‌ಗಳಿಗೆ ಇಳಿಯಿತು. ವಾರದ ಕೆಳಗೆ 1400 ಡಾಲರ್‌ಗಳಿಗೆ ಇಳಿದಿದೆ.


ನಾಮಬಲ ಕೂಡಿ ಬಂದಿಲ್ಲ ಎಂದು ಚೈತ್ರಳ ಹೆಸರನ್ನು ತಿರುಚಿ ಪುಟ್ಟಚೈತ್ರ ಮಾಡುವ ಪರಿಸ್ಥಿತಿಯಲ್ಲಿ ನಮ್ಮ ದೇಶವಿದೆ. ಅಂತಹ ಮದುವೆಗೂ ಜಾಗತಿಕ ಮಾರುಕಟ್ಟೆಗೂ ಎಷ್ಟು ಸಂಬಂಧವಿದೆ ನೋಡಿ. ಇಂತಹ ಸ್ಥಿತಿಯಲ್ಲಿ ನಮ್ಮ ದೇಶವು ಮಾರುಕಟ್ಟೆಯಲ್ಲಿ ಪ್ರಬಲ ಸ್ಥಾನವನ್ನು ಗಳಿಸಿಕೊಳ್ಳಬೇಕು ಎಂದು ಒಂದು ವರ್ಗ ಹಪಹಪಿಸುತ್ತಿದೆ. ಅದೂ ಸಹಾ ಅಸಾಧ್ಯವೇ ಆಗಿದೆ. ಯಾರಾದರೂ ಸೂಪರ್‌ಪವರ್ ಆದರೂ, ಚೈತ್ರ ಪುಟ್ಟಚೈತ್ರಳಾಗಬೇಕಾಗಿ ಬರುವುದು ತಪ್ಪುವುದಿಲ್ಲ. ಅವಳ ಮದುವೆ ನಿಲ್ಲುವುದೂ ತಪ್ಪಲ್ಲ. ●

ಈ ಬೆನ್ ಬೆರ್ನಾಂಕಿ ಯಾರು?



ಅಮೆರಿಕದ ಆಟ ನೋಡಿ ಹೇಗಿದೆ? ಈ ಬೆನ್ ಬೆರ್ನಾಂಕಿ ಫೆಡರಲ್ ರಿಸರ್ವ್‌ನ ಅಧ್ಯಕ್ಷನಾಗಿ ನೇಮಕಗೊಂಡಿದ್ದು 2006ರ ಫೆಬ್ರವರಿ 1ರಂದು. ಆಗ ಅಮೆರಿಕದ ಅಧ್ಯಕ್ಷ ಜಾರ್ಜ್ ಬುಷ್. ಅದಕ್ಕೆ ಮುಂಚೆ ಆತ ಬುಷ್‌ನ ಆರ್ಥಿಕ ಸಲಹೆಗಾರರ ಪರಿಷತ್ತಿನ ಅಧ್ಯಕ್ಷನಾಗಿದ್ದ. ನಂತರ ಎರಡನೇ ಅವಧಿಗೆ ಪುನರ್‌ನೇಮಕಗೊಂಡಿದ್ದು ಜನವರಿ 28, 2010ರಂದು. ಆಗ ಅಮೆರಿಕದ ಅಧ್ಯಕ್ಷ ಬರಾಕ್ ಒಬಾಮಾ. ಹಾಗಾದರೆ ಡೆಮಾಕ್ರಟಿಕ್ ಪಕ್ಷದ ಒಬಾಮ ಮತ್ತು ರಿಪಬ್ಲಿಕನ್ ಬುಷ್‌ನ ಆರ್ಥಿಕ ನೀತಿಗಳಿಗೂ ವ್ಯತ್ಯಾಸವಿಲ್ಲವೇ? ಏಕೆಂದರೆ ಫೆಡರಲ್ ಬ್ಯಾಂಕ್‌ನ ಅಧ್ಯಕ್ಷಗಿರಿ ನಮ್ಮ ರಿಸರ್ವ್ ಬ್ಯಾಂಕ್‌ನ ಗವರ್ನರ್ ಥರದ ಹುದ್ದೆಯಲ್ಲ, ಅದಕ್ಕೆ ಆರ್ಥಿಕ ನೀತಿಗಳಲ್ಲೂ, ಅಮೆರಿಕದ ಅಂತರರಾಷ್ಟ್ರೀಯ ನೀತಿಗಳಲ್ಲೂ ಪಾತ್ರವಿರುತ್ತದೆ. ಇಂತಹ ಮುಖ್ಯ ಹುದ್ದೆಯ ವ್ಯಕ್ತಿ ಒಬಾಮಾ ಆಡಳಿತ ಶುರುವಾದ ಮೇಲೆ ಎರಡನೇ ಅವಧಿಗೆ ಮುಂದುವರೆಯುತ್ತಾನೆ ಎಂದರೆ ಏನರ್ಥ? ಬಿಜೆಪಿ ಮತ್ತು ಕಾಂಗ್ರೆಸ್‌ನ ಆರ್ಥಿಕ ನೀತಿಗಳಲ್ಲಿ ಹೇಗೆ ಮೂಲಭೂತ ವ್ಯತ್ಯಾಸವಿಲ್ಲವೋ ಹಾಗೆಯೇ ಅಮೆರಿಕದಲ್ಲೂ ಇದೆ ಎಂದರ್ಥ.

ನರಭಕ್ಷಕನಾಗಿ ರೂಪಾಂತರ





ಕನ್ನಡಕ್ಕೆ ಸಂಗ್ರಹ ಅನುವಾದ: ನಡಹಳ್ಳಿ ವಸಂತ್

ಆಶ್ಚರ್ಯಕರವಾಗಿ ಮುಂದಿನ ಕೆಲವು ತಿಂಗಳು ಏನೂ ನಡೆಯಲಿಲ್ಲ. ಆಗ ಅಲ್ಲಿನ ಗ್ರಾಮಗಳಿಗೆ ಕಾಲರಾ ರೋಗ ಹಬ್ಬಿ ಕೆಲವರು ಮೃತರಾದರು. ಕಾಲರಾ ಸಾಂಕ್ರಾಮಿಕ ರೋಗವಾದ್ದರಿಂದ ಸತ್ತವರ ಶವಗಳಿಗೆ ಅಂತ್ಯಸಂಸ್ಕಾರ ಮಾಡದೆ ಕಾಡಿನಲ್ಲಿ ಎಸೆಯಲಾಯಿತು. ಈ ಶವಗಳನ್ನು ಚಿರತೆ ತಿಂದಿರುವ ಸಾಧ್ಯತೆಗಳಿದ್ದವು. ಬಹುಶಃ ಇದೇ ಕಾರಣಕ್ಕಾಗಿ ಅದು ನರಹಂತಕನಾಗಿ ಮಾರ್ಪಟ್ಟಿರಬೇಕು. ಅಲ್ಲಿಂದ ಮುಂದೆ ದುರಂತಗಳ ಸರಮಾಲೆ ಪ್ರಾರಂಭವಾಯಿತು.

ಗೆರ್ಹಟ್ಟಿಯ ಹಳ್ಳಕ್ಕೆ ನೀರು ತರಲು ಹೋದ ಬಾಲಕನೊಬ್ಬ ಹಿಂತಿರುಗದಿದ್ದಾಗ ಹೊಸ ತೊಂದರೆಗಳು ಶುರುವಾದವು. ಅವನನ್ನು ಹುಡುಕಲು ಹೋದ ತಂದೆಗೆ ನೀರು ತುಂಬಿದ್ದ ಮಡಕೆಯ ಒಡೆದ ತುಣುಕುಗಳು ಕಾಣಿಸಿದವು. ಅಲ್ಲೇ ಹುಲ್ಲಿನ ಮೇಲೆ ಹುಡುಗನ ರಕ್ತದ ಗುರುತು, ಹತ್ತಿರದ ಹಾದಿಯಲ್ಲಿ ಚಿರತೆಯ ಹೆಜ್ಜೆ ಗುರುತು ಮತ್ತು ಚಿರತೆ ಬಾಲಕನನ್ನು ಎಳೆದ ಗುರುತು ಎಲ್ಲವೂ ದಾಖಲಾಗಿತ್ತು.

ಚಿರತೆಗಳು ಹುಲಿಗಳಿಗಿಂತ ಉದ್ದ ಹಾಗೂ ಎತ್ತರಗಳಲ್ಲಿ ಕಡಿಮೆ ಇರುತ್ತವೆ. ಅಲ್ಲದೆ ಹುಲಿಗಳಷ್ಟು ಬಲಶಾಲಿಯೂ ಆಗಿರುವುದಿಲ್ಲ, ಆದ್ದರಿಂದ ತನ್ನ ಬಲಿಯನ್ನು ಎಳೆದೊಯ್ಯುತ್ತದೆ. ಹಾಗಾಗಿ ಕೊಂದ ಜಾಗದಿಂದ ಹೆಚ್ಚು ದೂರ ತೆಗೆದುಕೊಂಡು ಹೋಗದೆ ಅಲ್ಲೇ ತಿನ್ನಲು ಆರಂಭಿಸುತ್ತವೆ. ಆದರೆ ಹುಲಿಗಳು ಅಗಾಧ ಶಕ್ತಿ ಹೊಂದಿದ್ದು ತಮ್ಮ ಬಲಿಯನ್ನು ಕುತ್ತಿಗೆಯಿಂದ ಕಚ್ಚಿ ರೊಯ್ಯನೆ ತಿರುಗಿಸಿ ಬೆನ್ನಿನ ಮೇಲೆ ಹಾಕಿಕೊಂಡು ಬಹಳ ದೂರ ನಡೆಯುತ್ತವೆ. ಇದೇ ಕಾರಣಕ್ಕಾಗಿ ನರಹಂತಕ ಹುಲಿಗಳು ಮನುಷ್ಯರನ್ನು ಕೊಂದಾಗ ಅವರ ಅವಶೇಷಗಳು ಸಾಮಾನ್ಯವಾಗಿ ಸಿಗುವುದಿಲ್ಲ.

ಮೇಲಿನ ಘಟನೆಯಲ್ಲಿ ಈ ಬಾಲಕನ ತಂದೆ ಕೆಲವು ಸಹಚರರೊಂದಿಗೆ ದೊಣ್ಣೆ ಮತ್ತು ಕಲ್ಲುಗಳನ್ನು ಹಿಡಿದು ಚಿರತೆಯನ್ನು ಹುಡುಕಲು ಹೊರಟರು. ದೇಹವನ್ನು ಎಳೆದ ಗುರುತನ್ನೇ ಹಿಡಿದ ಸ್ವಲ್ಪವೇ ಮುಂದೆ ಹೋದಾಗ ಬಾಲಕನ ಶವದ ಅವಶೇಷಗಳು ಕಂಡುಬಂದವು.

ಇದೇ ನರಭಕ್ಷಕ ಚಿರತೆಯೇ?

ಅವತ್ತಿನಿಂದ ಸುತ್ತಲಿನ ಹಳ್ಳಿಯ ಜನ ಕಾಡಿಗೆ ಹೋಗುವಾಗ ಮೂರ್ನಾಲ್ಕು ಜನರು ಒಟ್ಟಾಗಿ ಕತ್ತಿ, ದೊಣ್ಣೆ ಮತ್ತಿತರ ಆಯುಧಗಳನ್ನು ಹಿಡಿದು ಹೋಗಲಾರಂಭಿಸಿದರು. ಸುದ್ದಿ ಎಲ್ಲೆಡೆ ಹಬ್ಬಿ ಸುತ್ತಮುತ್ತಲಿನ ಗ್ರಾಮದ ಜನರೆಲ್ಲಾ ನರಹಂತಕ ಚಿರತೆಯ ಹುಡುಕಾಟದಲ್ಲಿದ್ದರು. ಗ್ರಾಮಗಳ ಹೆಚ್ಚಿನ ಜನ ಈ ಚಿರತೆಯನ್ನು ನೋಡಿದ್ದರೂ, ಇದೇ ನರಹಂತಕನಿರಬಹುದೆಂದು ಅನುಮಾನಿಸಲು ಕಾರಣಗಳಿರಲಿಲ್ಲ. ಬದಲಾಗಿ ದಾರಿಹೋಕನಂತೆ ಬಂದುಹೋದ ಅಥವಾ ಹಸಿವಿನಿಂದ ಸಾಯುವ ಹಂತದಲ್ಲಿರುವ ಬೇರೆ ಯಾವುದೋ ಚಿರತೆಯೇ ಇಬ್ಬರ ಸಾವಿಗೆ ಕಾರಣವಾಗಿರಬೇಕೆಂದುಕೊಂಡರು. ಇನ್ನೂ ಕೆಲವರು ಕಾಲರಾದಿಂದ ಸತ್ತವರ ಮಾಂಸವನ್ನು ತಿಂದಿದಕ್ಕಾಗಿ ಹುಚ್ಚು ಹಿಡಿದ ಯಾವುದೋ ಚಿರತೆ ಇರಬೇಕೆಂದು ಹೇಳಿದರು! ನರಹಂತಕ ಚಿರತೆಯ ಬಗೆಗೆ ಇಲ್ಲಿನ ಜನ ಕೇಳಿಯೇ ಇರಲಿಲ್ಲ.

ಚಿರತೆ ತನ್ನ ಮೂರನೇ ಬಲಿಯನ್ನು ತೆಗೆದುಕೊಂಡಿತು. ಈ ಬಾರಿ ಬಾವಿಯಲ್ಲಿ ಮಗುವನ್ನು ಸ್ನಾನ ಮಾಡಿಸಿಕೊಂಡು ಹಿಂತಿರುಗುತ್ತಿದ್ದ ಹೆಂಗಸೊಬ್ಬಳನ್ನು ಅದು ಕೊಂದು ಹತ್ತಿರದ ಪೊದೆಯೊಳಗೆ ಎಳೆದೊಯ್ದಿತ್ತು, ಬದುಕಿ ಉಳಿದಿದ್ದ ಮಗುವಿನ ಅಳುವಿನಿಂದ ಎಚ್ಚರಗೊಂಡ ಊರಿನ ಜನ ಹುಡುಕುವಷ್ಟರಲ್ಲಿ ಎಲ್ಲಾ ಮುಗಿದು ಹೋಗಿತ್ತು. ಇದರ ನಂತರ ಹಳ್ಳಿಯ ಜನಗಳ ಆತಂಕ ಹೆಚ್ಚಾಗಿ ಕಾಡಿನಲ್ಲಿನ ಅವರ ಕಾನೂನುಬಾಹಿರ ಚಟುವಟಿಕೆಗಳೆಲ್ಲಾ ನಿಂತುಹೋದವು.

ನಾಲ್ಕನೇ ಬಲಿ

ಆಂಚೆಟ್ಟಿ ಎಂಬ ಗ್ರಾಮದಲ್ಲಿ ನಾನು ಸ್ವಲ್ಪ ಜಮೀನನ್ನು ಹೊಂದಿದ್ದು ಅದನ್ನು ಮುಫತ್ತಾಗಿ ನಾರಾಯಣ ಎಂಬವನೊಬ್ಬ ಸಾಗುವಳಿ ಮಾಡಿಕೊಂಡಿದ್ದ. ಆ ಊರಿನ ಪಟೇಲ ನಾರಾಯಣನ ಮೂಲಕ ನನಗೆ ನರಹಂತಕನನ್ನು ಬೇಟೆಯಾಡಲು ಬರಬೇಕೆಂದು ಬೇಡಿಕೆ ಕಳಿಸಿದ. ನನಗೆ ಇತರೆ ತುರ್ತು ಕೆಲಸಗಳಿದ್ದುದರಿಂದ ಒಂದು ವಾರದ ನಂತರ ಬರುವುದಾಗಿ ತಿಳಿಸಿದೆ.

ಹುಲಿಗಳು ಸಾಮಾನ್ಯವಾಗಿ ತುಂಬಾ ಧೈರ್ಯಶಾಲಿಗಳಾದ್ದರಿಂದ ಹಾಡುಹಗಲೇ ನರಬೇಟೆಯಾಡುತ್ತವೆ. ಆದರೆ ಚಿರತೆಗಳು ಮನುಷ್ಯರಿಗೆ ಹೆದರುವುದರಿಂದ ಸಾಮಾನ್ಯವಾಗಿ ರಾತ್ರಿಯ ಹೊತ್ತಿನಲ್ಲಿ ಮಾತ್ರ ಆಕ್ರಮಣ ಮಾಡುತ್ತವೆ. ಆಶ್ಚರ್ಯವೆಂದರೆ ಈ ಚಿರತೆ ಮಾತ್ರ ತನ್ನ ಬಲಿಗಳನ್ನು ಹಗಲಿನಲ್ಲೇ ತೆಗೆದುಕೊಂಡಿತ್ತು.

ನಾನು ಗೆರ್ಹಟ್ಟಿಗೆ ಬರುವ ಹಿಂದಿನ ರಾತ್ರಿ ಚಿರತೆ ತನ್ನ ನಾಲ್ಕನೇ ಬಲಿಯನ್ನು ತೆಗೆದುಕೊಂಡಿತ್ತು, ನಾನು ಹಿಂದೆ ಹೇಳಿದ ಕಥೆಯಲ್ಲಿ ಬರುವ ವಸತಿಗೃಹದ ಮೇಟಿಯ ಮಗ ಬೆಳಗಿನ ಜಾವದಲ್ಲಿ ಚಿರತೆಗೆ ಬಲಿಯಾಗಿದ್ದ.

ಕುರ್ಚಿ ಮತ್ತು ಬಾತ್ ಟಬ್ ಕದ್ದಿದ್ದೇನೆಂದು ನನ್ನ ಮೇಲೆ ಸುಳ್ಳು ಆಪಾದನೆ ಹೊರಿಸಲು ಯತ್ನಿಸಿದ ಘಟನೆಯ ನಂತರ ಮೇಟಿ ತನ್ನ ಕೆಲಸವನ್ನು ಕಳೆದುಕೊಂಡಿದ್ದ. ನಂತರ ಜೀವನೋಪಾಯಕ್ಕಾಗಿ ಅರಣ್ಯದ ವಸ್ತುಗಳನ್ನು ಸಾರ್ವಜನಿಕ ಹರಾಜಿನಲ್ಲಿ ಕೊಂಡು ಮಾರುವ ವ್ಯಾಪಾರದಲ್ಲಿ ತೊಡಗಿದ್ದ.



ಅವನ ಮಗನೂ ಈ ಕೆಲಸದಲ್ಲಿ ತಂದೆಗೆ ಸಹಾಯ ಮಾಡುತ್ತಿದ್ದ. ಅಂದು ಹತ್ತಿರದ ಪೆರಿಯಮಲ್ಲೈ ಎನ್ನುವ ಬೆಟ್ಟದಲ್ಲಿ ಸಿಗುವ ಕಾಡು ಜೇನನ್ನು ಸಂಗ್ರಹಿಸಲು ಆತ ಗೆರ್ಹಟ್ಟಿಗೆ ಬಂದಿದ್ದ. ಸುಮಾರು ಮುನ್ನೂರು ರೂಪಾಯಿ ಬೆಲೆ ಬಾಳುವಷ್ಟು ಜೇನುತುಪ್ಪವನ್ನು ಸಂಗ್ರಹಿಸಿದ್ದಕ್ಕಾಗಿ ಆತ ಖುಷಿಯಿಂದ ಇದ್ದ. ಆದರೆ ಆ ಪ್ರದೇಶದಲ್ಲಿ ಕಾಡಾನೆಗಳ ಗುಂಪೊಂದು ಸಂಚರಿಸುತ್ತಿದೆ ಎಂದು ಸುದ್ದಿ ಬಂದಿದ್ದರಿಂದ ತನ್ನ ಅಮೂಲ್ಯವಾದ ಜೇನುತುಪ್ಪವನ್ನು ಕಾಡಾನೆಗಳಿಗೆ ಒಪ್ಪಿಸಲು ಇಷ್ಟಪಡದೆ ಗೆರ್ಹಟ್ಟಿಯಲ್ಲೇ ರಾತ್ರಿ ಕಳೆಯಲು ನಿರ್ಧರಿಸಿದ. ಅವನ ತಂದೆ ಮೇಟಿಯಾಗಿದ್ದ ವಸತಿಗೃಹದ ಬಾಗಿಲು ಹಾಕಿದ್ದರಿಂದ ಅದರ ಬಾಗಿಲಿಲ್ಲದ ಗರಾಜಿನಲ್ಲಿ ತನ್ನ ಜೇನುತುಪ್ಪದೊಂದಿಗೆ ರಾತ್ರಿ ಕಳೆಯುವ ಯೋಜನೆ ಹಾಕಿದ.

ಬೆಳಗಿನ ಜಾವದಲ್ಲಿ ಗೆರ್ಹಟ್ಟಿಯ ಹಾಡಿಯ ಜನಗಳಿಗೆ ಅವನ ಕೂಗಾಟ ಕೇಳಿಸಿತು. ನಿರಾಯುಧರಾಗಿದ್ದ ಅವರು ಭಯದಿಂದ ಮನೆಯ ಬಾಗಿಲನ್ನು ಗಟ್ಟಿಯಾಗಿ ಹಾಕಿಕೊಂಡು ಬೆಳಗಾಗುವವರೆಗೆ ಕಾದರು. ಬೆಳಗಾದ ಮೇಲೆ ಜನ ಗರಾಜಿಗೆ ಹೋದಾಗ ಆ ವ್ಯಕ್ತಿ ಅಲ್ಲಿರಲಿಲ್ಲ. ನೆಲದ ಮೇಲೆ ರಕ್ತದ ಕಲೆ, ಹೋರಾಡಿದ ಗುರುತು, ಭಾರವಾದ ವಸ್ತುವನ್ನು ಹತ್ತಿರದ ಕಾಡಿಗೆ ಎಳೆದುಕೊಂಡು ಹೋದ ಗುರುತು, ಇವೆಲ್ಲವೂ ಅಲ್ಲಿನ ಕಥೆಯನ್ನು ಹೇಳಿದವು. ಚಿರತೆ ತನ್ನ ಬಲಿಯನ್ನು ಹತ್ತಿರದಲ್ಲಿಯೇ ತಿಂದು ಮುಗಿಸಿತ್ತು, ತಲೆ ಕೈಕಾಲುಗಳನ್ನು ಮಾತ್ರ ನಂತರದ ಭೋಜನಕ್ಕೆ ಇಟ್ಟುಕೊಂಡು, ಮಾಂಸಲ ಭಾಗವನ್ನು ಸಂಪೂರ್ಣ ತಿಂದಿರಬೇಕಾದರೆ ಚಿರತೆ ಭಾರೀ ಹಸಿದಿರಬೇಕು ಎನ್ನಿಸಿತು. ಅದ ಹೆಜ್ಜೆಗುರುತುಗಳಿಂದ ಇದು ಸಾಮಾನ್ಯ ಗಾತ್ರದ ಪ್ರಾಣಿ ಎನ್ನುವುದು ತಿಳಿಯುತ್ತಿ

ಪೊಲೀಸರ ಕಷ್ಟಗಳು!

ನಾನು ಬೆಳಗ್ಗೆ ಹತ್ತು ಗಂಟೆಗೆ ಪೊಲೀಸರು ಬರುವ ಮುನ್ನವೇ ಬಂದಿಳಿ ನಂತರ ಬಂದ ಪೊಲೀಸರು ತಮ್ಮ ಮಾಮೂಲಿನ ನಿರರ್ಥಕ ಪ್ರಶ್ನಾವಳಿಗಳ ಶುರುಮಾಡಿದರು. ನಾನೇಕೆ ಅಲ್ಲಿ ಬಂದೆ, ನನ್ನ ಹತ್ತಿರ ಗನ್ನಿನ, ಕಾರಿ ಚಾಲಕನ ಲೈಸನ್ಸ್ ಇದೆಯೇ- ಹೀಗೆ ಚಿರತೆಗೆ ಸಂಬಂಧಪಡದ ಎ ಪ್ರಶ್ನೆಗಳನ್ನೂ ಕೇಳಿದರು.

ಅದೇ ಮಧ್ಯಾಹ್ನ ಅಥವಾ ರಾತ್ರಿ ಚಿರತೆ ಉಳಿದದ್ದನ್ನು ತಿನ್ನಲು ಹಿಂತಿರುಗು ಸಾಧ್ಯತೆ ಇತ್ತು, ಹಾಗಾಗಿ ಎಲ್ಲಾ ಅವಶೇಷಗಳೊಡನೆ ನನ್ನೊಬ್ಬನನ್ನೇ ಬಿಟ್ಟ ತೆರಳಲು ನಾನು ಎಲ್ಲರಿಗೂ ಸೂಚಿಸಿದೆ. ಆದರೆ ಸಬ್‌ಇನ್ಸ್ಪೆಕ್ಟರ್ ಬದಲಾ ಬಂದಿದ್ದ ದಫೇದಾರ್ ನನ್ನ ಸಲಹೆಯನ್ನು ಸಾರಾಸಗಟಾಗಿ ತಿರಸ್ಕರಿಸಿದ. ತ ಬಾಸ್ ಇಂದು ಸಂಜೆ ಅಥವಾ ನಾಳೆ ಬೆಳಗ್ಗೆ ಸ್ಥಳಪರಿಶೀಲ ಮಾಡಬಹುದಾಗಿದ್ದುದರಿಂದ ಅಲ್ಲಿಯವರೆಗೆ ತನ್ನ ಜೊತೆ ಬಂದಿದ್ದ ಇಬ್ಬರ ಪೊಲೀಸ್ ಪೇದೆಗಳನ್ನು ಅಲ್ಲೇ ಕಾಯಲು ಬಿಟ್ಟು ಹೋಗುವುದಾಗಿ ಅವನ ಹೇಳಿದ.

ಆದರೆ ಚಿರತೆಯ ಭಯದಿಂದ ಆ ಪೇದೆಗಳು ಅವನ ಸಲಹೆಯನ ತಿರಸ್ಕರಿಸಿದರು. ಒಬ್ಬ ತಾನಿನ್ನೂ ಬೆಳಗಿನ ತಿಂಡಿಯನ್ನೇ ತಿಂದಿಲ್ಲ, ಹಾಗಾ ನಾಳೆ ಬೆಳಗಿನವರೆಗೆ ಹಸಿದುಕೊಂಡಿರಲು ಸಾಧ್ಯವಿಲ್ಲ ಎಂದು ಹೇಳಿದರ ಮತ್ತೊಬ್ಬ ತನಗೆ ಬಹಳ ನೆಗಡಿಯಾಗಿದೆ ಎಂದು ನೆಪ ಹೇಳಿದ. ನೆಗಡಿಯಾದವನ ಏಕೆ ಕೆಮ್ಮುತ್ತಲೇ ಇಲ್ಲ ಎಂದು ದಫೇದಾರ್ ಹಂಗಿಸಿದ ಕೂಡಲೇ ಆ ಪೇ ನಿರಂತರವಾಗಿ ಕೆಮ್ಮತೊಡಗಿದ! ಇದಾವುದನ್ನೂ ಲೆಕ್ಕಿಸದ ದಫೇದಾರ್, ತ ಆಜ್ಞೆಯನ್ನು ಬದಲಾಯಿಸಲು ಸಾಧ್ಯವಿಲ್ಲ ಎನ್ನುತ ಮೋಟಾರ್ ಸೈಕಲ್ ಹತ್ತಿ ಆಂಚೆಟ್ಟಿಗೆ ಹೊರಟುಹೋದ ಕಂಗಾಲಾದ ಪೇದೆಗಳು ಒಬ್ಬರನ್ನೊಬ್ಬರ ನೋಡಿಕೊಂಡಿದ್ದಲ್ಲದೆ ನನ್ನತ್ತ ದೃಷ್ಟಿ ಹಾಯಿಸಿದರು. ನಾನ ಅವರಿಗೆ ಕಣ್ಣಿನಲ್ಲೇ ಧೈರ್ಯ ತುಂಬುತ್ತಾ ಹತ್ತಿರದ ಹಾಡಿ ಹೋಗುವಂತೆ ಸಂಜ್ಞೆಮಾಡಿದ. ಆ ಹೆಣದ ಭಯಾನ ಕಣ್ಣುಗಳಿಂದ ದೂರಹೋಗಲು ಬಯಸಿದ್ದ ಅವರು ಅಷ್ಟೆ ಸಾಕು ಎಂಬಂತೆ ಅಲ್ಲಿಂದ ಕಾಲುಕಿತ್ತರು. ನನ ಸರಂಜಾಮುಗಳೊಂದಿಗೆ ನಾನೊಬ್ಬನೇ ಅಲ್ಲಿ ಉಳಿದೆ.

ಬೇಟೆಗೆ ತಯಾರಿ

ಚಿರತೆಯ ಬರುವನ್ನು ಕಾಯುತ್ತಾ ಕೂರಲು ಮರೆಯುನ್ನು ಹುಡುಕುವುದು ನನ್ನ ಮೊದಲ ಆದ್ಯತೆಯಾಗಿತ್ತು, ಇದು ಸಾಮಾನ್ಯವಾಗಿ ಎಲ್ಲ ಬೇಟೆಗಾರರ ಸಮಸ್ಯೆಯಾಗಿರುತ್ತದೆ. ಹುಲಿ ಚಿರತೆಗಳೆಲ್ಲಾ ಯಾವಾಗಲೂ ತಮ್ಮ ಬಲಿಯನ್ನು ವಿಶಾಲವಾದ ಬಯಲಿನಲ್ಲಿ ಅಥವಾ ಮರದ ಕೆಳಗಡೆ ತಿನ್ನದೆ, ಒತ್ತಾದ ಪೊದೆಗಳನ್ನು ಆಯ್ಕೆ ಮಾಡಿಕೊಳ್ಳುತ್ತವ ಇದರಿಂದ ಯಾವುದೇ ಆತಂಕವಿಲ್ಲದೆ ತಮ್ಮ ಭೋಜನವನ್ನು ಮಾಡಲು ಸಾಧ್ಯವಾಗುವುದಲ್ಲದೆ, ಅವಶೇಷಗಳನ್ನು ಹುದುಗಿಸಿಡುವುದೂ ಸುಲಭವಾಗುತ್ತದ ಇಲ್ಲೂ ಕೂಡ ಚಿರತೆ ತನ್ನ ಬಲಿಯನ್ನು ಎರಡು ಲಂಟಾನ ಪೊದೆಗ ನಡುವೆ ಎಳೆದು ತಂದು ತಿಂದಿತ್ತು. ಹತ್ತಿರದಲ್ಲಿ ಯಾವುದೇ ಮರೆಯನ ರಚಿಸಿದರೂ ಅದು ಚಿರತೆಗೆ ಎಚ್ಚರಿಕೆಯ ಗಂಟೆಯಾಗುತ್ತಿತ್ತು. ಹಾಗಾಗಿ ಆ ಸ್ಥಳದಿಂದ ಚಿರತೆಯನ್ನು ಬೇಟೆಯಾಡುವುದು ಸಾಧ್ಯವೇ ಇರಲಿಲ್ಲ.

ಬಹಳ ಯೋಚಿಸಿದ ನಂತರ ನಾನೊಂದು ಕ್ಲಿಷ್ಟವಾದ ಯೋಜನೆಯನ ಹಾಕಿದೆ. ಮೇಟಿಯ ಮಗನ ಶವವಿದ್ದ ಉತ್ತರಕ್ಕೆ ವಸತಿಗೃಹವಿದ್ದರೆ ಪೂರ್ವದಲ ಬಯಲುಪ್ರದೇಶವಿದ್ದು, ಹತ್ತಿರದಲ್ಲೇ ಗೆರ್ಹಟ್ಟಿಯ ಹಾಡಿಯಿತ್ತು. ಪಶ್ಚಿಮಕ ಅಷ್ಟೇನು ದಟ್ಟವಲ್ಲದ ಪೊದೆಗಳಿದ್ದು ಜುಂಗಲ್‌ಪಾಳ್ಯಕ್ಕೆ ಹೋಗುವ ರಸ್ತೆಯಿತು ದಕ್ಷಿಣಕ್ಕೆ ಒತ್ತಾದ ಪೊದೆಗಳಿದ್ದು ಅದು ಒಂದು ಸಣ್ಣ ಗುಡ್ಡದಿಂದ ಸುತ್ತುವರೆದಿತ್ತು ಬೇರೆ ಯಾವ ದಿಕ್ಕಿನಿಂದಲೂ ಈ ನರಹಂತಕ ಬಂದುದಕ್ಕೆ ಸಾಕ್ಷಿಗಳಿರಲಿಲ್ಲ ಹಾಗಾಗಿ ಅದು ದಕ್ಷಿಣದ ಗುಡ್ಡದ ಕಡೆಯಿಂದ ಬಂದು ಹಾಗೆಯೆ ಹಿಂತಿರುಗಿರಬೇಕು ಎಂದು ಊಹಿಸಿ ಒಂದು ಯೋಜನೆ ರೂಪಿಸಿದೆ.

(ಮುಂದುವರೆಯುವುದು

ಸಂಶೋಧನೆಯೇ...ರೋಹಿಣಿ

14

ಆಗಿ ಒಂದು ವರ್ಷ ಮನೆಯಲ್ಲಿದ್ದೆ. ನರ್ಸಿಂಗ್ ಮಾಡಬೇಕೆಂದು ನನ್ನ ಆಸೆಯಾಗಿತ್ತು, ನಮ್ಮ ತಂದೆ ನರ್ಸಿಂಗ್‌ಗೆ ಒಪ್ಪಲಿಲ್ಲ, ಟಿಸಿಎಚ್ ಟ್ರೈನಿಂಗ್ ಮಾಡಿದೆ. 1963 ಮಾರ್ಚ್‌ನಲ್ಲಿ ನೇಮಕಾತಿಯೂ ಆಯಿತು. ನಾನು ಕನ್ನಡ ಪಂಡಿತ್ ಮಾಡುತ್ತಿದ್ದಾಗ ನನ್ನನ್ನು 'ಬಂದರು' ಶಾಲೆಗೆ ವರ್ಗಾವಣೆ ಮಾಡಿದರು. ಆಮೇಲೆ ಏಳು ಕಡೆಗೆ ಮೇಲಿಂದ ಮೇಲೆ ವರ್ಗಾವಣೆ ಮಾಡಿದರು. ಕಮಿಷನರ್‌ಗೆ ರಿಕ್ವೆಸ್ಟ್ ಮಾಡಲು ಹೋದರೆ ಬಂಗ್ಲೆಗೆ ಬಾ ಎಂದು ಕರೆದರು. ಬೆಂಬಲಕ್ಕೆ ಸ್ನೇಹಿತೆಯೊಬ್ಬರನ್ನು ಬಿಟ್ಟರೆ ಯಾರೂ ಇರಲಿಲ್ಲ, ಕಡೆಗೆ ಸರ್ಕಾರಿ ಕೆಲಸವೇ ಬೇಡವೆಂದು ರಾಜೀನಾಮೆ ಕೊಟ್ಟೆ. ನನಗಿದ್ದ ಏಕೈಕ ಧೈರ್ಯವೆಂದರೆ ದಿವಸಕ್ಕೆ ಎರಡು ಸಾವಿರ ಬೀಡಿ ಕಟ್ಟಿ ಬದುಕಬಲ್ಲೆ ಎಂಬ ಆತ್ಮವಿಶ್ವಾಸ. ಆದರೆ ಆಮೇಲೆ ಅನುದಾನಿತ ಶಾಲೆಯಲ್ಲಿ ಕೆಲಸ ಸಿಕ್ಕಿತು. ನಾನು ಮೊದಮೊದಲು ಮಕ್ಕಳನ್ನು ತಿದ್ದಬೇಕೆಂದು ಯೋಚಿಸಿದವಳು. ನಂತರ ನಾನೇ ತಿದ್ದಿಕೊಳ್ಳಬೇಕೆಂದು ನನ್ನನ್ನು ನಾನೇ ತಿದ್ದಿಕೊಳ್ಳತೊಡಗಿದೆ. ನಾನು ಸಂಗೀತ ಕಲಿತಿದ್ದೆ. ಆದರೆ ನಮ್ಮ ತಂದೆ ಹಾಡಲು ಬಿಡಲಿಲ್ಲ. ಆದರೆ ಆ ಸಂಗೀತವನ್ನು ಶಾಲೆಯಲ್ಲಿ ಪ್ರಯೋಗಿಸಿದೆ. ಮಕ್ಕಳನ್ನು ತರಗತಿಯಿಂದ ಹೊರಗೆ ಕರೆದೊಯ್ದು ಪಾಠ ಮಾಡುತ್ತಿದ್ದೆ. ದುರದೃಷ್ಟ ನೋಡಿ, ಶಿಕ್ಷಕಿ ಚೆನ್ನಾಗಿ ಪಾಠ ಮಾಡುವ ಹಾಗಿಲ್ಲ, ಚೆನ್ನಾಗಿ ಪಾಠ ಮಾಡಿದರೆ ಕಿರುಕುಳ. ಒಂದು ಪುಸ್ತಕ ಬರೆದರೆ, "ಇವಳಿಗೆ ಗಂಡ-ಮಕ್ಕಳು ಇಲ್ಲ, ಮತ್ತೇನು ಮಾಡುತ್ತಾಳೆ" ಎಂಬ ಕೊಂಕು. ಮಾನಸಿಕ ಹಿಂಸೆ. ನಾನು ನಿವೃತ್ತಳಾಗುವ ತನಕವೂ ಅಡ್ಡಿ ಆತಂಕಗಳು ಇದ್ದವು. ಹಿಂದೆಯೆಲ್ಲ ಔದ್ಯೋಗಿಕ ಪರಿಸರ ಚೆನ್ನಾಗಿತ್ತು ಎಂದರೆ ಅದೊಂದು ದೊಡ್ಡ ಸುಳ್ಳು ಅಷ್ಟೇ. ಈಗಲೂ ಹೊಸ ಆವಿಷ್ಕಾರಗಳನ್ನು ಒಪ್ಪದವರು ಹಳೆಯ ಶಿಕ್ಷಕರೇ. ಪಾಲಕರು ಕೂಡ ಬಹುತೇಕ ಹಳೆಯದಕ್ಕೆ ಬದ್ಧರು. ಮಕ್ಕಳು ಆಟವಾಡುವುದನ್ನು ತಂದೆ-ತಾಯಿಗೆ ಸಹಿಸಿಕೊಳ್ಳಲು ಆಗದಿದ್ದರೆ ನಿಜವಾದ ಕಲಿಕೆ ನಡೆಯಲು ಹೇಗೆ ಸಾಧ್ಯ. ಹೊಸದನ್ನು ಸ್ವೀಕರಿಸಬೇಕು. ಸಾಹಿತ್ಯದಲ್ಲಿಯೂ ಕೂಡ.

* ಹೊಸ ತಲೆಮಾರಿನ ಸಾಹಿತ್ಯದ ಬಗ್ಗೆ ಏನು ಹೇಳುತ್ತೀರಿ?

- ಹೊಸ ಬರಹಗಾರರು ಚೆನ್ನಾಗಿ ಬರೆಯುತ್ತಾರೆ. ನನಗೆ ಊಹಿಸಿಕೊಳ್ಳಲು ಕಷ್ಟವಾಗುವಷ್ಟು ಹೊಸ ಚಿಂತನೆಗಳನ್ನು ಕೊಡುತ್ತಾರೆ. ಆದರೆ ಒಬ್ಬ ಲೇಖಕ/ಲೇಖಕಿಗೆ ತನ್ನನ್ನು ತಾನೇ ಮೌಲ್ಯಮಾಪನಕ್ಕೆ ಒಳಪಡಿಸಿಕೊಳ್ಳುವ ಶಕ್ತಿ ಇರಬೇಕು. 1968 ರಿಂದ ನಾನು ಬರೆದ ಕಥೆಗಳು ಪ್ರಕಟವಾಗಿವೆ. ಆದರೆ ನಾನು ಬರೆದದ್ದು ಸರಿ ಇಲ್ಲ ಎಂದು ನನಗೆ ಅನಿಸುತ್ತಿತ್ತು. ಬಹುಶಃ ಕಾರ್ಯರೂಪದಲ್ಲಿ ಮಾಡಲು ಆಗದೆ ಇದ್ದುದಕ್ಕೆ ಒಂದು ಹೊರದಾರಿಯಾಗಿ ಬರಹವನ್ನು ನಾನು ಅವಲಂಬಿಸಿದ್ದೂ ಅದಕ್ಕೆ ಕಾರಣವಿರಬಹುದು. ಆದರೆ ಈಗಲೂ ನನಗೆ ನಾನು ಇಂಟರ್‌ವ್ಯೂ ತೆಗೆದುಕೊಳ್ಳಲು ಬೇಕಾದಷ್ಟು ಅರ್ಹತೆ ಇರುವ ಲೇಖಕಿ ಎಂದು ನನಗನಿಸುತ್ತಿಲ್ಲ, ನಿಮ್ಮ ಮೇಲಿನ ವೈಯಕ್ತಿಕ ಪ್ರೀತಿಯಿಂದ ಒಪ್ಪಿಕೊಂಡೆ ಅಷ್ಟೆ.

* ನಿಮ್ಮ ತಂದೆ-ತಾಯಿಯ ಬಗ್ಗೆ 'ಸಂಕಲನ'ದಲ್ಲಿ ಬರೆದಾಗ, 'ಎರಡು ತಲೆಮಾರು' ಪುಸ್ತಕದಲ್ಲಿ ಬರೆದಾ ನಿಮ್ಮ ವೈಯಕ್ತಿಕ ವಿವರಗಳ ಬಗ್ಗೆ ಅಲ್ಪಸ್ವಲ ಹೇಳಿಕೊಂಡಿದ್ದಿರಿ. ಈಗ ಇಲ್ಲಿಯೂ ಸ್ವಲ್ಪ ಹೇಳಿ. ಹಾಗೆಯೆ ನಿಮಗೆ ಬಂದಿರುವ ಪ್ರಶಸ್ತಿ ಪುರಸ್ಕಾರ ಇತ್ಯಾದಿ....

- ಅದೆಲ್ಲ ಅಗತ್ಯವಿಲ್ಲ, ಓದುಗರಿಗೆ ಬೇಕಾದ್ದು ನ ವಿಚಾರ. ಇಂಟರ್‌ವ್ಯೂ ಅನ್ನು ಅಷ್ಟಕ ಸೀಮಿತಗೊಳಿಸಿಕೊಳ್ಳೋಣ. ಇನ್ನು ಪ್ರಶಸ್ತಿ-ಸನ್ಮಾನಗ ಕಾಯಿಲೆ ಇದುವರೆಗೆ ಹತ್ತಿಕೊಂಡಿಲ್ಲ, ನೀವು ಅದ ವೈರಸ್ಸನ್ನು ಬಿಡಬೇಡಿ. ಅಂತಹ ಕಾಯಿಲೆಗಳು ಬಾರ ಹಾಗೆ ನೋಡಿಕೊಳ್ಳಬೇಕಾದವರೇ ನೀವುಗಳು. ನನ್ನ ಪಾಡಿ ಏನಾದರೂ ಮಾಡಿಕೊಂಡಿರಲು ಬಿಟ್ಟುಬಿಡಿ. ಅಷ್ಟಕ ನನಗೀಗ ಎಪ್ಪತ್ತೇ ವರ್ಷ ವಯಸ್ಸು. ಇನ್ನೂ ಬಹ ವರ್ಷಗಳ ಕಾಲ ನಿಮ್ಮ ಜೊತೆಗೆ ಇರ್ಲಿಕ್ಕಿದೆ.

* ಹೋಗ್ಲಿಬಿಡಿ, ನಿಮ್ಮ ಫೋನ್ ನಂಬರಾದ್ರೂ...

- 9480250244

“ನೀವು ಹೋರಾಡಿರೋದೆ ಒಕ್ಕಲಿಗರ ವಿರುದ್ಧ ಅಲ್ಲವ ಸಾರ್”

ಥುತ್ತೇರಿ

▸ ಯಾಹೂ

ಎಲ್ಲ ಜನಾಂಗದವರ ಹೆಗಲ ಮೇಲೆ ಕೈ ಹಾಕಿ, ರ್” ಎಂದು ಸಂಬೋಧಿಸುವ ಕುಮಾರಣ್ಣನವರು ಗರನ್ನು ಕಡೆಗಣಿಸಿದರೆ, ಅಗೌರವ ತೋರಿದರೆ ನಾನು ಂಗಿಯಾಗಿ ಹೋರಾಡುತ್ತೇನೆ’’ ಎಂದು ಸಿಬಿಟ್ಟರಂತಲ್ಲಾ, ಇಂತಹ ಸ್ಥಿತಿಗೆ ತುತ್ತಾಗಲು ವೇನೆಂದು ಕೇಳಲು ಫೋನ್ ಮಾಡಲಾಗಿ ರಿಂಗಾಯ್ತು. ಂಗ್ ಟೋನ್: “ನಾ ಬೆಂಕಿಯಂತೆ... ನೀ ಗಾಳಿಯಂತೆ. ಲೋಡಿ ಮುಂದೇ ವೈರಿ ಉಳಿಯುವನೆ. ನಾ...”

ಹಲೋ ಯಾರ್ರಿ?”

ನಾನು ಸಾರ್ ಯಾಹು.”

ಆಮೇಲೆ ಫೋನ್ ಮಾಡ್ರಿ ಯಾಹು.”

ಯಾಕ್ ಸಾರ್? ಡಿ.ಕೆ. ಶಿವಕುಮಾರ್ ಜೊತೆ ಡ್ತಾಯಿದ್ದಿರಾ?”

ಯಾಕ್ರಿ ಅಂಕೇಳ್ತಿರಿ?”

ಅಲ್ಲ ಸಾರ್, ಮೊನ್ನೆ ನಡೆದ ಚುನಾವಣೆವರಿಗೂ ಮುಂಗುಸಿ ತರ ಬುಸುಗುಟ್ತಾಯಿದ್ರಿ. ಈಗ ದ್ರಿ ಅಂತ ಕೇಳಿದೆ. ಸಾಮಾನ್ಯವಾಗಿ ಒಂದಾದಾಗ ಕ್ಕೆ ಮಾತಾಡ್ತರೆ ಅದ್ಕೆ ಅಂಗಂದೆ.”


ಡಿ.ಕೆ. ಶಿವಕುಮಾರ್ ಜೊತೆ ನಾನು ಗಂಟೆಗಟ್ಲೆ ನಾಡ್ತಕಂತ ವಿಷಯ ಏನೂ ಇಲ್ಲ ಕಂಡ್ರಿ. ಾಗಿರೊ ಅನ್ಯಾಯನ ಅವರ ಗಮನಕ್ಕೆ ತಂದು ಈ ಸರಕಾರದಲ್ಲಿದ್ರೆ ಒಕ್ಕಲಿಗ ಅಧಿಕಾರಿಗಳಿಗೆ ಅನ್ಯಾಯವನ್ನ ತಡಿತಿದ್ರು ಅಂತ ಹೇಳಿದೆ. ಅದನ್ನು ಕೊಂಡು ಹೋದ್ರು ಅಷ್ಟೆ.”

ಅವರು ಮಂತ್ರಿಯಾಗದೆ ಇರದು ಕಾಂಗ್ರೆಸ್ ಪಾರ್ಟಿ , ಅದಕೂ ನಿಮಗೂ ಏನು ಸಂಬಂಧ?”

ಡಿ.ಕೆ. ಶಿವಕುಮಾರ್ ನಮ್ಮ ಜನಾಂಗದ ರಾಜಕಾರಣಿ ಅವರಿಗೆ ಅನ್ಯಾಯವಾದ್ರೆ ನಾವು ಸುಮ್ಮನಿರಕ್ಕಾಗತ್ತ?”

ನಿಮಗೆ ಅನ್ಯಾಯ ಆದಾಗ ಡಿ.ಕೆ.ಶಿ. ಪ್ರತಿಭಟಿಸಿದ್ರ ”

ಅವುರು ಪ್ರತಿಭಟಿಸದೆ ಇರಬಹುದು. ಆದ್ರೆ ನಾವು ಸುಮ್ಮನಿರಕ್ಕಾಗಲ್ಲ.”



“ನಿಜ ಸಾರ್. ಜಾತಿಯನ್ನೇ ರಕ್ತ ಮಾಂಸದಲ್ಲಿ ತುಂಬಿಕೊಂಡವನಿಗೆ ಸ್ವಜಾತಿ ಬಂಧುವಿಗೆ ಅನ್ಯಾಯವಾದಾಗ ಸುಮ್ಮನಿರಕ್ಕಾಗಲ್ಲ ಸಾರ್. ಆದರೆ ನಿಮ್ಮದ್ಯಾಕೊ ಡೋಂಗಿ ಅಭಿಮಾನದಂಗೆ ಕಾಣ್ತದೆ.”

“ಜಾತಿ ವಿಷಯದಲ್ಲಿ ನಮ್ಮದು ಡೋಂಗಿ ಅಭಿಮಾನವೇನ್ರಿ?”

“ದೇವರಾಣೆ ನಿಜ ಸಾರ್. ದೇವೇಗೌಡ್ರು ಮತ್ತು ನೀವೂ ಪ್ರಾಮಾಣಿಕವಾಗಿ ಹೋರಾಡಿರೊದೇ ಒಕ್ಕಲಿಗರ ವಿರುದ್ಧ ಅಲ್ಲವ ಸಾರ್?”

“ಅದ್ಯಾಗ್ರಿ ಹೇಳ್ತಿರಿ?”

“ನೋಡಿ ಸಾರ್, ಗೌಡ್ರು ಹಾಸನ ಜಿಲ್ಲೇಲಿ ಹೋರಾಡಿದ್ದು ಪುಟ್ಟ ಸ್ವಾಮಿಗೌಡ, ಶ್ರೀಕಂಠಯ್ಯನ ವಿರುದ್ಧ. ಇದು ಒಕ್ಕಲಿಗರ ವಿರುದ್ಧ ಅಲ್ಲವ ಸಾರ್? ಇನ್ನ ಚಿಕ್ಕಮಗಳೂರು ತಗೊಂಡ್ರೆ ಬಿ.ಎಲ್. ಶಂಕರ್‌ನನ್ನು ನೀವೇ ವಲ್ಗರಾಗಿ ಬೈದು ಓಡಿಸಿದ್ರಿ. ಚಂದ್ರೇಗೌಡರನ್ನು ದೇವೇಗೌಡ್ರೆ ತಾತ್ಸಾರ ಮಾಡಿದ್ರು. ಪಾಪ ಅವುರೋಗಿ ಬಿ.ಜೆ.ಪಿ. ಸೇರಿಕಳಂಗಾಯ್ತು, ಗೋವಿಂದೆಗೌಡ್ರು ರಾಜಕೀಯ ನಿವೃತ್ತಿನೆ ಘೋಷಣೆ ಮಾಡಿದ್ರು. ಪುಟ್ಟೇಗೌಡ್ರು ದಿನಬೆಳಗಾಯ್ತು ಅಂದ್ರೆ ದೇವೇಗೌಡ್ರು ಮನೆ ಬಾಗಲಲ್ಲೇ ನಿಂತಿರತಿದ್ರು. ಅವುರನ್ನ ಕಡೆಗಣಿಸಿ ಟಿಕೆಟ್ ಕೊಡದೆ ಸೋಲಿಸಿದ್ರಿ.”

“ರಿ ಯಾಹು, ಜಾಸ್ತಿ ಮಾತಾಡಬೇಡಿ. ಕಳೆದ ಚುನಾವಣೆಲಿ ನಾವು ಗೆಲ್ಲೊ ಅಭ್ಯರ್ಥಿ ಆಯ್ಕೆ ಮಾಡಿದ್ದಿವಿ. ಆ ಪೈಕಿ ಪುಟ್ಟೇಗೌಡ, ಕೆ.ಆರ್.ಪೇಟೆ ಕೃಷ್ಣ ಇವರೆಲ್ಲಾ ಇದ್ರು.”

“ಸರಿ ಸಾರ್: ಇವರೆಲ್ಲಾ ಒಕ್ಕಲಿಗರಲ್ವ, ಇವರಿಗೆ ಅನ್ಯಾಯವಾಗಲಿಲ್ಲವಾ? ಆಮೇಲೆ ವೈ.ಕೆ. ರಾಮಯ್ಯ ತಮ್ಮೆಲ್ಲಾ ಸ್ವಾಭಿಮಾನ ಬಿಟ್ಟು ಕಾಂಗ್ರೆಸ್ ಸೇರಂಗೆ ಮಾಡಿದ್ರಿ. ಅವುರು ಒಕ್ಕಲಿಗರಲ್ಲವ? ಇನ್ನ ನಾಗೇಗೌಡ, ಭೈರೇಗೌಡ, ಬಚ್ಚೇಗೌಡ, ಜಿ.ಟಿ. ದ್ಯಾವೇಗೌಡ ಇವರೆಲ್ಲಾ ಒಕ್ಕಲಿಗರಲ್ಲವಾ ಸಾರ್? ಇವರೆಲ್ಲಾ ರಾಜಕೀಯದಲ್ಲಿ ಅತಂತ್ರರಾಗಿ, ಇವತ್ತು ತೊಂದ್ರೆಲಿರದು ಯಾರಿಂದ ಸಾರ್? ಇವರ ಪ್ರಸ್ತಾಪನೆ ಬಿಟ್ಟು ಒಕ್ಕಲಿಗ ಅಧಿಕಾರಿಗಳ ಮೇಲೆ ನಿಮ್ಮ ಕಾಳಜಿ ಜಾಸ್ತಿಯಾಗಿರದು ಆಶ್ಚರ್ಯ.”

“ಅಲ್ರೀ, ಈ ಸಿದ್ದರಾಮಯ್ಯನಿಗೆ ದ್ವೇಷ ಇದ್ರೆ ನಮ್ಮ ಮೇಲೆ ತೀರಿಸಿಕೋ ಬೇಕು. ಅದು ಬಿಟ್ಟು ಅಧಿಕಾರಿಗಳನ್ನ ದೂರದೂರಿಗೆ ವರ್ಗ ಮಾಡದೇನ್ರಿ?”

“ದೂರದೂರು ಅಂದ್ರೆ ಕಾಶ್ಮೀರನೊ, ಅಸ್ಸಾಮೊ ಸಾರ್?”

“ಇಂತ ಪ್ರಶ್ನೆಗಳನ್ನು ಮಾಡ್ತಕಂತ ನೀವು ಯಾರು ಅಂತ ಚಿಂತನೆ ಮಾಡಬೇಕಾಗ್ತದೆ. ಮೊನ್ನೆ ಟಿ.ವಿ.ಯವರಿಗೂ ಸರಿಯಾದ ಉತ್ತರ ಕೊಟ್ಟೆ. ಆಗ ಸುಮ್ಮನಾದ್ರು.”

“ಅದು ಸರಿಯಾದುತ್ರ ಅಲ್ಲ ಸಾರ್. ನಿಮ್ಮ ಮನಸ್ಥಿತಿ ಅನಾವರಣ ಅಷ್ಟೆ. ನಿಮಗೆ ನಿಷ್ಠರಾಗಿ ಕೆಲಸ ಮಾಡ್ತಯಿದ್ದ ಅಧಿಕಾರಿಗಳ ವರ್ಗ ಮಾಡಿದ್ರಿಂದ ತುಂಬಾ ಸಿಟ್ಟಾಗಿದ್ದಿರಲ್ಲವ ಸಾರ್.”

“ನಮ್ಮ ನಿಷ್ಠೆ ಏನಿಲ್ಲ ಕಣ್ರಿ. ಅವುರೆಲ್ಲಾ ಪ್ರಾಮಾಣಿಕರಾದ ಒಕ್ಕಲಿಗ ಜನಾಂಗದ ಅಧಿಕಾರಿಗಳು.”

“ಸಾರ್, ಆ ತರ ಮಾತಾಡಬೇಡಿ. ಒಕ್ಕಲಿಗ ಜನಾಂಗದ ಅಧಿಕಾರಿಗಳು ಒಕ್ಕಲಿಗರತ್ರನೇ ಲಂಚ ತಗಳದ ನಾನೇ ನೋಡಿದ್ದಿನಿ. ಅಷ್ಟಕ್ಕೂ ನಿಮ್ಮ ಮೆಚ್ಚಿನ ಅಧಿಕಾರಿಗಳೆಲ್ಲ ಆ ಡಾ.ಕೃಷ್ಣನ ತರದವ್ರುರು. ಆತ ಕೆ.ಪಿ.ಎಸ್ಸಿಲಿ ಮಾಡಿದ ಅನಾಹುತಗಳ ಕಾರಣಕ್ಕೆ ಜೈಲಿಗೋದ. ತಾವು ಅವನನ್ನ ಜೈಲಿಗೂ ಹೋಗಿ ಮಾತನಾಡಿಸಿಕೊಂಡು ಬಂದ್ರಿ. ಆತನಿಂದ ನೌಕರಿ ಪಡೆದವರು ಹ್ಯಂಗಿರತರೆ ಅಂತ ಈ ನಾಡಿಗೇ ಗೊತ್ತಾಗಿದೆ. ಅಂಥವರ ವರ್ಗ ಮಾಡಿದ್ರೆ ಜಾತಿ ವಿಷಯ ತಗದು ಜನಗಳ ಎತ್ತಿ ಕಟ್ಟಿ ಜನಗಳ ಮೇಲೆ ಬಿಡ್ತಿರಲ್ಲಾ ಸಾರ್. ಇದರ ಪರಿಣಾಮ ಗೊತ್ತ ನಿಮಗೆ?”

“ಪರಿಣಾಮ ಏನ್ರಿ? ಮುಂದೆ ನಮ್ಮ ಜಾತಿ ಅಧಿಕಾರಿಗಳ ತಂಟೆಗೆ ಸಿದ್ದರಾಮಯ್ಯ ಬರಲ್ಲ ಅಷ್ಟೆ.”

“ಸಾರ್ ನೀವು ಮಾಡಿದ್ದೆ ಅಲ್ಲವ ಸಾರ್ ಈಗ ನೆಡಿತಾಯಿರದು. ಸಿದ್ದರಾಮಯ್ಯನಿಗೆ ಸಹಾಯ ಕೊಡಬಹುದಾದ ಅಧಿಕಾರಿಗಳಿಗೆ ಯಾವುದೇ ಪೋಸ್ಟ್ ಸಿಗದಂಗೆ ನೋಡಿಕಂಡ್ರಿ. ಅದ್ಕೆ ಈಗೆ ವಿಧಾನಸೌಧದಲ್ಲಿ ಇದ್ದುಕೊಂಡು ಸರಕಾರದ ಎಲ್ಲಾ ಫೈಲುಗಳ ವಿಷಯವನ್ನು ನಿಮಗೆ ಕಳಸುತ್ತಿದ್ದ ಅಧಿಕಾರಿಗಳನ್ನ ಸಿದ್ದರಾಮಯ್ಯ ವರ್ಗ ಮಾಡಿದರಂತೆ. ಅತ್ತೆಗೊಂದು ಕಾಲ ಸೊಸೆಗೊಂದು ಕಾಲ ಅನ್ನಂಗಾಗ್ಯದೆ. ಅದಕ್ಕೆ ಜಾತಿ ಬಣ್ಣ ಯಾಕೆ ಕೊಡ್ತಿರಿ?”

“ಕೊಡದೆಯಿದ್ರೆ ಮುಂದಿನ ಲೋಕಸಭಾ ಚುನಾವಣೆಗೆ ಒಕ್ಕಲಿಗರನ್ನು ಒಟ್ಟು ಮಾಡಿ ಓಟು ಮಾಡಿಸಿಕೊಳೊದ್ಯಂಗ್ರಿ?”

ಥೂತ್ತೇರಿ!!!

...ಬ್ಬರು ಪ್ರತಿಭಾವಂತರ ಒಪ್ಪಿಗೆ

ರೇವರು ಮತ್ತು ಕಾಮ ಸಿನಿಮಾ ಶಕ ಇಂಗ್ಮರ್ ಬರ್ಗ್‌ಮನ್‌ರ ವಸ್ತುಗಳು. ‘ವರ್ಜೀನ್ ಸ್ಪ್ರಿಂಗ್’, ರ್ನೀನಾ’, ‘ಸೆವೆಂತ್ ಸೀಲ್’ ದ ಅದ್ಭುತ ಚಿತ್ರಗಳನ್ನು ಮಾಡಿದ ುವತ್ತು ವರ್ಷ ತನ್ನ ಚಿತ್ರರಚನೆಯಲ್ಲಿ ಗಿಹೋಗಿದ್ದ. ಈತ ಇದ್ದಕ್ಕಿದ್ದಂತೆ ರಲ್ಲಿ ಸುಮ್ಮನಾದ; ಒಂದು ದ್ವೀಪಕ್ಕೆ ಚಿಂತಿಸತೊಡಗಿದ ಮತ್ತು ಸದತ್ತ ಕಣ್ಣೆತ್ತಿ ನೋಡಲಿಲ್ಲ. ಆದರೆ ಚಿತ್ರಕಥೆಗಳನ್ನು ಬರೆಯುತ್ತಿದ್ದ. ಾನಪರ್ಯಂತದ ಅಭ್ಯಾಸವನ್ನು ಿಡುವುದು ಕಷ್ಟ. ಆದ್ದರಿಂದ ಸಂಭಾಷಣೆಗಳು’ ಎಂಬ ೆಯನ್ನು ಬರೆದ. ಇದಕ್ಕಿಂತ ಾದದ್ದು ಬರ್ಗ್‌ಮನ್ನನ ಜೀವನದ ಸಾರ.




ಬರೆಯುವುದು, ಸಮುದ್ರ ದಾಟುವುದು, ಬೆಟ್ಟ ಹತ್ತುವುದು ಎಲ್ಲವೂ ನ ದುರಂತವನ್ನು ಹೇಳಬಲ್ಲದು; ಆತನ ಸಾಧನೆಯ ಇನ್ನೊಂದು ದುಃಖದ್ದು, ಕತೆಯೊಂದನ್ನು ಬರೆದು ಎಲ್ಲರನ್ನೂ ದುಃಖದಲ್ಲಿ ಸ್ಸಾಗಿಸುವುದು ಕಷ್ಟವಲ್ಲ; ಆದರೆ ಅದು ಅಗ್ಗದ ಮಾಲು ಅನ್ನಿಸಿಕೊಳ್ಳುತ್ತದೆ. ಮೌನಿಯಾದ ಮನುಷ್ಯ, ದೀರ್ಘವಾಗಿ ಚಿಂತಿಸುವ ವ್ಯಕ್ತಿ ಸಂಭಾಷಣೆಯನ್ನು ಸಿದರೆ ಅದು ಆತನ ನಿಟ್ಟುಸಿರಿನಂತಿರುತ್ತದೆ; ಸೂಕ್ಷ್ಮಜ್ಞನ ಮಾತು ೊಂದಿಗೆ ಮಾಡಿಕೊಂಡ ರಾಜಿಯಂತಾಗಿ ಆತನ ನೋವು ಕೇಳುವವರನ್ನು ಟ್ಟುತ್ತದೆ. ಅದು ನಿಜವಾದ ದುಃಖ ಮನುಷ್ಯನ ಬದುಕಿನ ಸವನ್ನು ತೋರುವ ಅನುಭವ. ಇದು ಪ್ರತಿಯೊಬ್ಬ ಕಲಾವಿದನ ಈ ನರಕವನ್ನು ಮತ್ತೆಮತ್ತೆ ಕಾಣುವುದು, ಕಾಣಿಸುವುದು ಆತನ

ರ್ಗ್‌ಮನ್ ನನ್ನ ಮೆಚ್ಚಿನ ನಿರ್ದೇಶಕ. ಮೈತುಂಬ ಬರುವ ಈತನ ಸಾಹಿತ್ಯಕ ಎಂದು ಕೆಲವರಿಗೆ ಅನ್ನಿಸಬಹುದು. ಸಾಹಿತ್ಯದ ದ ನನಗೆ ಇದು ತೀರಾ ಕೆಟ್ಟದು ಅನ್ನಿಸುವುದಿಲ್ಲ. ಅದಕ್ಕೇ ಡೇವಿಡ್ ಲೀನ್, ಬುನ್ಯುಯಲ್, ಕುರಾಸೋವಾ ಮುಂತಾದವರನ್ನು ಬರ್ಗ್‌ಮನ್‌ರನ್ನು ‘ಸಿನಿಮಾದ ಶೇಕ್ಸ್‌ಪಿಯರ್’ ಅನ್ನುವುದುಂಟು. ಕೆಳಗಿನ ಗಡಿ ವಿಸ್ತರಿಸುವ ಈತ ಕಾಮದ ಬಗ್ಗೆ ಬರೆದಾಗ ುಸುತ್ತಾನೆ; ಈಗ ಗ್ರಹಿಸುವ ಧರ್ಮ ಕಾಮದಿಂದ ಭಗ್ನವಾಗಿರುವುದಿಲ್ಲ,

ಹೀಗೆಯೇ ಇನ್ನೊಂದು ಸುದ್ದಿಯನ್ನು ನಿಮಗೆ ಈ ಅಂಕಣದಲ್ಲೇ ಬರೆಯುತ್ತೇನೆ. ಹಾಪ್‌ಕಿನ್ಸ್ ಎಂಬ ಇಂಗ್ಲಿಷ್ ನಟನ ಹೆಸರನ್ನು ನೀವು ಕೇಳಿರಬಹುದು. ‘ರಿಮೇನ್ಸ್ ಆಫ್ ದಿ ಡೇ’, ‘ಹೊವಾರ್ಡ್ಸ್ ಎಂಡ್’ ಮುಂತಾದ ಚಿತ್ರಗಳಲ್ಲಿ ನಟಿಸಿದ ಈತ ಅಕಾಡೆಮಿ ಪ್ರಶಸ್ತಿ, ಖ್ಯಾತಿ, ಅಪಾರ ಹಣ ಗಳಿಸಿದ. ಆದರೆ ಉದ್ದಕ್ಕೂ ತಾನು ನಟನಾಗಿ ವಂಚನೆ ಮಾಡುತ್ತಿದ್ದೇನೆ ಎಂದು ಈತನಿಗೆ ಅನ್ನಿಸುತ್ತಿತ್ತು; ಆದ್ದರಿಂದ ಈಚೆಗೆ ಈತ ಹೇಳಿದ: ‘ನಟನೆ ತೀರಾ ಕ್ಷುಲ್ಲಕವಾದದ್ದು. ಇದನ್ನು ಮಾಡುತ್ತಲೇ ಹೋಗುವುದು ಬಾಲಿಶ. ಇದನ್ನು ಬದುಕೆಂದು ಪರಿಗಣಿಸುವುದು ವಿಕೃತ. ನಟಿಸುತ್ತಲೇ ಇದ್ದರೆ ನನ್ನ ವ್ಯಕ್ತಿತ್ವ ನಾಶವಾಗುವ ಅಪಾಯವಿದೆ. ಆದ್ದರಿಂದ ಈಗ ನಾನು ಭಾಗವಹಿಸುತ್ತಿರುವುದೇ ಕೊನೆಯ ಚಿತ್ರ. ಈ ವಿಕೃತ ಅಭಿನಯದ ಲೋಕದಲ್ಲಿ ಇನ್ನು ಇರಲಾರೆ’ ಎಂದು ಹೇಳಿದ.

ನಿಜವಾಗಿಯೂ ಪರಿಪಕ್ವವಾದವರಿಗೆ ಅಭಿನಯ ಕಷ್ಟ- ಅದು ಕಲೆಯಾಗಿದ್ದಾಗ ಕೂಡ. ಹಾಗೆಯೇ ಕಲಾಸೇವೆಗೆಂದು ಬರ್ಗ್‌ಮನ್ ಚಿತ್ರ ಮಾಡುವುದು ಕಷ್ಟ. ನಿಜಕ್ಕೂ ಪ್ರಾಮಾಣಿಕವಾಗಿರುವವರಿಗೆ ಮೌನವೇ ಗತಿ. ಮೌನಿಯ ಪ್ರತಿಯೊಂದು ಚಟುವಟಿಕೆಯ ಅರ್ಥಪೂರ್ಣವಾಗಿರುತ್ತದೆ- ಮಗುವಿನ ಚಲನೆಯಂತೆ, ಪ್ರಾಣಿಗಳ ಪ್ರೀತಿಯಂತೆ.



ಮನವೊಲಿಕೆ ಮತ್ತು ದಬ್ಬಾಳಿಕೆ

ನಿಮಗೆ ಕೆಲವು ವಿಷಯಗಳು ಗೊತ್ತಾಗುವುದೇ ಇಲ್ಲ. ಈಗ ಬೋಸ್ನಿಯಾ, ಸರ್ಬಿಯಾ ಹೇಗಿವೆ? ಯುಗೋಸ್ಲಾವಿಯಾ ಎಂದು ಕರೆಯಲ್ಪಡುತ್ತಿದ್ದ ದೇಶಗಳು ಆಗಾಗ ಮೆಷಿನ್‌ಗನ್, ಬಾಂಬ್, ಬೆಂಕಿಯ ಬೆದರಿಕೆ ಹಾಕುತ್ತಿದ್ದು ಈಗ ಹೊರತು ತಣ್ಣಗಾಗಿವೆಯಲ್ಲ, ಕಾರಣವೇನು? ಬರ್ಮಾದಲ್ಲಿ ಸೂಕಿ ಮತ್ತು ಸೈನ್ಯದ ಮಾಫಿಯಾ ಏನು ಮಾಡುತ್ತಿದೆ? ಈಜಿಪ್ಟ್‌ನಲ್ಲಿ ಚಿಗುರಿಕೊಳ್ಳುತ್ತಿದ್ದ ಮುಲ್ಲಾಗಳು ಮತ್ತು ಮೂಲಭೂತವಾದಿಗಳು ಯಾವಾಗಿನಿಂದ ತಣ್ಣಗಾದರು? ಇದಕ್ಕೆಲ್ಲ ಒಂದೇ ಉತ್ತರ; ಸೈನ್ಯ ಮತ್ತು ಸರ್ಕಾರ ಸೊಂಟ ಮುರಿಯುವುದು ಸುಲಭ. ಮನುಷ್ಯ ಅಂಥ ಅಧಿಕಾರಕ್ಕೆ ಹೆದರಿ ಸುಮ್ಮನಾದಂತೆ ಆತ್ಮಶಕ್ತಿ ಸಜ್ಜನಿಕೆಯ ಮಾತುಗಳಿಂದ ಸುಮ್ಮನಾಗುವುದಿಲ್ಲ. ಕಳೆದ ಮೂವತ್ತು ವರ್ಷದಿಂದ ಅಧಿಕಾರದಲ್ಲಿದ್ದ ಸುಹಾರ್ತೋ ಎಂಬ ನಾಯಕ ಅಧಿಕಾರಕ್ಕೆ ಬಂದದ್ದೇ ದಮನ, ರಕ್ತಪಾತದಿಂದ; ಉಸಿರೆತ್ತಿದವರನ್ನೆಲ್ಲ ‘ಕಮ್ಯುನಿಸ್ಟರು’ ಎಂದು ಕರೆದು ಕೊಲ್ಲತೊಡಗಿದ, ಜೈಲಿಗೆ ತಳ್ಳತೊಡಗಿದ. ಮೂವತ್ತು ವರ್ಷ ಜೈಲಲ್ಲಿ ಸವೆದುಹೋದ ಯಾವನ ಆತ್ಮಶಕ್ತಿಯೂ ಈ ಸುಹಾರ್ತೋನನ್ನು ಕಿತ್ತುಹಾಕಲಾಗಲಿಲ್ಲ. ಕಳೆದ ಒಂಭತ್ತು ವರ್ಷದಿಂದ ಬರ್ಮಾದ ಗೃಹಬಂಧನ, ಜೈಲಲ್ಲಿ ವಾಸ ಮಾಡಿದ ಸೂಕಿ ಇವತ್ತು ಒಬ್ಬಂಟಿ. ಹಾಗೆಯೇ ಇಡೀ ಮಲೇಶಿಯಾದ ನಿಜವಾದ ನಾಯಕ ಇಬ್ರಾಹಿಂ ಅನ್ವರ್‌ನನ್ನು ಮಹಾತೀರ್ ಎಂಬ ರಾಕ್ಷಸ ಜೈಲಲ್ಲಿ ಕರಗಿಸುತ್ತಿದ್ದಾನೆ. ಈಜಿಪ್ಟ್‌ನಲ್ಲಿ ಮುಬಾರಕ್ ತಂಟೆಕೋರರು, ಅವರ ಮನೆಯವರು, ಸ್ನೇಹಿತರು- ಎಲ್ಲರನ್ನೂ ಮುಗಿಸಿದ್ದರಿಂದ ಶಾಂತಿ ನೆಲೆಸಿತು. ನಮ್ಮ ಪಂಜಾಬ್‌ನಲ್ಲೂ ಅಷ್ಟೆ. ಗಿಲ್ ಎಂಬ ಸರ್ದಾರ್ಜಿ ಮುಖಮೂತಿ ನೋಡದೆ ಇಕ್ಕಿ ಆ ರಾಜ್ಯವನ್ನು ಹಿಡಿತಕ್ಕೆ ತಂದ.

ಡೆಮಾಕ್ರಸಿಯಲ್ಲಿ ಒಳ್ಳೆಯತನ, ಮಾನವೀಯತೆ, ಮನವೊಲಿಕೆ- ಎಲ್ಲವೂ ಮುಖ್ಯ. ಈ ಪ್ರಜಾಪ್ರಭುತ್ವಗಳು ನಿಂತಿರುವುದೇ ವಾದ, ನೈತಿಕ ನಿಲುವು, ಮುಕ್ತ ಚಟುವಟಿಕೆ, ಪ್ರತಿಭಟನೆಯ ಮೇಲೆ. ಪ್ರಜಾಪ್ರಭುತ್ವದಲ್ಲಿ ಮಾತ್ರ ರಕ್ತಪಾತ ವರದಿಯಾಗುತ್ತದೆ; ಸೋಗಲಾಡಿತನ ಚರ್ಚೆಗೊಳಗಾಗುತ್ತದೆ. ಆದರೆ ಚರ್ಚೆಗೆ ಸಹನೆ, ಸಂಯಮ ಬೇಕು; ಇನ್ನೊಬ್ಬ ಹೇಳುವುದರಲ್ಲೂ ಸತ್ಯವಿರಲು ಸಾಧ್ಯ ಎಂಬ ತಿಳಿವು ಬೇಕು. ಪ್ರಜಾಪ್ರಭುತ್ವದಲ್ಲಿ ಕಳ್ಳತನ, ಗುಟ್ಟಾದ ಕೇಡಿತನ ಶುರುವಾದೊಡನೆ ಗನ್ನು, ಬಾಂಬು ಬರುತ್ತವೆ. ವಾದಕ್ಕೆ ಮಣಿಯದೆ ಇದ್ದ ಜಡರು ಬಾಂಬಿಗೆ ಮಣಿಯುವ ಸ್ಥಿತಿ ಬರುತ್ತದೆ.

ಆದ್ದರಿಂದ ನಾವೆಲ್ಲ ನಮ್ಮ ವ್ಯವಸ್ಥೆಗಳ ಬಗ್ಗೆ ಮನಬಿಚ್ಚಿ ಮಾತಾಡುವ, ಮೈಚಳಿಬಿಟ್ಟು ಕ್ರಿಯೆಗಿಳಿವ ಅಭ್ಯಾಸವನ್ನು ಬೆಳೆಸಿಕೊಳ್ಳಬೇಕು; ರಾಜನಿಗೆ ಅಥವಾ ದಂಡನಾಯಕನಿಗೆ ಹೆದರಿ ಸುಳ್ಳನ್ನು ನಿಜ ಎಂದು ಹೇಳುವ ಸ್ಥಿತಿ ಬಂದರೆ ಅದು ಗುಲಾಮಗಿರಿಗಿಂತಲೂ ಕೆಟ್ಟದು.

ಬಾಂಬಿಗೆ, ಗನ್ನಿಗೆ ಹೆದರುವ ಮನುಷ್ಯರನ್ನು ನೆಚ್ಚಿ ಮನಬಿಚ್ಚಿ ಮಾತಾಡಿದರೆ ಏನಾಗುತ್ತದೆ ಎನ್ನುವುದು ಅನ್ವರ್ ಪ್ರಕರಣದಿಂದ ಗೊತ್ತಾಗುತ್ತದೆ. ಮಹಾತೀರ್ ಎಂಬ ಪ್ರಧಾನಿ ಈಗ ಎಲ್ಲ ಪ್ರಜೆಗಳನ್ನೂ ಹಣ, ತಿನಿಸು, ಮನೆ ಮುಂತಾದವನ್ನು ದಯಪಾಲಿಸಿ ತಣ್ಣಗಾಗಿಸುತ್ತಿದ್ದಾನೆ; ಅವು ವಿಫಲವಾದರೆ ಮೆಷಿನ್‌ಗನ್ ಇದ್ದೇ ಇವೆ.

ನಾವೆಲ್ಲ ಗಾಂಧೀಜಿಯಿಂದ ಎಷ್ಟು ದೂರ ಹೋಗಿದ್ದೇವೆ ಎನ್ನುವುದನ್ನು ಇದು ತೋರುತ್ತದೆ. ಗಾಂಧೀಜಿ ಒಂದು ರೀತಿಯಲ್ಲಿ ಕನಸುಗಾರ; ಆತನ ತಮಾಷೆಯೇ ಡೆಮಾಕ್ರಸಿಯನ್ನು ಸೂಸುತ್ತಿತ್ತು ಹಾಗೂ ಗಾಂಧೀಜಿಯ ತೀವ್ರ ಕಾಮನೆ; ಸಂಪತ್ತಿನ ಬಗ್ಗೆ ಒಲವು. ಇವೆಲ್ಲ ಈಗ ವಿಚಿತ್ರವಾಗಿ ಕಾಣಿಸುತ್ತಿವೆ.

ಗನ್ನು, ನಾಲಗೆ; ಆತ್ಮ ಮತ್ತು ಊಟ

ಈ ಬಗ್ಗೆ ಯೋಚಿಸುತ್ತಲೇ ಇದ್ದೇನೆ.


● ಜನವರಿ 20, 1999

ರಂಗ-ಅಂತರಂಗ

ಕೊಳಗೇರಿಯ ಬೀದಿಯಲ್ಲಿ ಅರಳಿದ 'ಭಾವೈಕ್ಯತಾ ವೇದಿಕೆ

ಬೀದಿ ರಂಗಭೂಮಿಯಲ್ಲಿ ಪ್ರತಿಭಟನೆ, ಹೋರಾಟ, ಚಳವಳಿ ಎಂಬಿತ್ಯಾದಿ ಪದಗಳಲ್ಲಿ ಧಿಕ್ಕಾರವೆಂಬ ಆಶಯವನ್ನೂ ಒಳಗೊಂಡಿರುತ್ತದೆ. ಬದುಕು ಬವಣೆಗಳ ತಿಕ್ಕಾಟದಲ್ಲಿ ಸಮಾನತೆಯ ಕಿರಣಗಳನ್ನು ಚಿಮ್ಮಿಸುವ ಇರಾದೆಯನ್ನು ಬೀದಿ ರಂಗಭೂಮಿಯು ಉಸಿರಾಗಿಸಿಕೊಂಡಿದೆ. ಬೀದಿ ರಂಗಭೂಮಿ ಎಂದರೇನೇ ಕತ್ತಲೆಯೊಳಗೆ ಬೆಳಕ ಅರಸಿ ಹೊರಡುವ ಒಂದು ಚಲನೆ. ಇಂತಲ್ಲಿ ತನ್ನ ಚಹರೆಯನ್ನು ಉಳಿಸಿಕೊಂಡಿರುವ 'ಭಾವೈಕ್ಯತಾ ವೇದಿಕೆ'ಯು ಕನ್ನಡ ರಂಗಭೂಮಿಯಲ್ಲಿ ವಿಶಿಷ್ಟ ಛಾಪು ಮೂಡಿಸಿದೆ.

ಹರಕು-ಮುರಕು ಕನಸುಗಳಿಗೆ ಬಣ್ಣಕೊಟ್ಟುಕೊಳ್ಳಲು ಹೆಣಗುತ್ತಿದ್ದ ಕೊಳಗೇರಿ ಮಕ್ಕಳಿಗೆ ಆಕಾರ ಕೊಡಲು ಹುಟ್ಟಿದ್ದು ಭಾವೈಕ್ಯತಾ ವೇದಿಕೆ. ಬಳ್ಳಾರಿ ಜಿಲ್ಲೆ ಹೊಸಪೇಟೆಯ ಸಿದ್ಧಲಿಂಗಪ್ಪ ಚೌಕಿ ಕೊಳಗೇರಿಯು ವೇಶ್ಯಾವಾಟಿಕೆ, ಮಾನವ ಸಾಗಾಣಿಕೆ, ಅಫೀಮು, ಗಾಂಜಾ, ರೌಡಿಸಂ ಮುಂತಾದ ಘಾತುಕತನವನ್ನು ಬದುಕಾಗಿಸಿಕೊಂಡಿತ್ತು. 1991 ರಲ್ಲಿ ಹೊಸಪೇಟೆಯಲ್ಲಿ ಕೋಮು ಸಂಘರ್ಷ ಸ್ಫೋಟಗೊಂಡಿತು. ಹಿಂದೂ-ಮುಸ್ಲಿಂರ ಎದೆಯಲ್ಲಿ ಬೆಂಕಿಯ ನಿಗಿ ಉರಿಯುತ್ತಿರುವಾಗ ಸಾಮಾಜಿಕ ಅಸ್ಮಿತೆಯನ್ನು ಎತ್ತಿ ಹಿಡಿಯಲು ಹೊಸಪೇಟೆಯ ಸಿದ್ಧಲಿಂಗಪ್ಪ ಚೌಕಿಯಲ್ಲಿ ಭಾವೈಕ್ಯತಾ ವೇದಿಕೆಯು ಹುಟ್ಟಿಕೊಂಡಿತು. ಕೊಳಗೇರಿಯ ಪುಡಿ ಹುಡುಗರನ್ನು ಕಟ್ಟಿಕೊಂಡು ಹೋರಾಟದ ಹಾಡು, ಕ್ರಾಂತಿಗೀತೆ, ಬೀದಿ ನಾಟಕಗಳ ಮೂಲಕವೇ ಜನರಲ್ಲಿ ಜಾಗೃತಿ ಮೂಡಿಸಲು ಹೊರಟ ಭಾವೈಕ್ಯತಾ ವೇದಿಕೆಯು ಅಂದಿನಿಂದ ಇಂದಿನವರೆವಿಗೂ ಬಡವರ, ದಲಿತರ, ಶ್ರಮಿಕರ ಬೆವರನ್ನು ಅನ್ನದ ಬಿಂಬಗಳಾಗಿ ಪರಿವರ್ತಿಸಲು ಹೆಣಗುತ್ತಾ ಸಾಗುತ್ತಿದೆ.



ಭಾವೈಕ್ಯತಾ ವೇದಿಕೆಯ ಕಾರ್ಯದರ್ಶಿ ಪಿ.ಅಬ್ದುಲ್ ತಮ್ಮ ತಂಡವನ್ನು ಕಟ್ಟಿಕೊಂಡು ಬೀದಿ ರಂಗಭೂಮಿಯನ್ನು ಸಾಮಾಜಿಕ ಚಳವಳಿಯಾಗಿ ಮಾರ್ಪಡಿಸಲು ಅನುಭವಿಸಿದ ತಲ್ಲಣಗಳನ್ನು ಅವರ ಮಾತಿನಲ್ಲಿ ಓದಿ:

"1991-92 ರ ನಂತರ ಹೊಸಪೇಟೆಯಲ್ಲಿ ಹಿಂದೂ-ಮುಸ್ಲಿಂ ಕಮ್ಯುನಲ್ ವಾಯ್‌ಲೆನ್ಸ್ ಶುರುವಾಯಿತು. ಆಗ ನಾವು ಬೀದಿ ನಾಟಕ ಅನ್ನುವುದಕ್ಕಿಂತ ಮೊಹರಂ ಸವಾಲು ಜವಾಬುಗಳು ಅಂತ ಮಾಡಿದಿವಿ. ಅಂದರೆ ಹುತಾತ್ಮರ ಜೀವನದ ಕಥೆಗಳನ್ನು ಇಟ್ಟುಕೊಂಡು ಸೆವಾಲ್-ಜವಾಬ್ ಪದಗಳನ್ನು ಇಡೀ ರಾತ್ರಿ ಹಾಡಿಸಿ ಜನರಲ್ಲಿ ಸಾಮರಸ್ಯ ಮೂಡಿಸಲು ಶ್ರಮಿಸಿದೆವು. ನಾನು ಇರೋದೇ ಕೊಳಚೆ ಪ್ರದೇಶದಲ್ಲಿ, ಆದ್ದರಿಂದ ನನ್ನ ನಾಟಕ ಪ್ರಾಕ್ಟೀಸಿಗೆ ಬಹಳ ಫ್ರೀಯಾಗಿ ಸಿಗುವುದು ಅಂದ್ರೆ ನಮ್ಮ ಕೊಳಗೇರಿಯ ಮಕ್ಕಳು. ಜಾಗವೇ ಇಲ್ಲದೆ ಶಾಲೆಯ ಮರದ ಕೆಳಗೆ ಪ್ರಾಕ್ಟೀಸ್ ಮಾಡಿ ಕತ್ತಲಾದ ಮೇಲೆ ಮನೆಗೆ ಬರುತ್ತಿದ್ದೆ. ನನಗೆ ಬೀದಿ ನಾಟಕದ ಮೂಲಕ ಹೆಚ್ಚು ವಿಷಯಗಳು ಸಿಗುತ್ತಿತ್ತು. ಒಂದು ಸಲ ನಮ್ಮ ಏರಿಯಾದಲ್ಲಿ ವರದಕ್ಷಿಣೆಗಾಗಿ ಒಂದು ಸಾವಾಯಿತು. ಅತ್ತೆ ಮಾವನೋರೆ ಸೊಸೆಯನ್ನು ಕೊಂದು ಬಾತ್‌ರೂಮಿನಲ್ಲಿ ಹಾಕಿ ಬೆಂಕಿ ಹಚ್ಚಿ ಹೊಗೆಯೊಂದಿಗೆ ವಾಸನೆ ಬಂದಾಗ ಆಕಸ್ಮಾತ್ ಸಾವು ಅಂತ ಹೇಳಿ ಕೇಸ್ ದಾಖಲಿಸಿ ಬಿಟ್ಟರು. ಆದರೆ ನಮ್ಮ ಓಣಿಯಲ್ಲಿ ಎಲ್ಲರಿಗೂ ಗೊತ್ತಿತ್ತು ಆ ಹುಡುಗಿಯನ್ನು ಮರ್ಡರ್ ಮಾಡಿದರಂತೆ ಅಂತ. ಆಗ ನಾವು ಮಕ್ಕಳಿಗೆ ಹಾಡು ಕಲಿಸಿ ಸ್ಕಿಟ್ ತರ ಮಾಡಿ ಬೀದಿ ಬೀದಿಯಲ್ಲಿ ನಾಟಕ ಮಾಡಿದಾಗ ಮಾರನೇ ದಿನವೇ ಓಣಿ ಜನ, ಹೆಂಗಸರು ಬುರ್ಕಾ ಹಾಕಿಕೊಂಡು ಮಕ್ಕಳೆತ್ತಿಕೊಂಡು ಹರಿದು ಬಂದರು. ಸರಿ ಸುಮಾರು ಹತ್ತು ಸಾವಿರಕ್ಕಿಂತಲೂ ಅಧಿಕ ಜನ. ಇಡೀ ಓಣಿಯೇ ಎದ್ದು ಬಂದಾಗ ನನ್ನಲ್ಲಿ ಕ್ರಾಂತಿಯ ಕಾವು ಮತ್ತಷ್ಟು ಹೆಚ್ಚಿತು. ಸಾಮಾಜಿಕ ಬದಲಾವಣೆಗೆ ಬೀದಿ ರಂಗಭೂಮಿ ಉತ್ತರವೆಂದು ಭಾವೈಕ್ಯತಾ ತಂಡವನ್ನು ಬೆಳೆಸತೊಡಗಿದೆ."

- ಇದು ಪಿ.ಅಬ್ದುಲ್ಲರ ಒಂದು ಅನುಭವ. ಇಂಥ ನೂರಾರು ಸಂದಿಗ್ಧತೆಗಳನ್ನು ಎದುರಿಸಿದ ಘಟನೆಗಳು ಅವರ ಮನದಲ್ಲಿ ಇನ್ನೂ ಹಸಿರಾಗಿಯೇ ಇವೆ. ಗೂಂಡಾಗಳು, ರಾಜಕಾರಣಿಗಳು, ಪೊಲೀಸರು ಇವರಿಗೆ ಕೊಟ್ಟ ಹಿಂಸೆಯನ್ನೇ ಕಾವ್ಯ ರೂಪಕಗಳನ್ನಾಗಿ ಮಾಡಿಕೊಂಡು ದೇಶಾದ್ಯಂತ ಸಂಚರಿಸಿದ್ದಾರೆ.

ಭಾವೈಕ್ಯತಾ ವೇದಿಕೆ ತಂಡದ ಉಪಾಧ್ಯಕ್ಷರಾಗಿದ್ದ ಕಿ.ರಂ. ನಾಗರಾಜ ಪಿ.ಅಬ್ದುಲ್‌ರ ಕನಸುಗಳಿಗೆ ಬೌದ್ಧಿಕ ನೆಲೆಯನ್ನು ತಂದುಕೊಟ್ಟವರು. ಸಂಸ್ಥೆಯ ರಿಜಿಸ್ಟ್ರೇಷನ್ ಮಾಡಿಸಿ ಮೊದಲ ಬಾರಿಗೆ ಲೆಟರ್ ಹೆಡ್ ಮಾಡಿಸಿದ್ದೂ ಕಿರಂ. ಕಾವ್ಯ ಸಾಹಿತ್ಯ, ವಿಚಾರ, ಸಾಂಸ್ಕೃತಿಕ ಆಯಾಮಗಳನ್ನು ಬೀದಿ ನಾಟಕಗಳ ಮೂಲಕ ಅನಾವರಣಗೊಳಿಸಲು ನಾಡಿನ ವಿಚಾರವಂತರು ಅಬ್ದುಲ್ಲಾರೊಂದಿಗೆ ಸಂಪರ್ಕ ಬೆಳೆಸಲು ಕಿರಂ ಶ್ರಮಿಸಿದ್ದರು. ಆಗಲೇ ಪಿ.ಲಂಕೇಶ್, ಸಿ.ಜಿ.ಕೆ, ಪ್ರಸನ್ನ, ಜಂಬೆ, ಬಸವರಾಜ ಮಲಶೆಟ್ಟಿ, ಇಟಗಿ ವೀರಣ್ಣ ಶಶಿಧರ ಹಡಪ, ಕಪ್ಪಣ್ಣ, ನಾಗರಾಜ ಮೂರ್ತಿ, ಪರಶುರಾಮ ಕಲಾಲ, ಶಿವಶಂಕರ ಬಣಕಾರ, ಡಿ.ಕೆ.ಚೌಟ, ಮೈಮ್ ರಮೇಶ, ಸುರೇಶ ಆನಗಳ್ಳಿ, ಕೊಟಗಾನಹಳ್ಳಿ ರಾಮಯ್ಯ, ಓ.ಎಲ್ ನಾಗಭೂಷಣ ಸ್ವಾಮಿ ಮುಂತಾದವರ ವಿಚಾರ, ಸಾಮಾಜಿಕ ಮಂಥನಗಳ ಕಸುವು ಭಾವೈಕ್ಯತಾ ವೇದಿಕೆಯೊಂದಿಗೆ ಮಿಳಿತಗೊಂಡು ಬೀದಿ ರಂಗಭೂಮಿಯನ್ನು ಸಾಂಸ್ಕೃತಿಕತೆಯಿಂದ ಸಾಮಾಜಿಕ ಚಳವಳಿಯ ಕಡೆ ತಿರುಗಿಸಿತು.

ಭಾವೈಕ್ಯತಾ ವೇದಿಕೆಯು ಬೀದಿ ನಾಟಕ ಪ್ರದರ್ಶನಕ್ಕೆ ಸೀಮಿತವಾಗದೇ ನಾಟಕ ಕಲಿಯಲು ಬಂದ ಮಕ್ಕಳ ಬದುಕನ್ನೇ ತನ್ನ ಹೆಗಲ ಮೇಲೆ ಹೊತ್ತುಕೊಂಡಿತು. ಅಂದಿನ ಆ ಬೀದಿ ಮಕ್ಕಳು ಇವತ್ತು ಸಾಮಾಜಿಕ ನೆಲೆಯಲ್ಲಿ ತಮ್ಮದೇ ಆರ್ಥಿಕ ಭದ್ರತೆಯನ್ನು ಕಂಡುಕೊಂಡಿದ್ದಾರೆ.





ಅವರಲ್ಲಿ ಸಹನಾ (ನೀನಾಸಂ ಮತ್ತು ಎನ್.ಎಸ್.ಡಿ), ತಾಜುದ್ದೀನ (ನೀನಾಸಂ, ಪ್ರಜಾವಾಣಿ ಫೋಟೋಗ್ರಾಫರ್, ಹುಬ್ಬಳ್ಳಿ), ಸಹರಾ (ನೀನಾಸಂ, ಸರ್ಕಾರಿ ಶಾಲೆಯಲ್ಲಿ ರಂಗ ಶಿಕ್ಷಕಿ), ಗುರುರಾಜ (ನೀನಾಸಂ ರಂಗಶಿಕ್ಷಕ), ಶಾಹಿರಾ (ನೀನಾಸಂ), ಎ. ನಾಗರಾಜ (ನೀನಾಸಂ), ಪಿ.ಶೇಕ್ಷಾವಲಿ (ಶಿವಸಂಚಾರ), ಜಡಿಯಪ್ಪ (ಶಿವಸಂಚಾರ), ಮಹ್ಮದ ಯೂನಿಸ (ಶಿವಸಂಚಾರ ಎಂ.ಎ.ದೃಶ್ಯ ಕಲೆ), ಸಂತೋಷ ಕುಮಾರ (ಎಂ.ಬಿ.ಎ), ವಾದಿರಾಜ (ಎಂ.ಎ. ಎಂ.ಫಿಲ್ ದೃಶ್ಯಕಲೆ), ರವಿ (ಶಿಕ್ಷಕ), ರಾಮಾಂಜನೇಯ (ಕಾಂಪೌಂಡರ್), ಷಣ್ಮುಗ (ಶಿಕ್ಷಕ) ಹೀಗೆ ಕೊನೆಯ ಪಕ್ಷ 350 ಕ್ಕಿಂತಾ ಹೆಚ್ಚು ಜನ ಬದುಕಿನ ದಾರಿ ಪಡೆದುಕೊಂಡಿದ್ದಾರೆ. ಭಾವೈಕ್ಯತಾ ವೇದಿಕೆಯು ಪ್ರದರ್ಶಿಸಿರುವ ನಾಟಕಗಳ ಪರಿಕಲ್ಪನೆಗಳೇ ನೊಂದವರ, ಬೇಗುದಿಯಲ್ಲಿ ನರಳಿದವರ ಕಥೆಗಳಾಗಿವೆ. ಸಾಮಾಜಿಕ, ರಾಜಕೀಯ ವ್ಯವಸ್ಥೆಯ ವಿಡಂಬನೆಯ ಅಣಕಗಳಾಗಿಯೇ ಪ್ರೇಕ್ಷಕರಲ್ಲಿ ಸಾಮಾಜಿಕ ಎಚ್ಚರವನ್ನು ಮೂಡಿಸಿವೆ. ಅವುಗಳಲ್ಲಿ ಭೂತದ ಮನೆ (ಪರಶುರಾಮ ಕಲಾಲ), ಮುಟ್ಟಿಸಿಕೊಂಡವನು (ಪಿ.ಲಂಕೇಶ್), ಡಾಂಬರು ಬಂದಿದ್ದು (ದೇವನೂರು ಮಹಾದೇವ), ಧನ್ವಂತರಿ ಚಿಕಿತ್ಸೆ (ಕುವೆಂಪು), ದೌಡಗಾಂಧಿ (ಸಿ.ಜಿ.ಕೆ), ಶ್ರೀರಾಮ ಸಂದೇಶ (ದೇವಿ ಸಿಪಿಎಂ), ಶೂದ್ರ ಶಕ್ತಿ (ಪೀರಪಾಷ), ನಮಗೊಂದು ಕಾಲ (ವಿಲ್‌ಫ್ರೈಡ್ ಡಿಸೋಜಾ), ಬೇತಾಳ ಪ್ರಶ್ನೆ (ಕೆ.ವೈ.ನಾರಾಯಣಸ್ವಾಮಿ), ಪುಗಸಟ್ಟೆ ಪ್ರಸಂಗ (ಹೆಚ್.ಎಲ್.ಕೇಶವಮೂರ್ತಿ), ಕದ್ದವರ್‍ಯಾರಣ್ಣ ಬೀಜಗಳ ಮತ್ತು ಜಾತಿ ಮಾಡಬೇಡಿ ಅಧಿಕಾರದೊಳಗ (ರಾಜಪ್ಪ ದಳವಾಯಿ) ಹೀಗೆ ನಾಟಕಗಳ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ.

ಬೀದಿ ನಾಟಕಗಳ ಪ್ರದರ್ಶನವನ್ನು ಕರ್ನಾಟಕಕ್ಕೆ ಸೀಮಿತಗೊಳಿಸದ ಭಾವೈಕ್ಯತಾ ವೇದಿಕೆಯು ಭಾರತದ ಹಲವು ರಾಜ್ಯಗಳಲ್ಲಿ ಸಂಚರಿಸಿ ಬೀದಿ ನಾಟಕಗಳ ಮೂಲಕ ಸಾಮಾಜಿಕ ನ್ಯಾಯದ ಪರಿಕಲ್ಪನೆಯನ್ನು ಸಾರಿದೆ. ದೆಹಲಿ, ಗುಹಾವಟಿ, ಪಾಟ್ನಾ, ಚೆನ್ನೈ, ತಿರುಚೂರು, ಕಲ್ಕತ್ತಾ, ಮುಂಬೈ, ಹೈದ್ರಾಬಾದ್ ಮುಂತಾದೆಡೆ ನಾಟಕಗಳನ್ನು ಪ್ರದರ್ಶಿಸಿದೆ. ಇಂದು ಭಾವೈಕ್ಯತಾ ವೇದಿಕೆ ರಂಗ ಚಟುವಟಿಕೆ ನಡೆಸಲಿಕ್ಕೆ ಬೇಕಾದ ವ್ಯವಸ್ಥೆಯನ್ನು ಹೊಂದಿದೆ. 30X40 ರಂಗಮಂದಿರ, 30X25 ತಾಲೀಮು ಕೊಠಡಿ, ಅತಿಥಿ ಗೃಹ, ರಂಗ ಸಜ್ಜಿಕೆ, ಕಾಸ್ಟ್ಯೂಮ್ ಸಂಗ್ರಹಣ ಕೊಠಡಿ, ರಂಗಭೂಮಿ ಸಾಹಿತ್ಯ ಒಳಗೊಂಡ ಗ್ರಂಥಾಲಯ ಹೊಂದಿದೆ.

ರಂಗಭೂಮಿಗೆ ಅಬ್ದುಲ್‌ರವರು ಅಕಾಡೆಮಿಕ್ ಆಗಿ ಬಂದವರಲ್ಲ, ರಂಗ ಸಾಧ್ಯತೆಯನ್ನು ಶಾಸ್ತ್ರೀಯವಾಗಿ ಕಲಿತವರೂ ಅಲ್ಲ. ಬಾಲ್ಯದಲ್ಲಿಯೇ ತಂದೆಯನ್ನು ಕಳೆದುಕೊಂಡು ಚಿಕ್ಕಪ್ಪರಾದ ಹೆಚ್.ಇಬ್ರಾಹಿಂ ಸಾಹೇಬರ (ಶಿವಮೊಗ್ಗದ ಇಬ್ರಾಹಿಂ ಸಾಹೇಬರು) ಆಶ್ರಯದಲ್ಲಿ ಶಿವಮೊಗ್ಗದಲ್ಲಿ ಬೆಳೆದ ಅಬ್ದುಲ್ಲರು ಪಿ.ಯು.ಸಿ. ತಲುಪುವ ಹೊತ್ತಿಗೆ ಸಾಹಿತ್ಯ, ಕಾವ್ಯ, ಜಾನಪದ, ಚಲನಚಿತ್ರ ರಂಗಭೂಮಿ ಹೀಗೆ ಪ್ರಭಾವಿತರಾಗಿ ಡಾ. ರಾಜೇಂದ್ರ ಚೆನ್ನಿ, ಓ.ಎಲ್.ನಾಗಭೂಷಣಸ್ವಾಮಿ, ಸತ್ಯನಾರಾಯಣ ಅಣತಿ, ನಂಜುಂಡಸ್ವಾಮಿ, ಜೆ.ಪಿ.ಬಸವರಾಜ, ಟಿ.ಆರ್.ಚಂದ್ರಶೇಖರ, ಯಶೋಧಮ್ಮ, ಭೀಮಸೇನರಾವ್, ಮಲ್ಲರಿ ದೀಕ್ಷಿತ್, ರುದ್ರಯ್ಯ, ಯು.ರಾಘವೇಂದ್ರರಾವ್ ಮುಂತಾದವರ ಸಂಪರ್ಕ ಬೆಳೆಸಿಕೊಂಡರು. ಸಹ್ಯಾದ್ರಿ ಚಿತ್ರ ಸಮಾಜದ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಹಲವು ಹೋರಾಟಗಳಲ್ಲಿ, ವಿಚಾರ ಸಂಕೀರ್ಣಗಳಲ್ಲಿ, ಬೀದಿ ನಾಟಕಗಳಲ್ಲಿ ಸಾಹಿತ್ಯ, ಕಾವ್ಯ ಸೆಳೆತಗಳಲ್ಲಿ ಸಿಕ್ಕು ಸಾಂಸ್ಕೃತಿಕ ವ್ಯಕ್ತಿತ್ವವನ್ನು ಪಡೆದಿದ್ದಾರೆ. ಇದು ಮುಂದೆ ಪಕ್ವತೆ ಪಡೆದು ಹೊಸಪೇಟೆಯಲ್ಲಿ ಭಾವೈಕ್ಯತೆಯ ವೇದಿಕೆಯ ಮೂಲಕ ಅನಾವರಣಗೊಂಡಿದೆ. ಅಬ್ದುಲ್ಲರು ರಂಗಪಯಣದ ಹಾದಿಯಲ್ಲಿ ಸಿಗುವ ಮಕ್ಕಳನ್ನೇ ತಮ್ಮವೆಂದು ಭಾವಿಸಿ, ಮದುವೆಗಲೇ ಇಲ್ಲ.

ಭಾವೈಕ್ಯತೆ ವೇದಿಕೆಯ ಪಿ.ಅಬ್ದುಲ್ಲ ಅವರಿಗೆ ಹಲವು ಪ್ರಶಸ್ತಿ, ಸನ್ಮಾನ, ಗೌರವಗಳು ಲಭಿಸಿವೆ. 2002 ರಲ್ಲಿ ಕನ್ನಡ ಕಲಾ ಸಂಘ ತುಂಗಭದ್ರಾ ಡ್ಯಾಂ ಇವರು "ಬೀದಿ ನಾಟಕ ಸಾರ್ವಭೌಮ" ಎಂದು ಬಿರುದು ನೀಡಿದ್ದಾರೆ. 2004 ರಲ್ಲಿ ಹೊಸಪೇಟೆಯ ಮುಸ್ಲಿಂ ವೆಲ್‌ಫೇರ್ ಅಸೋಸಿಯೇಶನ್ "ಕರ್ನಾಟಕದ ಬಾದಲ್ ಸರ್ಕಾರ್" ಎಂದು ಬಿರುದು ನೀಡಿದೆ. 2006 ರಲ್ಲಿ ಪ್ರತಿಷ್ಠಿತ "ಸಂದೇಶ" ಪ್ರಶಸ್ತಿಯನ್ನೂ ಪಡೆದಿದ್ದಾರೆ. 2009 ರಲ್ಲಿ ರಂಗಚೇತನ ಸಾಂಸ್ಕೃತಿಕ ಕೇಂದ್ರದಿಂದ "ಸಿ.ಜಿ.ಕೆ." ಪ್ರಶಸ್ತಿಯನ್ನು ಪಡೆದಿದ್ದಾರೆ. ಹೀಗೆ ರಾಜ್ಯಮಟ್ಟದ ಹಲವು ಪ್ರಶಸ್ತಿ ಬಿರುದುಗಳು ಭಾವೈಕ್ಯತೆದೊಡನೆ ಬಂದು ಸೇರಿವೆ. ಆದರೆ ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ ಇವರು ಒಲೆಯಲು ಅಂಜಿಕೊಳ್ಳುತ್ತಿದೆಯೇನೋ?



ಹೊಸಪೇಟೆಯಿಂದ ಹಂಪಿಯ ಕನ್ನಡ ವಿಶ್ವವಿದ್ಯಾಲಯಕ್ಕೆ ಹಾದು ಹೋಗುವ ಸಾಹಿತಿಗಳು, ರಂಗಕರ್ಮಿಗಳು, ಪ್ರಗತಿಪರರು ಸಿದ್ಧಲಿಂಗಪ್ಪ ಚೌಕಿಯ ಕೊಳಗೇರಿಯಲ್ಲಿ ಅರಳಿ ನಿಂತಿರುವ ಭಾವೈಕ್ಯತಾ ವೇದಿಕೆಗೆ ಬಂದು ವಿಶ್ರಮಿಸಿ ತೆರಳುತ್ತಾರೆ.

● ಹಾಲ್ಕುರಿಕೆ ಶಿವಶಂಕರ್


ಆದದ್ದೆಲ್ಲ ಒಳಿತೇ ಆಯಿತು ಎನ್ನುವಂತೆ ಆರಂಭದಲ್ಲಿ ಓದುಗರಿಗೆ ಕೊಂಚ ಮುಜುಗರ ಹಾಗು ಗೊಂದಲಗಳನ್ನು ತಂದರೂ ಲಂಕೇಶ್ ಮರುಹುಟ್ಟು ಪಡೆದು ಇದೀಗ ಬೆಳೆಯುತ್ತಿರುವ ರೀತಿಯನ್ನು ನೋಡಿದರೆ ಸಂತೋಷವಾಗುತ್ತಿದೆ. ಗೌರಿ ಮೇಡಮ್ ಹಾಗು ಪಾರ್ವತೀಶರ ನೇತೃತ್ವದಲ್ಲಿ ತಂಡದ ಮುಂದಿನ ಕನಸಾದ ಲಂಕೇಶ್ ಮೀಡಿಯಾ ಇನ್ನಷ್ಟು ಬೆಳಗಲಿ ಎಂದು ಓದುಗರೆಲ್ಲರ ಹಾರೈಕೆ.

- ರವಿ ಪುತ್ತೂರ, ದ.ಕ

ಸಂದರ್ಶನ ಮಾಲಿಕೆ ಚೆನ್ನಾಗಿದೆ

'ಲಂಕೇಶ್'ನಲ್ಲಿ ಪ್ರಕಟವಾಗುತ್ತಿರುವ ಸಾಹಿತಿ ಕಲಾವಿದ 'ನುಡಿಗನ್ನಡಿ' ಸಂದರ್ಶನ ಮಾಲಿಕೆ ಚೆನ್ನಾಗಿದೆ. ನಮ್ಮ ಕರ್ನಾಟಕದ ಸಾಹಿತ್ಯ ಹಾಗೂ ಸಾಮಾಜಿಕ ಬದುಕನ್ನು ಪ್ರಭಾವಿಸಿರುವ ಬೇರೆ ಬೇರೆ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡಿರುವವರ ಜೊತೆಗಿನ ಮಾತುಕತೆಗಳು ಆಸ

ಸುದೀಪ್ ಹೊಸ ಸಿನಿಮಾ ಯಾವುದು?




ಈಗ 'ಬಿಗ್‌ಬಾಸ್' ಕಾರ್ಯಕ್ರಮ ಮುಗಿದಿರುವುದರಿಂದ ಗಾಂಧಿನಗರದವರ ಕಣ್ಣು ನಾಯಕ ನಟ ಸುದೀಪ್ ಮೇಲೆ ಬಿದ್ದಿದೆ. ಸುದೀಪ್ ನಟಿಸುವ ಮುಂದಿನ ಚಿತ್ರ ಯಾವುದು ಎಂಬುದರ ಬಗ್ಗೆ ಗಾಂಧಿನಗರದಲ್ಲಿ ಚರ್ಚೆ ಆರಂಭವಾಗಿದೆ.

ಬಹಳ ವರ್ಷಗಳ ಹಿಂದೆಯೇ ನಿರ್ಮಾಪಕರಾದ ಕೆ.ಸಿ.ಎನ್ ಕುಮಾರ್, ಚಂದ್ರಶೇಖರ್ ಮತ್ತು ಸೂರಪ್ಪ ಬಾಬು ಸುದೀಪ್‌ಗೆ ಮುಂಗಡ ಸಂಭಾವನೆಯನ್ನು ಕೊಟ್ಟು ಕಾಲ್‌ಶೀಟ್‌ಗಾಗಿ ಕಾಯುತ್ತಿದ್ದಾರೆ. ಆದರೆ ಸುದೀಪ್ ಈ ಸೀನಿಯಾರಿಟಿಯಲ್ಲೇ ಕಾಲ್‌ಶೀಟ್ ನೀಡಬೇಕಾಗೇನೂ ಇಲ್ಲ. ಅಂದರೆ ಯಾರ ಚಿತ್ರ ಬೇಕಾದರೂ ಮೊದಲು ಆರಂಭವಾಗಬಹುದು. ಮೊದಲು ಆರಂಭವಾದವನಿಗೆ ವ್ಯವಹಾರಿಕವಾಗಿ ಲಾಭ ಜಾಸ್ತಿ ಇರುವುದರಿಂದ ಸುದೀಪ್ ಕಾಲ್‌ಶೀಟ್‌ಗಾಗಿ ಮೂವರು ಭಗೀರಥ ಪ್ರಯತ್ನ ನಡೆಸುತ್ತಿದ್ದಾರೆ.

ಕುಮಾರ್ ಚಿತ್ರವನ್ನು ಆರಂಭದಲ್ಲಿ ಡ್ಯಾನ್ಸ್ ಡೈರೆಕ್ಟರ್ ಹರ್ಷ ನಿರ್ದೇಶಿಸಬೇಕಿತ್ತು, ಆದರೆ 'ನೀವೇ ಈ ಚಿತ್ರವನ್ನು ನಿರ್ದೇಶಿಸಿ' ಎಂದು ಕುಮಾರ್ ಸುದೀಪ್ ಅಂಗಳಕ್ಕೆ ಬಾಲ್ ಹಾಕಿದರು. ಚಂದ್ರಶೇಖರ್ ನಿರ್ಮಾಣದ ಚಿತ್ರವನ್ನು ನಿರ್ದೇಶಕ ಪ್ರೇಮ್ ಡಿಸೆಂಬರ್ 31ರ ಮಧ್ಯರಾತ್ರಿ ಘೋಷಿಸುತ್ತಾರೆಂದು ಸುದ್ದಿ ಆಗಿತ್ತು, ಆದರೀಗ ಪ್ರೇಮ್ ಆ ಪ್ರಾಜೆಕ್ಟ್‌ನಲ್ಲೇ ಇಲ್ಲ, ಮತ್ತೊಂದೆಡೆ ಸೂರಪ್ಪ ಬಾಬು ಚಿತ್ರವನ್ನು ಯೋಗರಾಜ್ ಭಟ್ ನಿರ್ದೇಶಿಸುವ ಸುದ್ದಿ ಗಾಂಧಿನಗರದಿಂದ ಕೇಳಿ ಬಂದಿತ್ತು, ಈಗ ಭಟ್ ಅವರು ಓಂದಿಗೆ ಹೋಗುತ್ತಿರುವುದರಿಂದ ಅವರ ಸ್ಥಾನದಲ್ಲಿ 'ಪರಿಯಪ್ಪ' ಖ್ಯಾತಿಯ ಕೆ.ಎಸ್. ರವಿಕುಮಾರ್ ಅವರನ್ನು ಸೂರಪ್ಪ ಬಾಬು ಹಾಕಿಕೊಂಡಿದ್ದಾರೆ.

ಸುದೀಪ್ ಅವರ ಅಭಿಮಾನಿಗಳು ಮಾತ್ರ ಯಾವ ನಿರ್ಮಾಪಕರ ಸಿನಿಮಾಗೆ ಒಪ್ಪುತ್ತಾರೆ ಎಂಬುದರ ಬದಲಾಗಿ ಆದಷ್ಟು ಬೇಗ ಸುದೀಪ್ ಸಿನಿಮಾ ಸೆಟ್ಟೇರಿದರೆ ಸಾಕು ಎಂದು ಕಾಯುತ್ತಿದ್ದಾರೆ. ●

ಶಿವಣ್ಣನ ಬರ್ತಡೇ ಸ್ಪೆಷಾಲಿಟಿ



ಬರುವ ಜುಲೈ 12 ರಂದು ಶಿವರಾಜ್‌ಕುಮಾರ್ ಅವರ 51ನೇ ಹುಟ್ಟು ಹಬ್ಬ.

ಕಳೆದ ವರ್ಷ ಶಿವಣ್ಣನವರ ಅಭಿಮಾನಿಗಳು ಅವರ 50ನೆಯ ಹುಟ್ಟುಹಬ್ಬವನ್ನು ಅತ್ಯಂತ ಅದ್ದೂರಿಯಾಗಿಯೂ, ಅರ್ಥಪೂರ್ಣವಾಗಿಯೂ ಆಚರಿಸಿದ್ದರು. ಅಂದು ಎರಡು ಆಂಬ್ಯುಲೆನ್ಸ್‌ಗಳನ್ನಲ್ಲದೆ 50 ಆಟೋರಿಕ್ಷಾಗಳನ್ನು ಮತ್ತು 50 ಶಾಲೆಗಳ ಬಡ ಮಕ್ಕಳಿಗೆ ಪುಸ್ತಕ ವಿತರಣೆಯನ್ನು ಮಾಡುವ ಮುಖಾಂತರ ಶಿವಣ್ಣ ಮತ್ತು ಅವರ ಅಭಿಮಾನಿಗಳು ಇತರರಿಗೆ ಮಾದರಿಯಾಗುವ ರೀತಿಯಲ್ಲಿ ವರ್ತಿಸಿದ್ದರು.

ಈ ಬಾರಿ ಮತ್ತೆ ಹುಟ್ಟುಹಬ್ಬವನ್ನು ಆಡಂಬರವಾಗಿ ಆಚರಿಸುವುದು ಬೇಡವೇ ಬೇಡ ಎಂದು ಶಿವಣ್ಣ ತಮ್ಮ ಅಭಿಮಾನಿಗಳಿಗೆ ಕಟ್ಟುನಿಟ್ಟಾಗಿ ಆದೇಶ ನೀಡಿದ್ದಾರಂತೆ. "ಬದಲಿಗೆ ಆ ಹಣವನ್ನು ಉತ್ತರಾಖಂಡದ ಹಿಮಾಲಯ ಸುನಾಮಿಯಲ್ಲಿ ಮುಳುಗಿದ ಸಂತ್ರಸ್ತರಿಗೆ ನೀಡೋಣ" ಎಂಬುದು ಶಿವಣ್ಣನವರ ...ಿ. ಹೀಗಾಗಿ ಜುಲೈ 12 ರಂದು ಮುಖ್ಯಮಂತ್ರಿ ಸಿದ್ದರಾಮಯ್ಯನವರನ್ನು ಭೇಟಿಯಾಗಿ ಮುಖ್ಯಮಂತ್ರಿ ಪರಿಹಾರ ನಿಧಿಗೆ ...ದಿಷ್ಟು ದೇಣಿಗೆಯನ್ನು ನೀಡುವ ಉದ್ದೇಶವನ್ನು ಶಿವರಾಜ್‌ಕುಮಾರ್ ಹೊಂದಿದ್ದಾರೆ.

... ನಟನೊಬ್ಬ ಈ ರೀತಿ ...ಮಾಜಮುಖಿಯಾಗಿ ...ರ್ಯನಿರ್ವಹಿಸುತ್ತಿರುವುದು ...ಜಕ್ಕೂ ಸ್ವಾಗತಾರ್ಹ.



ಮನೋರಂಜನ್ & ರವಿಚಂದ್ರನ್

ರವಿಚಂದ್ರನ್ ತಮ್ಮ ಮಗ ಮನೋರಂಜನ್‌ಗಾಗಿ ನಿರ್ಮಿಸಿ ನಿರ್ದೇಶಿಸಲಿರುವ 'ಅಂದು' ಚಿತ್ರದ ಬಗ್ಗೆ ಅಧಿಕೃತವಾಗಿ ಕ್ರೇಜಿಸ್ಟಾರ್ ಈ ತನಕ ಏನನ್ನೂ ಹೇಳಿಲ್ಲ. ಆದರೂ ಆ ಚಿತ್ರದ ಬಗ್ಗೆ ಹೆಚ್ಚಿನ ಸುದ್ದಿ ಗಾಂಧಿನಗರದಲ್ಲಿ ಸುಳಿದಾಡುತ್ತಿವೆ.


ಅಂತಹ ಒಂದು ಸುದ್ದಿಯ ಪ್ರಕಾರ 'ಅಂದು' ಚಿತ್ರದಲ್ಲಿ ಮನೋರಂಜನ್ ತಂದೆಯಾಗಿ ಸ್ವತಃ ರವಿಚಂದ್ರನ್ ನಟಿಸಲಿದ್ದಾರಂತೆ. ಅಷ್ಟೇ ಅಲ್ಲ, ಆ ಚಿತ್ರದಲ್ಲಿ ನಾಯಕ ನಟ ಮನೋರಂಜನ್‌ನ ಗೆಳೆಯನಾಗಿ ಆತನ ಸಹೋದರ ವಿಕ್ರಮ್ ನಟಿಸಲಿದ್ದಾನಂತೆ. ಅಂದರೆ ಒಂದೇ ಚಿತ್ರದಲ್ಲಿ ಅಪ್ಪ ಮತ್ತು ಇಬ್ಬರು ಪುತ್ರರು ಕಾಣಿಸಿಕೊಳ್ಳಲಿದ್ದಾರೆ.

ಆದರೆ ಇಲ್ಲಿಯತನಕ ಇವೆಲ್ಲ ಗಾಳಿ ಸುದ್ದಿ. ಇದನ್ನು ಸ್ವತಃ ರವಿಚಂದ್ರನ್ ಅವರೇ ಅಧಿಕೃತವಾಗಿ ಘೋಷಣೆ ಮಾಡಿದಾಗ ಮಾತ್ರ ನಂಬಬಹುದು. ●

ಇಲ್ಲಿರಲಾರೆ-ಅಲ್ಲಿಗೆ ಹೋಗಲಾರೆ

ಚಿತ್ರರಂಗದ ಮಾಯೆ ಯಾರನ್ನೂ ಬಿಡುವುದಿಲ್ಲ, ಅದರಲ್ಲೂ ಒಮ್ಮೆ ಮುಖಕ್ಕೆ ಬಣ್ಣ ಬಳಿದುಕೊಂಡವರು ನಟನಾ ವೃತ್ತಿಯಲ್ಲೇ ಮುಂದುವರೆಯಲು ಬಯಸುತ್ತಾರೆ. ಬಣ್ಣದ ಲೋಕದ ಇಂತಹ ಸೆಳೆತದಲ್ಲಿ ಈಗ ಸಚಿವರಾಗಿರುವ ಅಂಬರೀಶ್ ಮತ್ತು ಉಮಾಶ್ರೀ ಸಿಲುಕಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯನವರ ಸರ್ಕಾರದಲ್ಲಿ ಕ್ಯಾಬಿನೆಟ್ ಸಚಿವರಾಗಿರುವ ಅಂಬರೀಶ್ ಮತ್ತು ಉಮಾಶ್ರೀಯವರಿಗೆ ತೂಕದ ಇಲಾಖೆಗಳನ್ನು ನೀಡಿರುವುದರಿಂದ ಇವರಿಬ್ಬರಿಗೂ ಈಗ ಇತರೆ ಕೆಲಸಗಳಿಗೆ ಈಗ ಪುರುಸೊತ್ತೆ ಇಲ್ಲ, ಆದರೂ ಇವರಿಬ್ಬರನ್ನು ಸಿನಿಮಾ ಲೋಕದ ಜನ ಸುಮ್ಮನೆ ಇರಲು ಬಿಡುತ್ತಾರೆ?



ಇವರಿಬ್ಬರನ್ನು ತಮ್ಮ ಸಿನಿಮಾದಲ್ಲಿ ಸೇರಿಸಿಕೊಳ್ಳಲು ಈಗ ಗಾಂಧಿನಗರದ ಹಲವರು ಪ್ರಯತ್ನಿಸುತ್ತಿದ್ದಾರೆ. ಅದಕ್ಕೆ ಮುಖ್ಯ ಕಾರಣ ಇದರಿಂದ ತಮ್ಮ ಸಿನಿಮಾಗೆ ಸಿಗುವ ಪುಕ್ಕಟೆ ಪ್ರಚಾರ. ಈ ಕಾರಣಕ್ಕೇ ಈಗ ಒಂದು ರೀತಿಯಲ್ಲಿ ಇವರಿಬ್ಬರೂ ಮಂತ್ರಿಯಾದ ನಂತರ ಗಾಂಧಿನಗರದಿಂದ ಬೇಡಿಕೆ ಕೂಡ ಏಕ್‌ದಮ್ ಹೆಚ್ಚಾಗಿದೆ. ಒಂದು ಸುದ್ದಿಯ ಪ್ರಕಾರ 'ಈ ಕೆಂಪೇಗೌಡ ನಗರ' ಎಂಬ ಚಿತ್ರದಲ್ಲಿ ಅಂಬರೀಶ್ ಮತ್ತು ಉಮಾಶ್ರೀಯವರು ನಟಿಸುವುದು ಖಚಿತವಾಗಿದೆಯಂತೆ.

ಈಗ ರಾಜಕಾರಣವೇ 24X7 ಕೆಲಸವಾಗಿದೆ. ಅದರಲ್ಲೂ ಮಂತ್ರಿಗಿರಿ ತರಹದ ಜವಾಬ್ದಾರಿಯನ್ನು ಯಾರೂ ಹವ್ಯಾಸವಾಗಿ ಪರಿಗಣಿಸಕೂಡದು. ಹೀಗಿರುವಾಗ ಇವರಿಬ್ಬರು ಸರ್ಕಾರ ತಮಗೆ ಕೊಟ್ಟಿರುವ ಕೆಲಸವನ್ನು ಬದಿಗಿಟ್ಟು ಮತ್ತೆ ಮುಖಕ್ಕೆ ಬಣ್ಣ ಹಚ್ಚಿ ಸಮಯ ಕಳೆಯುವುದು ಎಷ್ಟು ಸರಿ ಎಂಬ ಪ್ರಶ್ನೆ ಸಹಜವಾಗಿಯೇ ಉದ್ಭವಿಸುತ್ತದೆ. ಇದಕ್ಕೆ ಇವರಿಬ್ಬರು ಉತ್ತರ ನೀಡುತ್ತಾರೆಯೇ?

● ಶೆಣೈ

'ಲಂಕೇಶ್ ಮೀಡಿಯಾ' ಇನ್ನಷ್ಟು ಬೆಳಗಲಿ

...ಗರಿಗೆ ಉಪಯುಕ್ತಕರವಾಗಿವೆ. ಹಾಗೆಯೇ ಕರ್ನಾಟಕದ ...ತಂಡಗಳ ಪರಿಚಯ ಮಾಲಿಕೆಯೂ ವಿಭಿನ್ನವಾಗಿದೆ.

- ರವೀಶ್, ಚಿತ್ರದುರ್ಗ

ಶಕೀಲಾ ಔದಾರ್ಯದ ಹೆಣ್ಣುಮಗಳು

...ನಟಿ ಶಕೀಲಾ ದುರಂತದತ್ತ ಸಾಗುತ್ತಿರುವ ಬಗ್ಗೆ ...ಕೇಶ್'ನಲ್ಲಿ ಓದಿ ವ್ಯಥೆಯಾಯಿತು. ನಾನು ಚಿತ್ರರಂಗದಲ್ಲಿ ...ಯುತ್ತಿದ್ದಾಗ ಶೂಟಿಂಗ್ ಸಮಯದಲ್ಲಿ ಶಕೀಲಾರನ್ನು ...ೇಕ ಬಾರಿ ನೋಡಿದ್ದೇನೆ. ಆಕೆ ಸಾಮಾನ್ಯ ...ಗಾರರೊಂದಿಗೂ ಸೌಜನ್ಯದಿಂದ ನಡೆದುಕೊಳ್ಳುತ್ತಿದ್ದರು. ...ೂರು ಅಹಂಕಾರ ತೋರಿಸುತ್ತಿರಲಿಲ್ಲ, ಅಲ್ಲದೆ ಒಂದು ...ಮಾ ಕೆಲಸ ಮುಗಿಸಿ ಕುಂಬಳಕಾಯಿ ಒಡೆದಾಗ ಶಕೀಲಾ ...ರಡುವ ಮುನ್ನ ಹತ್ತಾರು ಸಾವಿರ ರೂಪಾಯಿಗಳನ್ನು ...ನಿಟ್ ಹುಡುಗರಿಗೆ ನೀಡುತ್ತಿದ್ದರು. ನಾವದನ್ನು ...ಕೊಳ್ಳುತ್ತಿದ್ದೆವು. ಇವತ್ತಿನ ಕೆಲ ಫೇಮಸ್ ಹೀರೋಗಳು ...ಮುಂತರಾದರೂ ಹತ್ತು ರೂಪಾಯಿ ಎತ್ತಿ ಕೊಡುವುದಿಲ್ಲ, ...ಶಕೀಲಾ ಜೀವನದಲ್ಲಿ ನೆಮ್ಮದಿ-ಸುಖ ಇರಲಿ ಎಂದು ...ಹಾರೈಕೆ.

- ರಾಜು, ಬೆಂಗಳೂರು

ಹೊಸ ಚಟಗಳಿಗೆ ಬಲಿಯಾಗುತ್ತಿರುವ ಮಕ್ಕಳು

...ತ್ತೀಚಿನ ದಿನಗಳಲ್ಲಿ ಮಕ್ಕಳು ಹೊಸದೊಂದು ಮಾದಕ ...ಗೆ ಬಲಿಯಾಗುತ್ತಿದ್ದಾರೆ. ಈ ವಸ್ತು ಬೇರಾವುದೋ ..., ಒಪಿಯಂ ತರಹದ ಡ್ರಗ್ಸ್ ಅಲ್ಲ, ಬದಲಾಗಿ ...ನೆಲ್ಲ ನಿತ್ಯ ಬಳಸುವ ಅಂಗಡಿಗಳಲ್ಲಿ ಸುಲಭವಾಗಿ ...ಗುವ, ಅಗ್ಗವಾದ ಬೆಲೆಯಲ್ಲಿ ಕೈಗೆಟುಕುವ ಅಂಟು ...ನರ್, ಪೇಂಟ್, ಮಾರ್ಕರ್, ಇತ್ಯಾದಿ). ಅದಕ್ಕೂ ... ಇಂತಹವುಗಳಿಂದ ಹಾಳಾಗುತ್ತಿದ್ದಾರೆ. ಗುರುತಿಸ್ತಿದ್ದಾರೆ.

ಕಡಿಮೆ ದರದಲ್ಲಿ ಸ್ಟೇಷನರಿ ಅಂಗಡಿಗಳಲ್ಲಿ ಸುಲಭವಾಗಿ ಸಿಕ್ಕುವ ವೈಟನರ್, ಅಂಟು ಇತ್ಯಾದಿ ಖರೀದಿಸುವ ಮಕ್ಕಳು ಇದನ್ನು ಹಳೆಯ ಬಟ್ಟೆ, ಕರವಸ್ತ್ರಗಳಲ್ಲಿ ಸುರಿದು ನಂತರ ಅದನ್ನು ಮಡಚಿ ಅದನ್ನು ಮೂಗಿನಿಂದ ಸೇವಿಸುತ್ತಾರೆ. ಇದು ಅವರಿಗೊಂದು ರೀತಿಯ ಮಜಾ-ಕಿಕ್ ಕೊಡುತ್ತದೆ.



ಇವುಗಳನ್ನು ಮಕ್ಕಳು ಸೇವಿಸಿದ್ದಾರೆಯೋ ಇಲ್ಲವೋ ಎಂದು ಕಂಡುಹಿಡಿಯುವುದು ಕಠಿಣ. ಆದರೆ ಕಷ್ಟವಲ್ಲ, ಇಲ್ಲಿವೆ ಕೆಲವು ಮಾರ್ಗ:

1. ಮಕ್ಕಳ ಶ್ವಾಸದಿಂದ ಅಂಟು, ವೈಟನರ್ ತರಹದ ವಾಸನೆಗಳು ಹೊಮ್ಮಿದಾಗ.
2. ಮಕ್ಕಳ ಬಟ್ಟೆಯ ಮೇಲೆ ಪೇಂಟ್ ಅಥವಾ ಬಣ್ಣದ ಕಲೆಗಳು ಕಂಡುಬಂದಾಗ.
3. ಮೂಗು ಮತ್ತು ಬಾಯಿಯ ಸುತ್ತಮುತ್ತ ವಿಚಿತ್ರ ಕಲೆಗಳು ಎದ್ದಾಗ.
4. ಮಕ್ಕಳು ತಡರಾತ್ರಿ, ಅಸ್ವಸ್ಥರಾದಾಗ.
5. ಮಕ್ಕಳ ಶೈಕ್ಷಣಿಕ ಬೆಳವಣಿಗೆ ಧಿಡೀರನೆ ಕುಸಿದಾಗ, ಮುಂತಾದ ಸಂದರ್ಭಗಳಲ್ಲಿ ಮಕ್ಕಳು ಇಂತಹ ಮಾದಕ ವಸ್ತುವಿಗೆ ಬಲಿಯಾಗಿದ್ದಾರೆ ಎಂದು ಗುರುತಿಸಲು ಸಹಾಯಕರವಾಗುತ್ತದೆ.

ಈಗ ಬೀದಿಯಲ್ಲಿ ಓಡಾಡುವ ಅನಾಥ ಮಕ್ಕಳಷ್ಟೇ ಇಂತಹವುಗಳಿಗೆ ಬಲಿಯಾಗುವುದಿಲ್ಲ, ಶಾಲೆಯಲ್ಲಿ ಓದುವ ಅದೆಷ್ಟೋ ಹುಡುಗರು ಕೂಡ ಬಲಿಯಾಗುತ್ತಿದ್ದಾರೆ. ಇದು ಮಕ್ಕಳನ್ನು ಆವರಿಸಿ ನಾಳೆ ದಿನ ಅವರನ್ನು ದೊಡ್ಡ ದೊಡ್ಡ ಡ್ರಗ್‌ಗಳತ್ತ ಎಳೆಯುತ್ತದೆ. ಮಕ್ಕಳತ್ತ ಉದಾಸೀನತೆ ತೋರಿಸುವ ಅದೆಷ್ಟೋ ಪಾಲಕರಿದ್ದಾರೆ. ಅಂತಹವರಿಂದ ಪ್ರೀತಿ ಕಾಣದಾಗಿ ಮಕ್ಕಳು ಇಂತಹ ಚಟಗಳಿಗೆ ಬಲಿಯಾಗುವುದು ಹೆಚ್ಚು. ಇನ್ನು ಬಡತನದಿಂದ ಓದಲಾಗದೆ ಹೋಟೆಲ್ ಕೆಲಸವೋ, ಭಿಕ್ಷೆ ಬೇಡಿಯೋ ಜೀವನ ಸಾಗಿಸುತ್ತಿರುವ ಮಕ್ಕಳು ಕೂಡ ಇವುಗಳಿಗೆ ಬಲಿಯಾಗುತ್ತಿದ್ದಾರೆ.

ಮಕ್ಕಳ ಆರೋಗ್ಯದ ಮೇಲೆ ಬಹಳವಾಗಿ ದುಷ್ಪರಿಣಾಮ ಬೀರುವ ಇಂತಹ ಡ್ರಗ್ಸ್ ನ್ಯೂರಾನ್ ಅನ್ನು ಹಾಳುಗೆಡವುತ್ತವೆ. ಆಲೋಚನ ಶಕ್ತಿ ಸ್ಮರಣ ಶಕ್ತಿ ಕಳೆದುಕೊಳ್ಳುತ್ತಾ ಹೋಗುವ ಮಕ್ಕಳು ಯುಫೋರಿಯಾ ಎಂಬ ರೋಗಕ್ಕೆ ಬಲಿಯಾಗಿ ಮೆದುಳು, ಶ್ವಾಸಕೋಶ, ಹೃದಯಗಳು ತಮ್ಮ ಕಾರ್ಯವನ್ನು ಸದಾಕಾಲ ನಿಲ್ಲಿಸಿಬಿಡುತ್ತವೆ. ಮುಂದೆ ರಾಷ್ಟ್ರದ ಪ್ರಜೆಗಳಾಗಬೇಕಾದ ಮಕ್ಕಳು ಮಣ್ಣಾಗಿ ಹೋಗುತ್ತಾರೆ. ಸಾವು ಈ ಡ್ರಗ್ ತೆಗೆದುಕೊಳ್ಳುವವರಿಗೆ ಕಟ್ಟಿಟ್ಟ ಬುತ್ತಿ. ಇಂತಹ ಚಟವನ್ನು ಬೆಳಸಿಕೊಂಡಿರುವ ಮಕ್ಕಳನ್ನು ಮನೋವಿಜ್ಞಾನಿಗಳ ಹತ್ತಿರ ಕರೆದೊಯ್ದು ಮಾರ್ಗದರ್ಶನ ಕೊಡಿಸುವುದು ಅಗತ್ಯ, ಸಾಮಾಜಿಕವಾಗಿ ಹಿಂದುಳಿದ ಮಕ್ಕಳಲ್ಲಿ ಧೈರ್ಯವನ್ನು ತುಂಬಿ ನೀತಿಯುತ ಸಲಹೆಗಳನ್ನು ಕೊಡಬೇಕಾಗುತ್ತದೆ. ಅಂಗಡಿ ವ್ಯಾಪಾರಿಗಳು ಮಕ್ಕಳಿಗೆ ವೈಟನರ್, ಪೇಂಟ್, ಅಂಟು ಮುಂತಾದವುಗಳನ್ನು ಮಾರದಂತೆ ನೋಡಿಕೊಳ್ಳಬೇಕಿದೆ.

- ಅಭಿನಂದನ್, ಬಳ್ಳಾರಿ

2008ರ ಹಗರಣವೂ ತನಿಖೆಯಾಗಲಿ

ಪ್ರಸ್ತುತ ಕೆಎಎಸ್ ಹಗರಣದಂತೆ 2008-09ರಲ್ಲೂ ಇದೇ ಕೆಪಿಎಸ್‌ಸಿಯಿಂದ ನಡೆದ 2,550 ಪದವಿ ಕಾಲೇಜ್ ಉಪನ್ಯಾಸಕರ ನೇಮಕಾತಿಯಲ್ಲೂ ಶೇ. 90 ಹುದ್ದೆಗಳು ಹರಾಜಾಗಿ ಮಾರಾಟ ಆಗಿವೆ. ಪ್ರತಿ ಹುದ್ದೆಗೆ ಕನಿಷ್ಠ ಮೂರರಿಂದ ಗರಿಷ್ಠ 12 ಲಕ್ಷ ರೂಪಾಯಿಗಳವರೆಗೆ ಲಂಚ ಪಡೆದಿದ್ದಾರೆ. ನಕಲಿ ಎಂಫಿಲ್, ಜಾತಿ, ಸೇವಾ ಪ್ರಮಾಣ ಪತ್ರ ಪಡೆದವರೇ ಆಯ್ಕೆ ಆಗಿದ್ದಾರೆ. ಈ ನೇಮಕಾತಿಗಳನ್ನು ಕೂಡ ಲೋಕಾಯುಕ್ತ, ಸಿಐಡಿ ಅಥವಾ ಸಿಬಿಐ ತನಿಖೆಗೆ ಗುರಿಯಾಗಿಸಲು ಒತ್ತಾಯಿಸಿ ತಮ್ಮ ಪತ್ರಿಕೆ ವರದಿಯನ್ನು ಪ್ರಕಟಿಸಬೇಕಿದೆ. ಅವಕಾಶ ವಂಚಿತರೊಂದ ವಿದ್ಯಾರ್ಥಿಗಳಿಗೆ ನ್ಯಾಯ ಒದಗಿಸಬೇಕೆಂದು ತಮ್ಮಲ್ಲಿ ಕೋರಿಕೆ.

- ಓದುಗ, ಎಸ್‌ಎಂಎಸ್ ಮೂಲಕ

'ಗೋನಾಳ್ ಮಾದರಿ'

ಹಿಂದೊಮ್ಮೆ ಕೆಎಎಸ್‌ನಲ್ಲಿ ಆಯ್ಕೆಯಾದ ಅಭ್ಯರ್ಥಿಯೊಬ್ಬರು ಸಂದರ್ಶನವೊಂದರಲ್ಲಿ ತಮಗೆ ಗೋನಾಳ್ ಭೀಮಪ್ಪನವರೇ ಸ್ಫೂರ್ತಿ ಎಂದು ಹೇಳಿದ ನೆನಪು. ಆ ಅಭ್ಯರ್ಥಿ ಗೋನಾಳ್ ಊರಿನವರು. ಆದರೆ 2011ರ ಬ್ಯಾಚ್‌ನ ಹಗರಣ ನೋಡಿದರೆ ಗೋನಾಳ್ ಭೀಮಪ್ಪನಿಂದ ಎಂತಹ ಸ್ಫೂರ್ತಿ, ಪ್ರೇರಣೆ ಸಿಗಬಹುದೆಂದು ನೆನೆಸಿಕೊಂಡರೆ ಅಸಹ್ಯ ಹುಟ್ಟಿಸುತ್ತದೆ. ಗೋನಾಳ್ ದಡ್ಡನೋ? ಬುದ್ಧಿವಂತನೋ? ಒಂದರ್ಥದಲ್ಲಿ 'ದಡ್ಡ' ಎಂದೇ ಹೇಳಬೇಕಾಗುತ್ತದೆ. ಹಣ ಕೊಟ್ಟವರಿಗೆ ಸಂದರ್ಶನದಲ್ಲಿ ನೀಡಿರುವ ಅಂಕಗಳು ಒಂದೇ ರೀತಿ ಇವೆ. ಒಂದು ಅಂಕ ಕೂಡ ಏರುಪೇರಾಗಿಲ್ಲ. ಎಲ್ಲರಿಗೂ 150. ವಂಚನೆಗೊಳಗಾದವರಿಗೆ ಸಂದರ್ಶನದಲ್ಲಿ ನೀಡಿದ ಅಂಕಗಳಲ್ಲಿ ವ್ಯತ್ಯಾಸವಿದೆ. ಜೈಲಿಗೆ ಕಳುಹಿಸಲು ಇದೊಂದೇ ಅಂಶ ಸಾಕು. ಲಿಖಿತ ಪರೀಕ್ಷೆಯಲ್ಲಿ 543 ಅಂಕ ಪಡೆದವರು ಸಂದರ್ಶನದಲ್ಲಿ 150, ಆದರೆ 1078 ಅಂಕ ಪಡೆದವರಿಗೆ ಸಂದರ್ಶನದಲ್ಲಿ ಬರೀ 75. ಇದು ಗೋನಾಳ್ ಭೀಮಪ್ಪನ 'ಮಾಸ್ಟರ್ ಪ್ಲಾನ್'.

ನಮ್ಮ ಕರ್ನಾಟಕದಲ್ಲಿ ಹಲವಾರು ಮಾದರಿಗಳಿವೆ. ಒಳ್ಳೆಯವು ಕೂಡ ಇವೆ. ಪರೀಕ್ಷೆ ಹಗರಣಗಳಿಗೆ ಸಂಬಂಧಿಸಿದಂತೆ ಹೇಳುವುದಾದರೆ 'ಗೋನಾಳ್ ಮಾದರಿ' ಒಂದು ಕೆಟ್ಟ ಮಾದರಿಯಾಗಿದೆ.

- ಕೆ.ಎಂ.ಓಮುಸಿದ್ದೇಗೌಡ, ಕನಕಪುರ

ವಿ.ಸೂ.: ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ಇ-ಮೇಲ್ ಅಥವಾ ಬಿಡಿ ಪತ್ರದ ಮೂಲಕ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕವಾಗಿ ಕಳುಹಿಸಬಹುದು.

Registered No.KA/RNP/BGS/2036/2011-13 Posted at : GPO, Bangalore-01. Friday R B P LANKESH, Kannada Weekly

ಇಬ್ಬರು ಗೆಳೆಯರ ಸಿನಿಪ್ರಯಾಣ




ಪ್ರಕಾಶ್ ರೈ ಮತ್ತು ಬಿ. ಸುರೇಶ್ ಕಳೆದ ಎರಡು ದಶಕಗಳಿಂದಲೂ ಆತ್ಮೀಯ ಸ್ನೇಹಿತರು. ಆಗ ಇವರಿಬ್ಬರೂ ರವೀಂದ್ರ ಕಲಾಕ್ಷೇತ್ರದ ಮೆಟ್ಟಿಲ ಮೇಲೆ ಕುಳಿತು ಕನಸು ಕಾಣುತ್ತ ಹನುಮಂತನಗರದ 'ಬೆಂಬ' ರಂಗಮಂದಿರದಲ್ಲಿ ನಾಟಕ ಕಲಿಯುತ್ತಿದ್ದವರು. ಆನಂತರ ಪ್ರಕಾಶ್ ರೈ ನಿಧಾನವಾಗಿ ಟಿವಿ ಮತ್ತು ಸಿನಿಮಾಗಳಲ್ಲಿ ಯಶಸ್ಸಿನ ಒಂದೊಂದೇ ಮೆಟ್ಟಿಲನ್ನೇರುತ್ತ ಇಂದು ರಾಷ್ಟ್ರ ಮಟ್ಟದ ತಾರೆಯಾಗಿ ಗುರುತಿಸಿಕೊಂಡಿದ್ದಾರೆ. ಹಾಗೆಯೇ ಬಿ. ಸುರೇಶ್ ಕೂಡ ಕರ್ನಾಟಕದ ಟಿ.ವಿ. ಲೋಕದಲ್ಲಿ ಅನೇಕಾನೇಕ ಮೆಗಾ ಸೀರಿಯಲ್‌ಗಳನ್ನು ನಿರ್ದೇಶಿಸಿ ಯಶಸ್ಸು ಗಳಿಸಿದ್ದಾರೆ. ಜೊತೆಗೆ ಒಂದೆರಡು ಸಿನಿಮಾಗಳನ್ನೂ ನಿರ್ದೇಶಿಸಿರುವ ಸುರೇಶ್ ಚಿತ್ರ ನಿರ್ಮಾಪಕರೂ ಹೌದು.

ಈಗ ಸುರೇಶ್ ಅವರು ಸುದ್ದಿಗದ್ದಲವಿಲ್ಲದೆ ಸುಮಾರು 16 ಕೋಟಿ ರೂಪಾಯಿ ವೆಚ್ಚದ ಹಿಂದಿ ಚಿತ್ರವೊಂದನ್ನು ನಿರ್ಮಿಸಲು ಹೊರಟಿದ್ದಾರೆ. ಈ ಚಿತ್ರದ ನಿರ್ದೇಶಕ ಬೇರೆ ಯಾರೂ ಅಲ್ಲ; ಅವರ ಗರಡಿಯಲ್ಲಿ ಬೆಳೆದು ಚಿತ್ರರಂಗದ ವಿದ್ಯೆಗಳನ್ನು ಕಲಿತ ಯೋಗರಾಜ್ ಭಟ್.

1994 ರಿಂದ 2003ರ ತನಕ - ಅಂದರೆ ಸುಮಾರು ಒಂಭತ್ತು ವರ್ಷಗಳ ಕಾಲ ಯೋಗರಾಜ್ ಭಟ್ ಅವರು ಸುರೇಶ್ ಅವರ ನಿರ್ಮಾಣ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದರು. ಈಗ ತನ್ನ ಶಿಷ್ಯನಿಗೆ ಹಿಂದಿ ಚಿತ್ರರಂಗದಲ್ಲಿ ಚೊಚ್ಚಲ ನಿರ್ದೇಶನ ಮಾಡಲು ಸುರೇಶ್ ಸಹಾಯ ಹಸ್ತ ಚಾಚುತ್ತಿರುವುದು ನಿಜಕ್ಕೂ ಸ್ವಾಗತಾರ್ಹ.

ಈ ಮಧ್ಯೆ ತಮಿಳು, ತೆಲುಗು, ಹಿಂದಿ, ಮಲೆಯಾಳಂ ಚಿತ್ರರಂಗದಲ್ಲೆಲ್ಲಾ ತನ್ನ ಕೀರ್ತಿ ಪತಾಕೆಯನ್ನು ಹಾರಿಸಿರುವ ಪ್ರಕಾಶ್ ರೈ ಈಗ ಮತ್ತೆ ತನ್ನ ಮಾತೃಭೂಮಿಯಾದ ಕನ್ನಡಕ್ಕೆ ಮರಳುತ್ತಿದ್ದಾರೆ. ಮಲೆಯಾಳಂನಲ್ಲಿ ಸೂಪರ್ ಹಿಟ್ ಆಗಿದ್ದ 'ಸಾಲ್ಟ್ ಅಂಡ್ ಪೆಪ್ಪರ್' ಎಂಬ ಚಿತ್ರವನ್ನು ರೈ ಈಗ ಕನ್ನಡ, ತಮಿಳು ಮತ್ತು ತೆಲುಗು ಭಾಷೆಗಳಲ್ಲಿ ಏಕಕಾಲದಲ್ಲಿ ನಿರ್ದೇಶಿಸಲು ಹೊರಟಿದ್ದಾರೆ. ಕನ್ನಡದ ಮಟ್ಟಿಗೆ ಇದು ರೈ ಅವರ ಎರಡನೇ ನಿರ್ದೇಶನದ ಚಿತ್ರ. ಈ ಹಿಂದೆ ಅವರು 'ನಾನೂ ಮತ್ತು ನನ್ನ ಕನಸು' ಎಂಬ ಚಿತ್ರವನ್ನು ತನ್ನ ಗೆಳೆಯ ಸುರೇಶ್ ಜೊತೆ ಸೇರಿಕೊಂಡು ನಿರ್ಮಿಸಿದ್ದರಲ್ಲದೆ ಆ ಚಿತ್ರವನ್ನು ಸ್ವತಃ ಅವರೇ ನಿರ್ದೇಶಿಸಿದ್ದರು. ಆದರೆ ಈ ಬಾರಿ ಸುರೇಶ್ ಅವರದ್ದು ಬಾಹ್ಯ ಬೆಂಬಲ ಮಾತ್ರವಂತೆ. "ನಾನು ಚಿತ್ರದಲ್ಲಿ ಪಾಲುದಾರನಾಗಿಲ್ಲ, ಆದರೆ ರೈ ಜೊತೆಗೆ ಇಡೀ ಯೋಜನೆಯಲ್ಲಿ ಹೆಗಲಿಗೆ ಹೆಗಲು ಕೊಟ್ಟು ದುಡಿಯುತ್ತೇನೆ" ಎಂದಿದ್ದಾರೆ ಸುರೇಶ್.

'ಸಾಲ್ಟ್ ಅಂಡ್ ಪೆಪ್ಪರ್' ಚಿತ್ರಕ್ಕೆ ಇನ್ನೂ ಕನ್ನಡದಲ್ಲಿ ಹೆಸರಿಟ್ಟಿಲ್ಲ. ಆದರೆ ಈ ಚಿತ್ರದಲ್ಲಿ ತಮಿಳಿನ ನಾಯಕಿ ಸ್ನೇಹಾ, ಊರ್ವಶಿ, ಎಸ್.ಬಿ. ಬಾಲಸುಬ್ರಹ್ಮಣ್ಯಂ ಮೊದಲಾದವರು ನಟಿಸುತ್ತಿದ್ದಾರೆ ಎಂದು ರೈ ಹೇಳಿದ್ದಾರೆ. ಪ್ರೀತಾ ಎಂಬ ಮಹಿಳೆ ಈ ಚಿತ್ರದ ಕ್ಯಾಮರಾ ವುಮೆನ್ ಅಂತೆ.

ಸುರೇಶ್ ಕನ್ನಡದಿಂದ ಹಿಂದಿ ಚಿತ್ರರಂಗದತ್ತ ಪ್ರಯಾಣ ಹೊರಟಿರುವ ಸಮಯದಲ್ಲೇ ಅವರ ಗೆಳೆಯ ರೈ ಕನ್ನಡ ಚಿತ್ರರಂಗಕ್ಕೆ ವಾಪಸ್ ಬರುತ್ತಿರುವುದು ವಿಶೇಷವಾಗಿ ಕಾಣಿಸುತ್ತಿದೆ. ರೈ ನಿರ್ದೇಶನದ ಚಿತ್ರ ಸೆಪ್ಟೆಂಬರ್‌ನಲ್ಲಿ ಆರಂಭವಾಗಲಿದ್ದು, ಶೇ. 90% ರಷ್ಟು ಭಾಗ ಕರ್ನಾಟಕದಲ್ಲೇ ಚಿತ್ರೀಕರಣಗೊಳ್ಳಲಿದೆಯಂತೆ. ಹಾಗೆಯೇ ಸುರೇಶ್ ನಿರ್ಮಾಣದ ಹಿಂದಿ ಚಿತ್ರ ಕೂಡ ಸರಿಸುಮಾರಿಗೆ ಅಕ್ಟೋಬರ್ ತಿಂಗಳಲ್ಲಿ ಆರಂಭವಾಗಲಿದೆಯಂತೆ. ಈ ಚಿತ್ರದಲ್ಲಿ ಅನೇಕ ಹಾಡುಗಳಿರುತ್ತವೆ ಎಂದಷ್ಟೆ ಗುಟ್ಟು ಬಿಟ್ಟು ಕೊಟ್ಟಿರುವ ಸುರೇಶ್ ನಾಲ್ಕು ಹಾಡುಗಳಿಗೆ ಕನ್ನಡದ ಹರಿಕೃಷ್ಣ ಸಂಗೀತ ಸಂಯೋಜನ ಮಾಡಲಿದ್ದು ಇನ್ನುಳಿದ ಹಾಡುಗಳನ್ನು ಹಿಂದಿಯ ಸ್ನೇಹಾ ಎಂಬಾಕೆ ನಿರ್ದೇಶಿಸಲಿದ್ದಾರೆ ಎಂದು ಹೇಳಿದ್ದಾರೆ.

ಕನ್ನಡದ ಇಬ್ಬರು ಈ ಪ್ರತಿಭಾವಂತರು, ಕ್ರಿಯಾಶೀಲರು ಮತ್ತು ಹೊಸತನಕ್ಕೆ ಸ್ಪಂದಿಸುವ ಮನಸ್ಸುಳ್ಳವರು. ಇವರಿಬ್ಬರು ತಮ್ಮ ವೃತ್ತಿ ಬದುಕಿನಲ್ಲಿ ರಂಗಭೂಮಿಯಿಂದ ಪ್ರಯಾಣ ಹೊರಟು, ಟಿವಿ ಲೋಕದಲ್ಲಿ ಮಿಂಚಿ, ಕಲಾತ್ಮಕ ಚಿತ್ರಗಳನ್ನು ದಾಟಿ, ಕಮರ್ಷಿಯಲ್ ಚಿತ್ರದಲ್ಲೂ ಸೈ ಎನ್ನಿಸಿಕೊಂಡವರು. ಇವರಿಬ್ಬರಿಗೂ ಹೊಸ ಯೋಜನೆಗಳಲ್ಲಿ ಯಶಸ್ಸು ಸಿಗಲಿ ಎಂದು ಆಶಿಸುತ್ತೇವೆ. ●



ಪುನೀತ್‌ರ ಮೈತ್ರಿ




ಪುನೀತ್ ರಾಜ್‌ಕುಮಾರ್ ಮತ್ತು ಮಲೆಯಾಳಂ ಚಿತ್ರರಂಗದ ಸೂಪರ್ ಸ್ಟಾರ್ ಮೋಹನ್ ಲಾಲ್ ನಟಿಸುತ್ತಿ... ಚಿತ್ರಕ್ಕೆ 'ಮೈತ್ರಿ' ಎಂದು ಹೆಸರಿಡಲಾಗಿದೆ. ಈ ಚಿತ್ರವನ್ನು ಯುವ ನಿರ್ದೇಶಕ ಗಿರಿರಾಜ್ ನಿರ್ದೇಶಿಸುತ್ತಿದ್ದು 'ಮ... ಚಿತ್ರದ ನಿರ್ಮಾಪಕ ವಜ್ರೇಶ್ವರಿ ರಾಜ್‌ಕುಮಾರ್ ನಿರ್ಮಿಸುತ್ತಿದ್ದಾರೆ.

ಮೋಹನ್ ಲಾಲ್ ಅವರೇ ಈ ಚಿತ್ರದಲ್ಲಿ ಮುಖ್ಯ ಪಾತ್ರಧಾರಿಯಾಗಿದ್ದು ಇಡೀ ಚಿತ್ರದ ಕಥೆಯನ್ನು ... ಸುತ್ತಲೇ ಹೆಣೆಯಲಾಗಿದೆಯಂತೆ. ಅಷ್ಟೇ ಅಲ್ಲ, ಈ ಚಿತ್ರದಲ್ಲಿ ಪುನೀತ್ ಅವರದ್ದು ಒಂದು ಸಣ್ಣ ಪಾತ್ರ ಮ... ಹಾಗಾದರೆ ಪುನೀತ್ ಈ ಚಿತ್ರದಲ್ಲಿ ಯಾಕೆ ನಟಿಸಲು ಒಪ್ಪಿದರೆಂಬ ಪ್ರಶ್ನೆ ಅವರ ಅಭಿಮಾನಿಗಳನ್ನು ಕಾಡುತ್ತದೆ. ... ಪ್ರಶ್ನೆಗೆ ಉತ್ತರ ತುಂಬಾ ಸರಳವಾದದ್ದು. ಅದೇನೆಂದರೆ 'ಮೈನಾ' ಚಿತ್ರದಿಂದಾಗಿ ಸಾಕಷ್ಟು ನಷ್ಟ ಅನುಭವಿಸಿದ ... ಮಿತ್ರ ರಾಜ್‌ಕುಮಾರ್ ಅವರಿಗೆ ಸಹಾಯ ಮಾಡುವ ಉದ್ದೇಶದಿಂದಲೇ ಪುನೀತ್ ಈ ಚಿತ್ರವನ್ನು ಒಪ್ಪಿಕೊಂಡಿ... ಎಂದು ಇಡೀ ಗಾಂಧಿನಗರ ಹೇಳುತ್ತಿದೆ.

ಕನ್ನಡ ಚಿತ್ರರಂಗದ ಪ್ರಮುಖ ನಾಯಕ ನಟರು ಈ ತರಹ ಸಣ್ಣಪುಟ್ಟ ಪಾತ್ರಗಳಲ್ಲಿ ನಟಿಸುವ ಮ... ನಿರ್ಮಾಪಕರಿಗೆ ಸಹಾಯ ಮಾಡುವ ಹವ್ಯಾಸವನ್ನು ಬೆಳೆಸಿಕೊಂಡರೆ ಕನ್ನಡ ಚಿತ್ರರಂಗದಲ್ಲಿ ಇನ್ನು ಒಳ್ಳೇ... ಪ್ರಾಜೆಕ್ಟ್‌ಗಳು ಬರಲು ಸಹಾಯವಾಗುತ್ತದೆ. ಪುನೀತ್‌ಗೆ ಅಭಿನಂದನೆಗಳು.

ನಿರ್ದೇಶಕ ಸುನಿಗೆ ಬಹುಪರಾಕ್

'ಸಿಂಪಲ್ಲಾಗ್ ಒಂದ್ ಲವ್ ಸ್ಟೋರಿ' ಚಿತ್ರದ ನಿರ್ದೇಶಕ ಸುನಿ ಈಗ ತಮ್ಮ ಎರಡನೇ ಚಿತ್ರ... ಕೈಗೆತ್ತಿಕೊಂಡಿದ್ದಾರೆ. ಈ ಚಿತ್ರದ ಹೆಸರು 'ಬಹುಪರಾಕ್'. ಇದರ ನಾಯಕ ಶ್ರೀನಗರ ಕಿಟ್ಟಿ.

ಇದಕ್ಕಿಂತ ಮುಖ್ಯವಾದ ಸಂಗತಿ ಯಾವುದೆಂದರೆ ತನ್ನ ಕಷ್ಟ ಕಾಲದಲ್ಲಿ ತನಗೆ ಸ್ನೇಹ ಹಸ್ತ ಚಾಚಿದವರ... ಈಗ ತನ್ನ ಜೊತೆಗೂಡಿಸಿಕೊಂಡು, ಒಂದು ರೀತಿಯಲ್ಲಿ ಥ್ಯಾಂಕ್ಸ್ ಹೇಳುವ ಮಾದರಿಯಲ್ಲಿ, ಈ ಸಿನಿಮಾ... ಸುನಿ ಮಾಡಲು ಹೊರಟಿರುವುದು.

ಉದಾಹರಣೆಗೆ 'ಸಿಂಪಲ್ಲಾಗ್ ಒಂದ್ ಲವ್ ಸ್ಟೋರಿ' ಚಿತ್ರದಲ್ಲಿನ ಒಂದು ಅತಿಥಿ ಪಾತ್ರಕ್ಕಾಗಿ ಸುನಿ ಅ... ಗಾಂಧಿನಗರದ ಎಲ್ಲ ನಾಯಕ ನಟರ ಮನೆ ಬಾಗಿಲು ಬಡಿದಿದ್ದರಂತೆ. ಆದರೆ ಆಗ ಅವರ್‍ಯಾರೂ ಈತನ ... ಕೇರ್ ಮಾಡಿರಲಿಲ್ಲ. ಕೊನೆಗೆ ನಾಯಕ ನಟ ಶ್ರೀನಗರ ಕಿಟ್ಟಿ ಮಾತ್ರ ಯಾವುದೇ ಸಂಭಾವನೆ ಪಡೆಯದ... ಪುಟ್ಟ ಪಾತ್ರದಲ್ಲಿ ಕಾಣಿಸಿಕೊಂಡು ಸುನಿಗೆ ಬೆಂಬಲ ನೀಡಿದ್ದರು.



ಅದೇ ರೀತಿ ದಿನೇಶ್ ಬಾಬುರವರ ಜೊತೆಗೆ ಸುನಿ ಕೆಲಸ ಮಾಡುತ್ತಿದ್ದಾಗ ಕ್ಯಾಮರಾಗಳ ಬಗ್ಗೆ ಸಂಪೂರ್ಣವಾಗಿ ಮಾಹಿತಿ ನೀಡಿದ್ದು ಛಾಯಗ್ರಾಹಕ ಸುರೇಶ್ ಬೈರಸಂದ್ರ. ಅಂದು ಬೈರಸಂದ್ರ ಅದರಿಂದ ಸ್ಫೂರ್ತಿಗೊಂಡೇ ಸುನಿ ನಿರ್ದೇಶನದ ಕಡೆಗೆ ಒಲವು ಹರಿಸಿದ್ದರು. ಅದೇ ಹೊತ್ತಿನಲ್ಲಿ ಸುನಿಗೆ ಒಂದಿಷ್ಟು ಕೆಲಸ ಮಾಡಲು ಅವಕಾಶ ಮಾಡಿ ಅವರಿಗೆ ಆರ್ಥಿಕ ಸಹಾಯ ಮಾಡಿಕೊಟ್ಟವರು ನಿರ್ಮಾಪಕ ಉಮೇಶ್ ಬಣಕಾರ್.

ಸಿಂಪಲ್ಲಾಗ್ ಒಂದ್ ಲವ್ ಸ್ಟೋರಿ ಚಿತ್ರ ಸೂಪರ್‌ಹಿಟ್ ಆದ ನಂತರ ಎಲ್ಲಾ ಬದಲಾಯಿತು. ಒಂದು ಕಡೆ ಗಾಂಧಿನಗರದ ಸುಮಾರು



20ಕ್ಕೂ ಹೆಚ್ಚು ನಿರ್ಮಾಪಕರು ಸುನಿಗೆ ಫೋನ್ ಮಾಡಿ ಅವರ ಎರಡನೇ ಚಿತ್ರ... ನಿರ್ಮಿಸುವ ಆಸಕ್ತಿ ತೋರಿಸಿದ್ದಾರೆ. ಇನ್ನೊಂದು ಕಡೆ 15-20 ದೊಡ್ಡ ದೊಡ್ಡ ... ನಟಿಯರೂ ಆತನ ಸಿನಿಮಾದಲ್ಲಿ ನಟಿಸುವ ಬಗ್ಗೆ ಅತ್ಯುತ್ಸಾಹ ತೋರಿಸುತ್ತಿದ್ದಾರೆ. ... ಅವರ್‍ಯಾರಿಗೂ ಕೇರ್ ಮಾಡದ ಸುನಿ ಈಗ ತನಗೆ ಸಹಾಯ ಮಾಡಿದವರನ್ನು ನೆನೆಸಿಕೊ... ಸಿನಿಮಾ ಮಾಡಲು ಹೊರಟಿದ್ದಾರೆ.

ಹಾಗಾಗಿ 'ಬಹುಪರಾಕ್' ಚಿತ್ರವನ್ನು ಉಮೇಶ್ ಬಣಕಾರ್, ಸುರೇಶ್ ಬೈರ... ಸುನಿ ಮತ್ತು ಹೇಮಂತ್ ಹೀಗೆ ನಾಲ್ಕು ಜನ ಪಾಲುದಾರಿಕೆಯಲ್ಲಿ ಮಾಡುತ್ತಿ... ಕೋಟಿ ಕೋಟಿ ಲಾಭ ಪಡೆದರೂ ಸುನಿ ಇನ್ನೂ 'ಸಿಂಪಲ್ಲಾಗ್' ಇರುವುದು ನಿ... ಸ್ವಾಗತಾರ್ಹ. ●

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com